ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

22 ಆಗಸ್ಟ್, 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -160 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಭಾರತದ ಜಾವೆಲಿನ್ ಥ್ರೋ ಅಥ್ಲೀಟ್ ಶಿವಪಾಲ್ ಸಿಂಗ್ ಅವರಿಗೆ ರಾಷ್ಟ್ರೀಯ ಉದ್ದೀಪನ ಮದ್ದು ನಿಗ್ರಹ ಘಟಕ (ನಾಡಾ) 10 ವರ್ಷಗಳ ಕಾಲ ನಿಷೇಧ ವಿಧಿಸಿದೆ.






ಭೂಮಿಯಲ್ಲಿ ಜೀವಚೇತನದ ಮೂರು ವಿವರಿಸಲಾಗದ ನಿಗೂಢಗಳು » 2



ಶೀಘ್ರ ಮಲೆನಾಡು ಪ್ರವಾಸೋದ್ಯಮ ನೀತಿ ಕರಡು » 3



500 ಕೆಪಿಎಸ್ ಶಾಲೆ ಅಭಿವೃದ್ಧಿಗೆ 1,750 ಕೋಟಿ » 4


# ನೋಟೀಸ್ ನೀಡಿ ಚರ್ಚೆಗೆ ಬನ್ನಿ: ಸಿ.ಎಂ. ಚಾಟಿ

## ಸಚಿವ ಬಿ.ನಾಗೇಂದ್ರ ಬೆನ್ನಿಗೆ ನಿಂತ ಡಿ.ಕೆ.ಶಿವಕುಮಾರ್ | ರಾಜೀನಾಮೆಗೆ ಕಾರಣ ಕೇಳಿದ ಸರ್ಕಾರ

• ಪ್ರಜೋದಯ ವರದಿ

**ಬೆಂಗಳೂರು:** ಸಚಿವ ಬಿ.ನಾಗೇಂದ್ರ ಅವರಿಂದ ಇಂತಹ ಕಾರಣಕ್ಕೆ ರಾಜೀನಾಮೆ ಕೇಳುತ್ತಿದ್ದೇವೆಂದು ವಿಪಕ್ಷಗಳು ಹೋರಾಟ ಮಾಡಿದರೆ ಅದಕ್ಕೆ ಅರ್ಥವಿರುತ್ತದೆ. ನೋಟೀಸ್ ನೀಡದೇ, ಸದನದ ಬಾವಿಗೂ ಬರದೇ ರಾಜೀನಾಮೆ ಕೊಡಿ ಎಂದರೆ ಅರ್ಥವಿದೆಯೇ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರತಿ ಪಕ್ಷಗಳ ನಡೆಗೆ ಚಾಟಿ ಬೀಸಿದರು.

ವಿಧಾನ ಪರಿಷತ್ತಿನಲ್ಲಿ ಶುಕ್ರವಾರ ಪ್ರತಿಪಕ್ಷಗಳ ನಡೆಗೆ ಆಕ್ಷೇಪ ವ್ಯಕ್ತಪಡಿಸಿದ ಅವರು, ಪ್ರತಿ ಪಕ್ಷದವರೂ ಸಾಂವಿಧಾನಿಕ ಹುದ್ದೆಯಲ್ಲಿ ಇರುವವರು. ಯಾರೂ ಸರಿಯಾಗಿ ಚರ್ಚೆ ಮಾಡದೇ ಮುಂದುವರೆಯುವುದು ಸರಿಯಲ್ಲ. ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಪಕ್ಷಗಳ ಹೋರಾಟಕ್ಕೆ ನಮ್ಮ ತಕರಾರಿಲ್ಲ. ನಾನು ಈ ಹಿಂದೆ ಪಕ್ಷದ ಅಧ್ಯಕ್ಷನಾಗಿದ್ದಾಗ ಸಚಿವ ನಾಗೇಂದ್ರ ಅವರ ಬಳಿ ತೆರಳಿ ತನಿಖೆಯಾಗಲಿ ಎಂದು ರಾಜೀನಾಮೆ ಪಡೆದಿದ್ದೆ. ಆ ನಂತರ ಸರ್ಕಾರ ತನಿಖೆ ನಡೆಸಿದೆ. ಈಗ ಮತ್ತೆ ರಾಜೀನಾಮೆ ಕೇಳುತ್ತಿದ್ದಾರೆ. ರಾಜೀನಾಮೆ ಕೇಳುವುದಕ್ಕೂ ಒಂದು ಮಾರ್ಗವಿದೆ. ವಿಪಕ್ಷಗಳು ಚರ್ಚೆ ನಡೆಸಲು ನೋಟೀಸ್ ನೀಡಿ ಅದರಂತೆ ನಡೆಯಲಿ ಎಂದು ಆಗ್ರಹಿಸಿದರು.



**ವಿಪಕ್ಷಗಳು ಏನೇನು ಕಂಡು ಹಿಡಿದಿದ್ದೀರಿ**

ನಾಗೇಂದ್ರ ಅವರು ಏಕೆ ರಾಜೀನಾಮೆ ನೀಡಬೇಕು ಎಂಬುದನ್ನು ವಿಪಕ್ಷ ನಾಯಕರು ಸ್ಪಷ್ಟಪಡಿಸಬೇಕು. ಸಿಬಿಐ, ಇಡಿ, ಎಸ್ಐಟಿ ಅವರು ಏನು ಮಾಹಿತಿ ಕೊಟ್ಟರು ಎಂಬುದನ್ನು ಸದನದ ಮೂಲಕ ಜನರಿಗೆ ತಿಳಿಸಲಿ. ಇಡೀ ದಿನ ಬೇರೆ ವಿಚಾರಗಳನ್ನು ತೆಗೆದುಕೊಳ್ಳದೇ ಇದನ್ನೇ ಚರ್ಚೆ ಮಾಡಬಹುದು ಎಂದರು.

ವಿಪಕ್ಷಗಳು ಅವಕಾಶ ನೀಡಿದರೆ ಏಕೆ ನಾಗೇಂದ್ರ ಅವರನ್ನು ನಾನು ಸಂಪುಟಕ್ಕೆ ಸೇರಿಸಿಕೊಂಡೆ ಎಂದು ಖಂಡಿತವಾಗಿ ತಿಳಿಸುತ್ತೇನೆ. ಅದಕ್ಕೂ ವಿಪಕ್ಷಗಳು ಸಮಾಧಾನವಾಗದೇ ಇದ್ದರೆ ಪ್ರತಿಭಟನೆ ಮುಂದು ವರೆಸಲಿ. ಚರ್ಚೆಯನ್ನೇ ನಡೆಸದೇ ನಾಗೇಂದ್ರ ಭ್ರಷ್ಟರು, ರಾಹುಲ್ ಗಾಂಧಿ ಮನೆಗೆ ಹಣ ಹೋಯಿತು. ಡಿ.ಕೆ.ಶಿವಕುಮಾರ್ ಸರ್ಕಾರ ಭ್ರಷ್ಟ ಸರ್ಕಾರ ಎಂದು ಹೇಳುವುದು ಸಮಂಜಸವೇ ಎಂದು ಕಿಡಿಕಾರಿದರು.

ವಿಪಕ್ಷಗಳ ಎಲ್ಲಾ ಪ್ರಶ್ನೆ, ಅನುಮಾನ, ಗೊಂದಲಗಳಿಗೆ ಉತ್ತರ ನೀಡುತ್ತೇನೆ. ಯಾವ ಕೇಂದ್ರ ಸಚಿವರು, ರಾಜ್ಯದ ಸಚಿವರ ಮೇಲೆ ಏನೇನು ಪ್ರಕರಣಗಳು ನಡೆದವು, ಹೇಗೆ ತನಿಖೆ ನಡೆಯಿತು ಎಂದು ಅವರ ಹೆಸರು ಹೇಳಿದರೆ ನಿಮಗೆ ಬೇಸರವಾಗುತ್ತದೆಂದು ಶಿವಕುಮಾರ್ ಬಿಜೆಪಿ ಸದಸ್ಯರ ಕಾಲೆಳೆದರು.

**ತಾರ್ಕಿಕ ಅಂತ್ಯಕ್ಕೆ ಹೋರಾಟ**

ಸಚಿವ ಬಿ.ನಾಗೇಂದ್ರ ಅವರು ಅಮಾಯಕರು ಹಾಗು ಅವರ ವಿರುದ್ಧ ಯಾವುದೇ ಆರೋಪವಿಲ್ಲ ಎಂದು ಸರ್ಕಾರ ಸಮರ್ಥಿಸುತ್ತಿದೆ. 187 ಕೋಟಿ ರೂ. ಹಗರಣ ನಡೆಸಿರುವುದಕ್ಕೆ ಸೂಕ್ತ ದಾಖಲೆಗಳನ್ನು ನಾನೇ ನೀಡಿದ್ದೇನೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಪಿ.ಚಂದ್ರಶೇಖರನ್ ಸಚಿವರ ಆದೇಶದ ಮೇರೆಗೆ ಹಣ ವರ್ಗಾವಣೆ ಮಾಡಿದ್ದೇನೆಂದು ಆತ್ಮಹತ್ಯೆ ಪತ್ರದಲ್ಲಿ ಬರೆದಿದ್ದರು. 40 ಕೋಟಿ ರೂ. ವರ್ಗಾವಣೆ ಮಾಡಿರುವ ಬಗ್ಗೆ ದಾಖಲೆಗಳಿವೆ. ವಾಲ್ಮೀಕಿ ನಿಗಮದಲ್ಲಿ 50 ಕೋಟಿ ರೂ. ಹಣ ಠೇವಣಿ ಇಟ್ಟು, ಪ್ರತ್ಯೇಕವಾಗಿ ಸಾಲ ಪಡೆಯಲಾಗಿದೆ. ಕಳ್ಳತನ ಮಾಡಲು ಹೊಸ ಸ್ಕೀಮ್‌ಗಳನ್ನು ಮಾಡಿ, ತೆಲಂಗಾಣಕ್ಕೆ ಹಣ ಕಳುಹಿಸಿರುವ ದಾಖಲೆಗಳನ್ನು ಬಹಿರಂಗ ಮಾಡಿದ್ದೇನೆಂದು ವಿರೋಧ ಪಕ್ಷದ ನಾಯಕಆರ್.ಅಶೋಕ್ ಸರ್ಕಾರದ ವಿರುದ್ಧ ಕಿಡಿಕಾರಿದರು.

### ಮಾರ್ಷಲ್‌ಗಳ ಜೊತೆ ಜಟಾಪಟಿ

ಸಚಿವ ಬಿ.ನಾಗೇಂದ್ರ ಅವರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಮತ್ತು ಜೆಡಿಎಸ್ ಶಾಸಕರು ವಿಧಾನಸೌಧದ ಬಳಿ ಮೆರವಣಿಗೆ ನಡೆಸಿದರು. ಬಳಿಕ ಕಪ್ಪು ಬಣ್ಣದ ಟಿ-ಶರ್ಟ್ ಧರಿಸಿ ವಿಧಾನ ಸಭೆ ಪ್ರವೇಶಿಸಲು ಮುಂದಾದ ಪ್ರತಿಭಟನಾಕಾರರನ್ನು ಮಾರ್ಷಲ್‌ಗಳು ತಡೆದರು. ಸದನ ದೊಳಗೆ ಕಪ್ಪು ಟಿ-ಶರ್ಟ್ ಧರಿಸುವುದಕ್ಕೆ ನಿಷೇಧವಿದೆ ಎಂದು ಮಾರ್ಷಲ್‌ಗಳು ತಿಳಿಸಿದರು. ಅದಕ್ಕೆ ಶಾಸಕರು ಆಕ್ಷೇಪ ವ್ಯಕ್ತಪಡಿಸಿ ಮಾರ್ಷಲ್‌ಗಳೊಂದಿಗೆ ವಾಗ್ವಾದ ನಡೆಸಿದರು. ಬಳಿಕ ಮಾರ್ಷಲ್‌ಗಳ ಪಡೆಯನ್ನು ಭೇದಿಸಿ ವಿಧಾನ ಸಭೆಯೊಳಗೆ ನುಗ್ಗಿದರು. ವಿಧಾನಮಂಡಲದ ಎರಡೂ ಸದನಗಳನ್ನು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಕಾರ್ಯ ನಿರ್ವಹಿಸದಂತೆ ತಡೆಯುತ್ತಿದ್ದಾರೆಂದು ಆರೋಪಿಸಿ ಕಾಂಗ್ರೆಸ್ ಶಾಸಕರು ವಿಧಾನಸಭೆ ಆವರಣ ದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಯ ಮುಂದೆ ಪ್ರತಿಭಟನೆ ನಡೆಸಿದರು.

# ವಿಪಕ್ಷಗಳ ಸಹಕಾರ ಕೋರಿದ ಸಂಸದ ಶ್ರೇಯಸ್

• ಪ್ರಜೋದಯ ವರದಿ

**ಅರಸೀಕೆರೆ:** ಭೀಕರ ಬರಗಾಲ, ತಮಿಳುನಾಡಿಗೆ ನೀರು ಹರಿಸಲೇ ಬೇಕೆಂಬ ಒತ್ತಡದಲ್ಲಿರುವ ಸಂದರ್ಭದಲ್ಲಿ ಪ್ರತಿಪಕ್ಷಗಳು ಸದನದಲ್ಲಿ ವಿನಾ ಕಾರಣ ಗಲಾಟೆ ಮಾಡದೆ ಸರ್ಕಾರಕ್ಕೆ ಬೆಂಬಲ ವಾಗಿ ನಿಲ್ಲಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, ಬರಗಾಲ ದಿಂದಾಗಿ ಜಿಲ್ಲೆಯಲ್ಲಿ ಶೇ.70 ರಷ್ಟು ರೈತರು ಬಿತ್ತನೆ ಮಾಡಿಲ್ಲ. ಕುಡಿಯುವ ನೀರಿನ ಸಮಸ್ಯೆ, ಬೆಳೆಗಳಿಗೆ ರೋಗದ ಸಮಸ್ಯೆ ಇದೆ. ಇದರ ನಡುವೆ ಕಾವೇರಿ ವಿವಾದ ಶುರುವಾಗಿದೆ. ಇಂತಹ ಸಂದರ್ಭದಲ್ಲಿ ವಿಪಕ್ಷಗಳು ಸರ್ಕಾರಕ್ಕೆ ಸಹಕಾರ ಕೊಡಬೇಕು. ಅದನ್ನು ಬಿಟ್ಟು ಅಧಿವೇಶನ ನಡೆಸಲು ಬಿಜೆಪಿ-ಜೆಡಿಎಸ್ ಬಿಡದೇ ಇರುವುದು ಖಂಡನೀಯ. ಈ ಮೂಲಕ ಎರಡೂ ಪಕ್ಷಗಳು ಜನರ ಭಾವನೆಗೆ ಧಕ್ಕೆ ತರುವ ಕೆಲಸ ಮಾಡುತ್ತಿವೆ. ಇದು ರಾಜ್ಯದ ಜನರ ಮೇಲೆ ಉಭಯ ಪಕ್ಷಗಳು ಇಟ್ಟಿರುವ ಅಸಡ್ಡೆ ತೋರಿಸುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಆರೋಗ್ಯಕರ ಚರ್ಚೆ ಆಗಲಿಲ್ಲ**

20 ದಿನಗಳ ಸಂಸತ್ ಅಧಿವೇಶನದಲ್ಲಿ ಕೇಂದ್ರ ಸರ್ಕಾರ ಒಂದೇ ಒಂದು ದಿನ ಆರೋಗ್ಯಕರ ಚರ್ಚೆಗೆ ಅವಕಾಶ ಮಾಡಿಕೊಡಲಿಲ್ಲ. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿ ಬಡ ಹಾಗು ಪ್ರತಿಭಾವಂತ ವಿದ್ಯಾರ್ಥಿಗಳ ಜೊತೆ ಕೇಂದ್ರ ಚೆಲ್ಲಾಟ ಆಡಿತು ಎಂದರು.

ಕೇಂದ್ರದ ನಡೆ ವಿರುದ್ಧ ಪ್ರತಿಭಟನೆಗಿಳಿದ ವಿದ್ಯಾರ್ಥಿಗಳ ಮೇಲೆ ಪೊಲೀಸರಿಂದ ಹಲ್ಲೆ ಮಾಡಿಸಿ ಅಮಾನವೀಯವಾಗಿ ನಡೆದುಕೊಂಡಿತು. ಇದರ ಬಗ್ಗೆ ಸದನದಲ್ಲಿ ಮಾಹಿತಿ ಕೊಡಿ ಹಾಗು ಚರ್ಚೆಗೆ ಅವಕಾಶ ಕೊಡಿ ಎಂದು ನಾವು ಕೇಳಿದೆವು. ಆದರೆ ಅವರು ಸ್ಪಂದಿಸಲಿಲ್ಲ. ಚರ್ಚೆಗೂ ಒಪ್ಪಲಿಲ್ಲ. ಗೃಹ ಸಚಿವರು ಸದನದಲ್ಲಿ ಉತ್ತರ ಕೊಡಬೇಕೆಂಬ ನಮ್ಮ ಆಗ್ರಹಕ್ಕೂ ಅವರು ಬೆಲೆ ನೀಡಲಿಲ್ಲವೆಂದರು.

ವಂದೇ ಭಾರತ್ ರೈಲನ್ನು ಅರಸೀಕೆರೆ ಇಲ್ಲವೇ ಬೀರೂರಿನಲ್ಲಿ ನಿಲುಗಡೆ ಮಾಡಬೇಕು ಎಂಬ ತಮ್ಮ ಮನವಿಗೆ ಕೇಂದ್ರ ರೈಲ್ವೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಭದ್ರಾ ಮೇಲ್ದಂಡೆ ವಿಚಾರದಲ್ಲಿ ಈಗಿನ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರೇ 5300 ಕೋಟಿ ರೂ. ನೀಡುವ ಘೋಷಣೆ ಮಾಡಿದ್ದರು. ಆದರೆ ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ. ಕಾಂಗ್ರೆಸ್‌ನ 9 ಸಂಸದರು, ಸಿಎಂ ಡಿ.ಕೆ. ಶಿವಕುಮಾರ್ ಮನವಿ ಮಾಡಿದರೂ ಹಣ ಬಿಡುಗಡೆ ಮಾಡದೇ ಇರುವುದು ರೈತರ ಮೇಲೆ ಕೇಂದ್ರಕ್ಕೆ ಇರುವ ಧೋರಣೆ ತೋರಿಸುತ್ತದೆಂದರು.



# ಜಿಲ್ಲೆಯಲ್ಲಿ 134 ಮಕ್ಕಳು ಶಾಲೆಯಿಂದ ದೂರ

## 29 ವಿದ್ಯಾರ್ಥಿಗಳಷ್ಟೇ ವಾಪಾಸ್ | ಬೇಲೂರಿನಲ್ಲಿ 40 ಮಕ್ಕಳು ಗೈರು

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪುನ: ಶಾಲೆಗೆ ಕರೆತರುವ ಪ್ರಯತ್ನಕ್ಕೆ ಜಿಲ್ಲೆಯಲ್ಲಿ ನಿರೀಕ್ಷಿತ ಫಲಿತಾಂಶ ದೊರೆತಿಲ್ಲ.

2025-26ನೇ ಸಾಲಿನಲ್ಲಿ ಒಟ್ಟು 134 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಶಿಕ್ಷಕರ ಮನವೊಲಿಕೆ, ಮನೆ ಭೇಟಿ ಬಳಿಕ 29 ವಿದ್ಯಾರ್ಥಿಗಳಷ್ಟೇ ನಿತ್ಯ ಶಾಲೆಗೆ ಬರುತ್ತಿದ್ದು, ಇನ್ನು 105 ಮಕ್ಕಳು ಹಾಜರಾಗಿಲ್ಲ. ಶಾಲೆ ಬಿಟ್ಟವರಲ್ಲಿ 84 ಗಂಡು ಹಾಗು 48 ಹೆಣ್ಣು ಮಕ್ಕಳಿದ್ದಾರೆ. ಮುಖ್ಯ ವಾಹಿನಿಗೆ ಬಂದವರಲ್ಲಿ 12 ಬಾಲಕಿಯರು ಮತ್ತು 17 ಬಾಲಕರಿದ್ದಾರೆ.

ಶಾಲೆಯಿಂದ ಹೊರಗುಳಿದವರಲ್ಲಿ ಆಲೂರು ತಾಲ್ಲೂಕಿನ 22, ಅರಕಲಗೂಡು 2, ಅರಸೀಕೆರೆ 4, ಬೇಲೂರಿನಲ್ಲಿ ಅಧಿಕ 40, ಚನ್ನರಾಯಪಟ್ಟಣ 15, ಹಾಸನ 26, ಹೊಳೆನರಸೀಪುರ 25 ಹಾಗು ಸಕಲೇಶಪುರದಲ್ಲಿ 0 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ.

**ನಿರಂತರ ಸಮೀಕ್ಷೆ**

ಪ್ರತಿ ಮಗು ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕಾಗಿರುವುದರಿಂದ ಶಾಲೆಯಿಂದ ಯಾರೂ ಅಕ್ಷರ ಕಲಿಕೆಯಿಂದ ದೂರ ಉಳಿಯಬಾರದೆಂದು ಶಿಕ್ಷಣ ಇಲಾಖೆ ಪ್ರತಿವರ್ಷ ಸಮೀಕ್ಷೆ ನಡೆಸಿ ಶಾಲೆಗೆ ಕರೆತರುವ ಪ್ರಯತ್ನ ಮಾಡುತ್ತದೆ. ವಿದ್ಯಾ ವಾಹಿನಿ ಯೋಜನೆಯಡಿ ಶಾಲಾ ಶಿಕ್ಷಕರು ತಮ್ಮ ವ್ಯಾಪ್ತಿಯಲ್ಲಿ ಮನೆ ಮನೆಗೆ ತೆರಳಿ ಶಾಲೆ ಬಿಟ್ಟ ಮಕ್ಕಳ ವಿವರ ಸಂಗ್ರಹಿಸಿ ಅವರನ್ನು ಪುನ: ಕರೆತರುವ ಕೆಲಸ ಮಾಡುತ್ತಾರೆ. ಆದರೆ ಈ ವರ್ಷ ಪುನ: ಶಾಲೆಗೆ ಬಂದ ಮಕ್ಕಳ ಸಂಖ್ಯೆ ತೀರಾ ಕಡಿಮೆ ಇದೆ.

**ಶಾಲೆ ಬಿಡಲು ವಲಸೆ ಕಾರಣ**

ಹಾಸನ ಜಿಲ್ಲೆಯಲ್ಲಿ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಲು ವಲಸೆಯೇ ಪ್ರಮುಖ ಕಾರಣ ಎನ್ನಲಾಗಿದೆ. ಬೇಲೂರು ಭಾಗದಲ್ಲಿ 40 ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಕಾಫಿ ತೋಟಗಳಲ್ಲಿ ಕೂಲಿ ಕಾರ್ಮಿಕರಾಗಿ ಬರುವ ಅಸ್ಸಾಂ, ಒರಿಸ್ಸಾ ಮೂಲದ ಕಾರ್ಮಿಕರು ಕೆಲವೇ ದಿನಗಳಲ್ಲಿ ತಮ್ಮ ರಾಜ್ಯ ಅಥವಾ ಬೇರೆ ಜಿಲ್ಲೆಗಳಿಗೆ ವಲಸೆ ಹೋಗುತ್ತಾರೆ. ಹೀಗಾಗಿ ಮಕ್ಕಳ ವಿದ್ಯಾಭ್ಯಾಸಕ್ಕೆ ಹೊಡೆತ ಬೀಳುತ್ತಿದೆ. ಸಕಲೇಶಪುರ ತಾಲ್ಲೂಕಿನಲ್ಲಿ 70 ವಿದ್ಯಾರ್ಥಿಗಳು ಹೊರ ರಾಜ್ಯದವರಿದ್ದು ಅವರೆಲ್ಲರೂ ಶಾಲೆಗೆ ನಿಯಮಿತವಾಗಿ ಹಾಜರಾಗು ತ್ತಿರುವುದು ಆಶಾದಾಯಕ ಬೆಳವಣಿಗೆ. ವಲಸೆ ಕಾರ್ಮಿಕರು ಅಧಿಕ ಸಂಖ್ಯೆಯಲ್ಲಿರುವುದರಿಂದ ಪ್ರತಿ ತಿಂಗಳು ಮಕ್ಕಳ ಸಮೀಕ್ಷೆ ನಡೆಸಲಾಗುತ್ತಿದೆ. ಯಾವ ಮಗು ಕೂಡ ಶಿಕ್ಷಣದಿಂದ ವಂಚಿತ ರಾಗದಂತೆ ನೋಡಿಕೊಳ್ಳಲಾಗುತ್ತಿದೆ. ಬೇಲೂರಿನಲ್ಲಿ ಪರಿಸ್ಥಿತಿ ತದ್ವಿರುದ್ಧವಾಗಿದೆ. ಮಕ್ಕಳು ಶಿಕ್ಷಣದಿಂದ ವಂಚಿತರಾಗಲು ಇನ್ನು ಅನೇಕ ಕಾರಣಗಳಿವೆ. ಪೋಷಕರ ನಿರಾಸಕ್ತಿ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳು ಶಾಲೆಗೆ ಬರಲು ಅಸಡ್ಡೆ ತೋರುವುದು, ಸಾರಿಗೆ ಸಂಪರ್ಕ ಇಲ್ಲದಿರುವುದು ಹೀಗೆ ನಾನಾ ಕಾರಣಗಳಿಂದ ಭವಿಷ್ಯದ ಪ್ರಜೆಗಳು ವ್ಯಾಸಂಗದಿಂದ ದೂರ ಉಳಿಯುತ್ತಿದ್ದಾರೆ.

**ಪಾರದರ್ಶಕ ಸಮೀಕ್ಷೆ ನಡೆಯುತ್ತಿಲ್ಲ**

ಶಾಲಾ ಶಿಕ್ಷಣ ಇಲಾಖೆಯು ಜಿಲ್ಲೆಯಲ್ಲಿ ಕೇವಲ 134 ವಿದ್ಯಾರ್ಥಿಗಳು ಶಾಲೆಯಿಂದ ಹೊರ ಗುಳಿದಿದ್ದಾರೆಂಬ ಮಾಹಿತಿ ನೀಡಿದೆಯಾದರೂ ಅದು ನಿಖರವಲ್ಲ ಎಂಬುದು ಅಷ್ಟೇ ಸತ್ಯ. ಯಾವ ಶಿಕ್ಷಕ, ಸಿಆರ್‌ಪಿಗಳು ತಮ್ಮ ವ್ಯಾಪ್ತಿಯಲ್ಲಿ ಪಾರದರ್ಶಕ ಸಮೀಕ್ಷೆ ಮಾಡುವುದಿಲ್ಲ. ಹೊರ ರಾಜ್ಯದಿಂದ ದುಡಿಮೆ ಅರಸಿ ಬಂದಿರುವ ಅನೇಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿಲ್ಲ. ಸಮೀಕ್ಷೆಗೆ ಹೋದಾಗ ಅಂತಹ ಮಕ್ಕಳು ಸಿಕ್ಕರೂ ಅವರ ಪೋಷಕರ ಮನವೊಲಿಸಿ ಶಾಲೆಗೆ ಕರೆತರುವ ಕೆಲಸವನ್ನು ಯಾರೂ ಮಾಡುವುದಿಲ್ಲ. ಮುತುವರ್ಜಿ ವಹಿಸಿ ಮಕ್ಕಳಿಗೆ ಪ್ರವೇಶ ನೀಡಿದರೆ ಅಂತಹ ಮಕ್ಕಳ ಎಲ್ಲಾ ಜವಾಬ್ದಾರಿಯನ್ನು ಶಾಲೆಯ ಮುಖ್ಯ ಶಿಕ್ಷಕರು ವಹಿಸಿಕೊಳ್ಳ ಬೇಕಾಗುತ್ತದೆ. ಮಗು ಒಂದು ದಿನ ಶಾಲೆಗೆ ಗೈರಾದರು ಅದನ್ನು ಹುಡುಕಿ ಹೋಗಬೇಕಾದ ಸಂದಿಗ್ಧತೆ ಇರುವ ಹಿನ್ನಲೆ ಯಾವ ಶಿಕ್ಷಕರು ಜವಾಬ್ದಾರಿಗೆ ಕೊರಳೊಡ್ಡುತ್ತಿಲ್ಲ. ಹೀಗಾಗಿ ಮಲೆನಾಡು ಭಾಗದ ಕಾಫಿ ತೋಟಗಳಲ್ಲಿ ಮಾತ್ರವಲ್ಲದೆ ಜಿಲ್ಲಾ ಕೇಂದ್ರಗಳಲ್ಲೂ ಅದೆಷ್ಟೋ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆಂದು ಹೆಸರು ಹೇಳಲಿಚ್ಚಿಸದ ಶಿಕ್ಷಕರು ಹೇಳುತ್ತಾರೆ.



### ಪೋಷಕರ ನಿರಾಸಕ್ತಿಯೂ ಕಾರಣ

2025ರ ನವೆಂಬರ್ ಹಾಗು ಡಿಸೆಂಬರ್‌ನಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ ಜಿಲ್ಲೆಯಲ್ಲಿ 134 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಅದರಲ್ಲಿ 29 ವಿದ್ಯಾರ್ಥಿಗಳನ್ನು ಮುಖ್ಯ ವಾಹಿನಿಗೆ ಕರೆತರಲಾಗಿದೆ. ಕೆಲವೆಡೆ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ ಇರುವುದು ಸಮಸ್ಯೆಯಾಗುತ್ತಿದೆ. ಎಲ್ಲಾ ಮಕ್ಕಳಿಗೂ ಕಡ್ಡಾಯ ಶಿಕ್ಷಣ ಲಭ್ಯವಾಗಬೇಕೆಂಬ ಉದ್ದೇಶದಿಂದ ಇಲಾಖೆ ಶ್ರಮ ವಹಿಸುತ್ತಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

## ಅಗ್ನಿ ಪರೀಕ್ಷೆಗೆ ಆಕಾಂಕ್ಷಿಗಳ ಸಿದ್ಧತೆ | ಎಸ್ಐಆರ್ ಬಳಿಕ ಚುನಾವಣೆ ಪ್ರಕ್ರಿಯೆಗೆ ಚಾಲನೆ

# ಗ್ರಾ.ಪಂ. ಮೀಸಲಾತಿ ಪ್ರಕಟ: ಗರಿಗೆದರಿದ ಚಟುವಟಿಕೆ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಗ್ರಾಮ ಪಂಚಾಯಿತಿ ಚುನಾವಣೆಗೆ ಜಿಲ್ಲಾಧಿಕಾರಿ ಕ್ಷೇತ್ರವಾರು ಸದಸ್ಯ ಸ್ಥಾನಗಳ ಸಂಖ್ಯೆ ಹಾಗು ಮೀಸಲಾತಿ ಪ್ರಕಟಿಸುತ್ತಿದ್ದಂತೆಯೇ ಗ್ರಾಮೀಣ ಭಾಗದಲ್ಲಿ ರಾಜಕೀಯ ಚಟು ವಟಿಕೆಗಳು ಗರಿಗೆದರಿವೆ. ಹಲವು ತಿಂಗಳಿಂದ ಚುನಾವಣೆಯ ನಿರೀಕ್ಷೆಯಲ್ಲಿದ್ದ ಆಕಾಂಕ್ಷಿಗಳು ಇದೀಗ ತಮ್ಮ ಕ್ಷೇತ್ರಗಳಲ್ಲಿ ಬೆಂಬಲ ಕ್ರೋಢಿಕರಣಕ್ಕೆ ಮುಂದಾಗುತ್ತಿದ್ದಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಅನ್ವಯ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಜಿಲ್ಲೆಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರದೇಶಗಳನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಭಜಿಸಿ, ಜನಸಂಖ್ಯೆಗೆ ಅನುಗುಣವಾಗಿ ಸದಸ್ಯ ಸ್ಥಾನಗಳನ್ನು ನಿಗದಿಪಡಿಸಿದ್ದಾರೆ. ಅದರಂತೆ ವಿವಿಧ ವರ್ಗಗಳಿಗೆ ಮೀಸಲಾತಿ ಪ್ರಕಟಿಸಿ ಪ್ರತಿ ಗ್ರಾಮ ಪಂಚಾಯಿತಿಗೂ ಅಧಿಸೂಚನೆ ಹೊರಡಿಸಲಾಗಿದೆ.

ಮಹಿಳೆಯರಿಗೆ ಶೇ.50ರಷ್ಟು ಸ್ಥಾನಗಳನ್ನು ಮೀಸಲಿಡುವ ನಿಯಮದಂತೆ ಅನುಸೂಚಿತ ಜಾತಿ, ಪಂಗಡ, ಹಿಂದುಳಿದ ವರ್ಗ-ಎ, ಹಿಂದುಳಿದ ವರ್ಗ-ಬಿ ಹಾಗು ಸಾಮಾನ್ಯ ವರ್ಗದ ಜೊತೆಗೆ ಈ ವರ್ಗಗಳ ಮಹಿಳೆಯರಿಗೂ ಸ್ಥಾನ ಗಳನ್ನು ಮೀಸಲಿಡಲಾಗಿದೆ. » ನಾಲ್ಕನೇ ಪುಟದಲ್ಲಿ



### ಎಸ್ಐಆರ್‌ನಿಂದ ಚುನಾವಣೆ ವಿಳಂಬ

ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್ಐಆರ್) ಕೂಡ ಗ್ರಾಮ ಪಂಚಾಯಿತಿ ಸೇರಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗು ಇತರೆ ಸ್ಥಳೀಯ ಸಂಸ್ಥೆಗಳ ಚುನಾವಣಾ ಪ್ರಕ್ರಿಯೆ ವಿಳಂಬವಾಗಲು ಪ್ರಮುಖ ಕಾರಣವಾಗಿದೆ. ಎಸ್ಐಆರ್ ಪ್ರಕ್ರಿಯೆಯ ಅಂತಿಮ ಮತದಾರರ ಪಟ್ಟಿ ಸೆ.18ರಂದು ಪ್ರಕಟವಾಗುವ ನಿರೀಕ್ಷೆಯಿದೆ. ಮತದಾರರ ಪಟ್ಟಿ ಅಂತಿಮಗೊಂಡ ಬಳಿಕವೇ ಚುನಾವಣಾ ಆಯೋಗದಿಂದ ಮುಂದಿನ ಹಂತದ ಚುನಾವಣಾ ಪ್ರಕ್ರಿಯೆಗಳಿಗೆ ಚಾಲನೆ ದೊರೆಯುವ ಸಾಧ್ಯತೆಯಿದೆ. ಹೀಗಾಗಿ ಸೆಪ್ಟೆಂಬರ್ ನಂತರ ಗ್ರಾಮ ಪಂಚಾಯಿತಿ ಚುನಾವಣೆಯ ಅಧಿಸೂಚನೆ, ನಾಮಪತ್ರ ಸಲ್ಲಿಕೆ, ಪರಿಶೀಲನೆ ಹಾಗೂ ಮತದಾನ ಸೇರಿ ಹಂತ ಹಂತದ ಪ್ರಕ್ರಿಯೆ ಆರಂಭವಾಗಬಹುದು.

### ಅಕ್ಟೋಬರ್-ನವೆಂಬರ್ ನಲ್ಲಿ ಚುನಾವಣೆ

ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ನಡೆಸುವ ನಿಟ್ಟಿನಲ್ಲಿ ಸರ್ಕಾರ ಸಿದ್ಧತೆ ನಡೆಸುತ್ತಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಅವರು ಚುನಾವಣೆಗಳನ್ನು ನಡೆಸುವ ಕುರಿತು ಈಗಾಗಲೇ ಸುಳಿವು ನೀಡಿದ್ದಾರೆ. ಮತದಾರರ ಪಟ್ಟಿ ಅಂತಿಮಗೊಂಡ ಬಳಿಕ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದರೆ, 2026ರ ಅಂತ್ಯದೊಳಗೆ ಗ್ರಾಮ ಪಂಚಾಯಿತಿ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

# ಸಾಲಬಾಧೆ: ಆಟೋ ಚಾಲಕ ಆತ್ಮಹತ್ಯೆ

• ಪ್ರಜೋದಯ ವರದಿ



**ಹಾಸನ:** ಸಾಲ ಬಾಧೆಯಿಂದ ಮನನೊಂದ ಆಟೋ ಚಾಲಕ ಮನೆಯಲ್ಲಿ ನೇಣು ಬಿಗಿದು ಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ನಗರದ ವಿದ್ಯಾ ನಗರದಲ್ಲಿ ನಡೆದಿದೆ. ಅನಿಲ್ (35) ಮೃತ.

ಆಟೋ ಚಾಲಕನಾಗಿ ಕೆಲಸ ಮಾಡುತ್ತಿದ್ದ ಅನಿಲ್ ಅವರು ನಾಲ್ಕು ಲಕ್ಷಕ್ಕೂ ಅಧಿಕ ಕೈಸಾಲ ಮಾಡಿಕೊಂಡಿದ್ದರು ಎನ್ನಲಾಗಿದೆ. ಸಾಲಗಾರರು ಹಣವನ್ನು ವಾಪಾಸ್ ನೀಡುವಂತೆ ಒತ್ತಾಯಿಸುತ್ತಿದ್ದ ಹಿನ್ನಲೆ, ಮರುಪಾವತಿಸಲು ಸಾಧ್ಯವಾಗದೆ ಮನನೊಂದಿದ್ದರು ಎನ್ನಲಾಗಿದೆ. ಈ ಕಾರಣಕ್ಕೆ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ನಿಂತಿದ್ದ ಲಾರಿಗೆ ಕಾರು ಡಿಕ್ಕಿ: ಐವರಿಗೆ ಗಾಯ

• ಪ್ರಜೋದಯ ವರದಿ

**ಸಕಲೇಶಪುರ:** ರಸ್ತೆಬದಿ ನಿಂತಿದ್ದ ಲಾರಿಗೆ ಹಿಂದಿನಿಂದ ವೇಗವಾಗಿ ಬಂದ ಸ್ವಿಫ್ಟ್ ಕಾರು ಡಿಕ್ಕಿಯಾಗಿ ಐವರು ಗಂಭೀರ ಗಾಯಗೊಂಡಿರುವ ಘಟನೆ ರಾಷ್ಟ್ರೀಯ ಹೆದ್ದಾರಿ 75ರ ಹೆಗ್ಗದ್ದೆ ಸಮೀಪ ಶುಕ್ರವಾರ ನಡೆದಿದೆ.

ದೊಡ್ಡಬಳ್ಳಾಪುರ ಮೂಲದ ದೇವರಾಜ್ (42), ನಾಗರಾಜ್ (48), ನಾಗೇಶ್ (40), ಮಂಜುನಾಥ್ (35) ಹಾಗು ಬಚ್ಚೇಗೌಡ (45) ಗಾಯಗೊಂಡಿದ್ದಾರೆ.

ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ದರ್ಶನ ಮುಗಿಸಿಕೊಂಡು ಚಿಕ್ಕಬಳ್ಳಾಪುರದತ್ತ ತೆರಳುತ್ತಿದ್ದ ವೇಳೆ ಅಪಘಾತ ಸಂಭವಿಸಿದೆ. ಅಪಘಾತದ ತೀವ್ರತೆಗೆ ಕಾರಿನ ಮುಂಭಾಗ ಸಂಪೂರ್ಣ ಜಖಂ ಗೊಂಡಿದೆ. ಅಪಘಾತದ ಮಾಹಿತಿ ತಿಳಿದು ಸ್ಥಳೀಯರು ಹಾಗು ಪೊಲೀಸರು ಗಾಯಾಳುಗಳನ್ನು ಸಕಲೇಶಪುರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದರು. ಪ್ರಥಮ ಚಿಕಿತ್ಸೆ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಆಸ್ಪತ್ರೆಗೆ ರವಾನಿಸಲಾಯಿತು. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





# ಚಿರತೆ ದಾಳಿಗೆ ಎರಡು ಮೇಕೆ, ನಾಯಿ ಬಲಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ಚಿರತೆಯೊಂದು ದಾಳಿ ನಡೆಸಿ 2 ಮೇಕೆ ಹಾಗು ನಾಯಿಯನ್ನು ಕೊಂದು ಹಾಕಿರುವ ಘಟನೆ ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿಯ ದಾಳಗೌಡನಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ಮಲ್ಲೇಶ್ ಅವರಿಗೆ ಸೇರಿದ ಎರಡು ಮೇಕೆಗಳನ್ನು ಕೊಟ್ಟಿಗೆ ಯಲ್ಲಿ ಕಟ್ಟಲಾಗಿತ್ತು. ಶುಕ್ರವಾರ ಮುಂಜಾನೆ ಕೊಟ್ಟಿಗೆಗೆ ನುಗ್ಗಿದ ಚಿರತೆ ಎರಡು ಮೇಕೆಗಳನ್ನು ಕೊಂದು ಅವುಗ ಳನ್ನು ಹೊತ್ತೊಯ್ಯಲು ಯತ್ನಿಸಿದೆ. ಬಳಿಕ ಮನೆಯ ಮುಂದೆ ಮಲಗಿದ್ದ ನಾಯಿಯನ್ನು ಹೊತ್ತೊಯ್ದು ತಿಂದು ಹಾಕಿದೆ. ಚಿರತೆ ದಾಳಿಯಿಂದ ಗ್ರಾಮಸ್ಥರು ಆತಂಕಗೊಂಡಿದ್ದಾರೆ. ವಾಸದ ಮನೆಗಳ ಸಮೀಪವೇ ಚಿರತೆ ಮರಿ ಹಾಕಿರುವ ಸಾಧ್ಯತೆ ಇದೆ ಎಂದು ಶಂಕೆ ವ್ಯಕ್ತಪಡಿಸಿ ದ್ದಾರೆ. ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಸೆರೆಗೆ ಬೋನು ಇರಿಸಿದ್ದಾರೆ. ಕೂಡಲೇ ಚಿರತೆಯನ್ನು ಸೆರೆಹಿಡಿದು ಆತಂಕ ದೂರ ಮಾಡಬೇಕೆಂದು ಗ್ರಾಮಸ್ಥರು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.



## ಕೋಲಾರ ಮೂಲದ ಶಂಕರಪ್ಪ ಪೊಲೀಸ್ ವಶಕ್ಕೆ | ಕಳ್ಳಾಟಕ್ಕೆ ರೈತರು ಸುಸ್ತು

# ನೆರವಿನ ಹೆಸರಲ್ಲಿ ಕೋಟ್ಯಾಂತರ ರೂ. ಪಂಗನಾಮ

• ಪ್ರಜೋದಯ ವರದಿ

**ಹಳೇಬೀಡು:** ಹೈನುಗಾರಿಕೆ, ಕೃಷಿ ಪರಿಕರ ಖರೀದಿ, ರಸಗೊಬ್ಬರ ಮಾರಾಟಕ್ಕೆ ಪರವಾನಗಿ ಸೇರಿ ಕೃಷಿ ಸಂಬಂಧಿತ ಕೆಲಸ ಮಾಡಿಕೊಡುವುದಾಗಿ ನಕಲಿ ಗುರುತಿನ ಚೀಟಿಯೊಂದಿಗೆ ಬೇಲೂರು ತಾಲ್ಲೂಕಿನ ರೈತರಿಗೆ ಸುಮಾರು 1.5 ಕೋ.ರೂ. ಪಂಗನಾಮ ಹಾಕಿರುವ ಆಸಾಮಿಯನ್ನು ರೈತರೇ ಪತ್ತೆಹಚ್ಚಿ ಪೊಲೀಸರಿಗೆ ಒಪ್ಪಿಸಿದ್ದಾರೆ.

ಕೋಲಾರ ಜಿಲ್ಲೆ ಬೈರಕೂರು ಹೋಬಳಿ ಕಾಡೇನಹಳ್ಳಿಯ ಜಿ.ಶಂಕರಪ್ಪ ಮೋಸದಾಟದ ಸೂತ್ರಧಾರ. ಅನ್ನದಾತರ ಹಣ ವಸೂಲಿ ಮಾಡಲು ಈತ ಹೂಡಿದ್ದ ಆಟಗಳು ಬೆಚ್ಚಿ ಬೀಳಿಸುವಂತಿವೆ. ಮೋಸದಾಟದ ಪಟ್ಟಿಯಲ್ಲಿ ಅನಕ್ಷರಸ್ಥ ರೈತರು ಮಾತ್ರವಲ್ಲದೆ ಜನಪ್ರತಿನಿಧಿಗಳ ಆಪ್ತ ಸಹಾಯಕರು ಇದ್ದಾರೆ.

**ಮೋಸದ ಜಾಲಕ್ಕೆ ಮರುಳಾದ ಜನರು**

ಹಳೇಬೀಡು ಹೋಬಳಿಯ ರೈತರು ಹಾಗು ಉದ್ದಿಮೆ ಮಾಡಲು ಬಯಸಿದ ಆರ್ಥಿಕ ಸಬಲರೇ ಆತನ ಗುರಿಯಾಗಿದ್ದರು. ಶಂಕರಪ್ಪ ತನ್ನನ್ನು ಪಿಎಂಇಜಿಪಿ (ಪ್ರಧಾನಮಂತ್ರಿ ಯೋಜಗಾರ ಯೋಜನೆ) ಏಜೆಂಟ್ ಎಂದು ಪರಿಚಯ ಮಾಡಿಕೊಂಡಿದ್ದ. ಕೇಂದ್ರ ಸರ್ಕಾರದ ಅಧೀನದ ಎಫ್‌ಐಎ ಕಂಪನಿಯ ಉದ್ಯೋಗಿ ಎಂದು ನಂಬಿಸಿ ನಕಲಿ ಗುರುತಿನ ಚೀಟಿ ತೋರಿಸಿ ಎಲ್ಲರಿಗೂ ಮಕ್ಮಲ್ ಟೋಪಿ ಹಾಕಿದ್ದ ಎಂದು ತಿಳಿದು ಬಂದಿದೆ.

ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ 40 ರಿಂದ 50 ಲ.ರೂ. ವರೆಗೆ ಹೈನುಗಾರಿಕೆ ಸಾಲ, ರಸಗೊಬ್ಬರ ಮಾರಾಟ ಮಳಿಗೆ ಪ್ರಾರಂಭಿಸಲು ಸಹಾಯಧನದ ಜೊತೆಗೆ ಪರವಾನಗಿ, ರಿಯಾಯಿತಿ ದರದಲ್ಲಿ ಕ್ರಿಮಿನಾಶಕ ಔಷಧಿ ಡೀಲರ್‌ಶಿಪ್ ಕೊಡಿಸುವುದಾಗಿ ಬಣ್ಣದ ಮಾತುಗಳಿಂದ ತನ್ನ ಮೋಸದ ಬಲೆಗೆ ಬೀಳಿಸಿಕೊಂಡಿದ್ದ. ಆತನ ದುರುದ್ದೇಶವನ್ನು ಅರಿಯುವಲ್ಲಿ ವಿಫಲರಾದ ರೈತರು ಲಕ್ಷಾಂತರ ರೂಪಾಯಿ ನೀಡಿದ್ದಾರೆ. ಆದರೆ ಎರಡು ವರ್ಷ ಕಳೆದರೂ ಹಾಕಿದ ಬಂಡವಾಳಕ್ಕೆ ಪ್ರತಿಫಲ ದೊರೆಯದೆ ಇದ್ದಾಗ ತಾವು ಗಂಡಾಂತರಕ್ಕೆ ಸಿಲುಕಿದ್ದೇವೆಂದು ದಿಗ್ಭ್ರಾಂತರಾಗಿದ್ದರು.

**ಬೈಕ್ ಮೆಕ್ಯಾನಿಕ್ ಶಂಕರಪ್ಪ**

ಶಂಕರಪ್ಪ ಬೈಕ್ ಮೆಕ್ಯಾನಿಕ್ ಆಗಿ ಕೆಲಸ ಮಾಡಿಕೊಂಡಿದ್ದ. 2 ವರ್ಷಗಳ ಹಿಂದೆ ಹಳೇಬೀಡಿನ ವಿವಿಧೆಡೆ » ನಾಲ್ಕನೇ ಪುಟದಲ್ಲಿ





### ಕೋಲಾರದಿಂದ ಕರೆತಂದ ರೈತರು

ವ್ಯಕ್ತಿಯಿಂದ ಮೋಸ ಹೋಗಿದ್ದೇವೆಂದು ತಿಳಿಯುತ್ತಿದ್ದಂತೆ ರೈತರೆಲ್ಲಾ ಹಳೇಬೀಡು ಠಾಣೆಯಲ್ಲಿ ದೂರು ದಾಖಲಿಸಿದ್ದರು. ಆದರೆ ಪೊಲೀಸರು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದ ಹಿನ್ನಲೆಯಲ್ಲಿ ಮೋಸಕ್ಕೆ ಒಳಗಾದವರು ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ನಂದಲಿ ಪಿಎಸ್ಐ ವಿದ್ಯಾಶ್ರೀ ಅವರ ಬಳಿ ವಿಚಾರ ತಿಳಿಸಿದಾಗ ಶಂಕರಪ್ಪ ಮಹಾನ್ ಕಲಾವಿದ ಎಂಬುದು ಗೊತ್ತಾಗಿದೆ. ಅಲ್ಲಿನ ಪೊಲೀಸರು ಆತನ ಜಾಡು ಹಿಡಿದು ಬೆನ್ನತ್ತಿದ್ದಾಗ ಹಳೇಬೀಡು ಮಾತ್ರವಲ್ಲದೆ ಬೇರೆ ಕಡೆಯೂ ಇದೇ ರೀತಿ ಕಳ್ಳಾಟ ನಡೆಸಿದ್ದಾ ನೆಂದು ತಿಳಿದಿದೆ. ಹೇಗೋ ಆತ ಇರುವ ಜಾಗ ಪತ್ತೆಮಾಡಿ ದಿಢೀರ್‌ನೆ ಆತನ ಎದುರು ರೈತರು ಪ್ರತ್ಯಕ್ಷರಾದಾಗ ಅಂಗವಿ ಕಲನ ಸೋಗಿನಲ್ಲಿ ಇದ್ದನಂತೆ. ಆತನೊಂದಿಗೆ ಹೆಚ್ಚು ಮಾತನಾಡದೆ ರೈತರು ನೇರವಾಗಿ ಹಳೇಬೀಡಿಗೆ ಕರೆದುಕೊಂಡು ಬಂದು ಪೊಲೀಸರಿಗೆ ಒಪ್ಪಿಸಿದ್ದಾರೆ.

# ಮಳೆನೀರು ಸಂರಕ್ಷಣೆಗೆ ಚೆಕ್‌ಡ್ಯಾಮ್ ನಿರ್ಮಾಣ ಅಗತ್ಯ

## ಜಲಮೂಲಗಳ ರಕ್ಷಣೆಗೆ ಜನರ ಸಹಭಾಗಿತ್ವ ಅಗತ್ಯ: ನ್ಯಾ||ನಾಗೇಶ್

• ಪ್ರಜೋದಯ ವರದಿ

**ಬೇಲೂರು:** ಮಳೆಗಾಲದಲ್ಲಿ ಹಳ್ಳ, ಕೊಳ್ಳ ಹಾಗು ನದಿಗಳ ಮೂಲಕ ಅಪಾರ ಪ್ರಮಾಣದಲ್ಲಿ ಹರಿದುಹೋಗುವ ನೀರು ವ್ಯರ್ಥವಾಗಿ ಸಮುದ್ರ ಸೇರುವುದನ್ನು ತಡೆಯಲು ನದಿ ಹಾಗು ಹಳ್ಳಗಳಿಗೆ ಅಡ್ಡಲಾಗಿ ಚೆಕ್‌ಡ್ಯಾಮ್‌ಗಳನ್ನು ನಿರ್ಮಿಸಿ ನೀರು ಸಂರಕ್ಷಿಸುವ ಅಗತ್ಯವಿದೆ ಎಂದು ಜೆಎಂಎಫ್‌ಸಿ ಸಿವಿಲ್ ನ್ಯಾಯಾಧೀಶ ನಾಗೇಶ್ ಅವರು ಹೇಳಿದರು.

ತಾಲ್ಲೂಕಿನ ತೊಳಲು ಗ್ರಾಮ ಪಂಚಾಯಿತಿ ಆವರಣದಲ್ಲಿ ಆಯೋಜಿಸಿದ್ದ ನೀರಿನ ಸಂರಕ್ಷಣೆ ಮತ್ತು ಜಲ ಮೂಲಗಳ ರಕ್ಷಣೆ ಕುರಿತಾದ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು, ಹೆಚ್ಚಿನ ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಮಾನವ ಜೀವನ ಹಾಗೂ ಕೃಷಿ ಚಟುವಟಿಕೆಗಳಿಗೆ ನೀರು ಅಗತ್ಯ. ನೀರಿಲ್ಲದೆ ಜೀವನವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ ಲಭ್ಯವಿರುವ ನೀರನ್ನು ಸಮರ್ಪಕವಾಗಿ ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಮಳೆಗಾಲದಲ್ಲಿ ಹಳ್ಳ, ಕೊಳ್ಳ ಹಾಗೂ ನದಿಗಳ ಮೂಲಕ ಅಪಾರ ಪ್ರಮಾಣದ ನೀರು ಹರಿದು ಸಮುದ್ರ ಸೇರುತ್ತದೆ. ಈ ನೀರನ್ನು ಸಮರ್ಪಕವಾಗಿ ಸಂರಕ್ಷಿಸಿ ಭೂಮಿಯಲ್ಲಿ ಇಂಗಿಸುವ ಮೂಲಕ ಅಂತರ್ಜಲ ಮಟ್ಟ ಹೆಚ್ಚಿಸಬಹುದು. ಚೆಕ್‌ಡ್ಯಾಮ್ ನಿರ್ಮಾಣದ ಜೊತೆಗೆ ಸಾಂಪ್ರದಾಯಿಕ ಹಾಗೂ ವೈಜ್ಞಾನಿಕ ಜಲ ಸಂರಕ್ಷಣಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಬೇಕೆಂದು ಹೇಳಿದರು.

ವಕೀಲರಾದ ಕುಮಾರಿ ಶಶಿಕಲಾ ಮಾತನಾಡಿ, ಪ್ರಧಾನ ಮಂತ್ರಿಯವರ ಜಲ ಸಂಚಯ, ಜನ ಭಾಗೀದಾರಿ ಯೋಜನೆಯಡಿ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂತರ್ಜಲ ಮಟ್ಟ ಹೆಚ್ಚಿಸುವುದು ಹಾಗೂ ಜಲ ಮೂಲಗಳನ್ನು ಸಂರಕ್ಷಿಸುವ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಅಂತರ್ಜಲ ಮಟ್ಟ ನಿರಂತರವಾಗಿ ಕುಸಿಯುತ್ತಿರುವ ಹಿನ್ನಲೆಯಲ್ಲಿ ಮಳೆನೀರು ಕೊಯ್ಲು, ನೀರಿನ ಮರುಬಳಕೆ ಹಾಗೂ ವೈಜ್ಞಾನಿಕ ಜಲ ಸಂರಕ್ಷಣಾ ಕ್ರಮಗಳನ್ನು ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನೀರಿನ ಬಳಕೆಯಲ್ಲಿ ಮಿತವ್ಯಯ ಹಾಗೂ ಜವಾಬ್ದಾರಿಯುತ ನಡೆ ರೂಢಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ವಕೀಲರ ಸಂಘದ ಖಜಾಂಚಿ ಕಿರಣ್, ವಕೀಲರಾದ ಮಂಜುನಾಥ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅರುಣ, ಮಾಜಿ ಅಧ್ಯಕ್ಷರು, ಸದಸ್ಯರು ಉಪಸ್ಥಿತರಿದ್ದರು.



# ಭೂಮಿಯಲ್ಲಿ ಜೀವಚೇತನದ ಮೂರು ವಿವರಿಸಲಾಗದ ನಿಗೂಢಗಳು



ಭೂಮಿಯ ಅತ್ಯಂತ ವಿಶೇಷ ಎಂದರೆ ಜೀವಚೇತನ. ನಮಗೆ ಇಲ್ಲಿಯವರೆಗೆ ತಿಳಿದಿರುವುದು ಏನೆಂದರೆ ಈ ವಿಶ್ವದಲ್ಲಿ ಜೀವಚೇತನವಿರುವ ಒಂದೇ ಒಂದು ಗ್ರಹ ಭೂಮಿ. ಪರಿಸರ ನಾಶ ವಿಪರೀತವಾಗಿದ್ದರೂ ಭೂಮಿಯ ಎಲ್ಲೆಡೆಗಳಲ್ಲಿ ಜೀವಚೇತನವಿದೆ - ಉದಾಹರಣೆಗೆ ನೀರಿನ ಆಳದಲ್ಲಿ, ಕಲ್ಪಿಸಲಾಗದಷ್ಟು ಅತಿರೇಕದ ಪರಿಸರದಲ್ಲಿ (ತೀವ್ರ ಶೀತ ಅಥವಾ ಉಷ್ಣ ಇರುವಲ್ಲಿಯೂ).

ಆದರೆ ಇದೆಲ್ಲ ಯಾಕಾಯಿತು? ಭೂಮಿಯಲ್ಲಿ ಜೀವ ಉತ್ಪತ್ತಿ ಹೇಗಾಯಿತು? ಪಕ್ಷಿಗಳು, ಪ್ರಾಣಿಗಳು, ಕೀಟಗಳು, ಅಮೀಬಾ, ನೀವು ಮತ್ತು ನಾನು ಸೃಷ್ಟಿಯಾಗಲು ಕಾರಣವಾದ ಘಟನೆಗಳ ಸರಣಿ ಯಾವುದು?

ಭೂಮಿಯಲ್ಲಿ ಜೀವಚೇತನ ಹೇಗೆ ಉಂಟಾಯಿತು ಎಂಬುದರ ಹುಡುಕಾಟವು ಈ ಜಗತ್ತಿನ ಇತಿಹಾಸದ ಪತ್ತೆಯಾಗದ ಅಧ್ಯಾಯಗಳನ್ನು ಭರ್ತಿ ಮಾಡುವುದಕ್ಕಿಂತ ಬಹಳ ದೊಡ್ಡದು. ಈ ಭೂಮಿಯಲ್ಲಿ ಜೀವಚೇತನದ ಉಗಮದ ಶೋಧದಲ್ಲಿ ಬಹಳ ದೊಡ್ಡ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಯಾವುದೇ ಗ್ರಹದಲ್ಲಿ ಜೀವಚೇತನ ಸೃಷ್ಟಿಯಾಗುವುದು ಎಷ್ಟು ಅಪರೂಪ? ಯಾವುದೇ ಗ್ರಹದಲ್ಲಿ ಜೀವಚೇತನ ಸೃಷ್ಟಿಯಾಗುವುದು ಎಷ್ಟರ ಮಟ್ಟಿಗೆ ಅಸಾಧ್ಯ?

ಈ ಕತೆಯನ್ನು ಸಂಪೂರ್ಣವಾಗಿ ಹೇಳಲು ಅಗತ್ಯವಾದ ಎಲ್ಲ ಮಾಹಿತಿ ನಮಗೆ ತಿಳಿದಿಲ್ಲ. ಆದರೆ ನಮಗೆ ಗೊತ್ತಿರುವ ಸಂಗತಿಗಳು ಪ್ರಾಚೀನ ಕಾಲಮಾನದಲ್ಲಿ ಭೂಮಿಯಲ್ಲಿ ಜೀವಚೇತನ ಉಗಮವಾದ ಅಸಾಧಾರಣ ಕತೆಯನ್ನು ಹೇಳುತ್ತವೆ.



**1) ಭೂಮಿಗೆ ನೀರು ಎಲ್ಲಿಂದ ಬಂತು?**

ಈ ಕತೆ ಶುರುವಾಗುವುದೇ ನೀರಿನಿಂದ. ಯಾಕೆಂದರೆ ಭೂಮಿಯಲ್ಲಿರುವ ಎಲ್ಲ ಜೀವಿಗಳಿಗೂ ನೀರು ಬೇಕೇ ಬೇಕು. ವಿವಿಧ ಜೀವಿಗಳು ತೀವ್ರವಾಗಿ ಭಿನ್ನವಾದ ಆಹಾರ ಸೇವಿಸಿ ಬದುಕಬಲ್ಲವು. ಆದರೆ ನೀರಿಲ್ಲದೆ ಬದುಕಲಾರವು.

ಗಮನಿಸಿ: ಭೂಮಿಯ ಮೇಲ್ಮೈಯ ಮೂರನೇ ಎರಡು ಭಾಗದಲ್ಲಿ ನೀರು ತುಂಬಿಕೊಂಡು, ಜೀವದ ಉಗಮಕ್ಕೆ ಅತ್ಯಗತ್ಯವಾದ ಮೊಟ್ಟಮೊದಲ ಷರತ್ತನ್ನು ಹೇಗೆ ಪೂರೈಸಿತು ಎಂಬುದನ್ನು ವಿಜ್ಞಾನಿಗಳು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿಲ್ಲ.

ಈ ಸಂಗತಿ ಸರಳವಾಗಿದೆ. ರೂಪುಗೊಳ್ಳುತ್ತಿರುವ ಸಮಯದಲ್ಲಿ ಈ ಭೂಮಿ ವಿಪರೀತ ಬಿಸಿಯಾಗಿತ್ತು. ಆದ್ದರಿಂದ ಆ ಸಮಯದಲ್ಲಿ ಭೂಮಿಯಲ್ಲಿ ಇದ್ದಿರಬಹುದಾದ ನೀರು ಸಂಪೂರ್ಣ ಆವಿಯಾಗಲೇ ಬೇಕಾಗಿತ್ತು.

ಇದರ ಬಗ್ಗೆ ವಿಜ್ಞಾನಿಗಳು ಕೆಲವು ವಿವರಣೆಗಳನ್ನು ಸೂಚಿಸುತ್ತಾರೆ. ಭೂಮಿಗೆ ಅಪ್ಪಳಿಸಿದ ಧೂಮಕೇತುವಿನಿಂದ ಭೂಮಿ ನೀರು ಪಡೆಯಿತೇ? ಬೇರೊಂದು ಸೌರವ್ಯೂಹದಿಂದ ಗುರು ಗ್ರಹದಂತಹ ಆಕಾಶಕಾಯ ಸೂರ್ಯನ ಕಡೆಗೆ ತೂರಿ ಬಂದ ಕಾರಣ ಭೂಮಿಯಲ್ಲಿ ಬೃಹತ್ ಪ್ರಮಾಣದ ನೀರು ಶೇಖರವಾಯಿತೇ? ಅಥವಾ ಆಗಷ್ಟೇ ರೂಪುಗೊಂಡಿದ್ದ ಭೂಮಿಯೊಳಗೆ ಅದು ಹೇಗೋ ಆಳದಲ್ಲಿ ನೀರು ಸಂಗ್ರಹವಾಯಿತೇ?

**2) ನೀರಿನಲ್ಲಿ ಜೀವದ ಉಗಮ ಹೇಗಾಯಿತು?**

ಒಂದೇ ಜೀವಕೋಶದ ಜೀವಿಯೂ ಜಟಿಲವಾಗಿರಬಹುದು. ಹಾಗಿರುವಾಗ ಭೂಮಿಯಲ್ಲಿ ಮೊಟ್ಟಮೊದಲ ಜೀವಿ ರೂಪುಗೊಂಡದ್ದು ಹೇಗೆ?

ಭೂಮಿಯಲ್ಲಿ ನೀರಿದೆ ಎಂದಾದಾಗ ಅದು ಹೇಗೋ ಜೀವಚೇತನ ಉಗಮವಾಯಿತು. ಜೀವಿಯ ಉಗಮ ಭೂಮಿಯಲ್ಲಿ ಆಗಲಿಲ್ಲ ಎಂಬುದು ನಿಜವಾಗಿರಬಹುದು. ಆದರೆ ಭೂಮಿಯಲ್ಲೇ ಜೀವಚೇತನ ಉಗಮವಾಯಿತು ಎಂದು ವಿಜ್ಞಾನಿಗಳು ಯೋಚಿಸಲು ಕಾರಣಗಳಿವೆ.

ನೀರು ತುಂಬಿದ್ದ ಆರಂಭಿಕ ದಿನಗಳ ಭೂಮಿಯ ಪರಿಸ್ಥಿತಿಯನ್ನು ಪ್ರಯೋಗಾಲಯದಲ್ಲಿ ಪುನರ್-ಸೃಷ್ಟಿಸಲು ಹಲವು ದಶಕಗಳಿಂದ ವಿಜ್ಞಾನಿಗಳು ಪ್ರಯತ್ನಿಸುತ್ತಿದ್ದಾರೆ. ಅದು ಸಾಧ್ಯವಾದರೆ, ಹಲವಾರು ಬಿಲಿಯನ್ ವರುಷಗಳ ಹಿಂದೆ, ಭೂಮಿಯಲ್ಲಿ ರೂಪುಗೊಂಡ ಸರಳ ಜೀವಕೋಶಗಳಂತಹ ಜೀವಚೇತನವನ್ನು ಸೃಷ್ಟಿಸಲು ವಿಜ್ಞಾನಿಗಳಿಗೆ ಸಾಧ್ಯ ಆದೀತು. ಅದರಿಂದ ಶುರು ಮಾಡಿ, ಭೂಮಿಯಲ್ಲಿ ಜೀವದ ಉಗಮ ಹೇಗಾಯಿತು ಎಂಬ ಕತೆ ಹೆಣೆಯಲು ವಿಜ್ಞಾನಿಗಳಿಗೆ ಸಾಧ್ಯ.

ಈ ನಿಟ್ಟಿನಲ್ಲಿ ನಡೆಸಿದ ಸಂಶೋಧನೆ ವಿಜ್ಞಾನಿಗಳಿಗೆ ಆಶ್ಚರ್ಯಕರ ಫಲಿತಾಂಶಗಳನ್ನು ನೀಡಿದೆ. 1950ರ ದಶಕದಲ್ಲಿ, ಗ್ಲೈಸೀನ್ ಎಂಬ ಅಮಿನೋ ಆಮ್ಲವನ್ನು ತಯಾರಿಸಲು ಸಾಧ್ಯವೆಂದು ವಿಜ್ಞಾನಿಗಳಾದ ಹರೋಲ್ಡ್ ಉರೇ ಮತ್ತು ಸ್ಟಾನ್ಲೇ ಮಿಲ್ಲರ್ ತೋರಿಸಿಕೊಟ್ಟರು (ಅದು ಜೀವಿಗಳ ಮೂಲಭೂತ ರಚನಾ ಘಟಕಗಳಲ್ಲೊಂದು). ಇದಕ್ಕಾಗಿ, ಉಷ್ಣ ಮತ್ತು ಕೃತಕ ಬೆಳಕನ್ನು ಬಳಸಿ, ಮಿಲಿಯಗಟ್ಟಲೆ ವರುಷಗಳ ಹಿಂದೆ ವಾತಾವರಣದಲ್ಲಿ ತುಂಬಿದ್ದ ಕೆಲವು ಅನಿಲಗಳನ್ನು ಮಿಶ್ರ ಮಾಡಿದ್ದರು.

ಅನಂತರ, ಜೀವಕೋಶ ಪೊರೆಯಂತೆಯೇ ಕಾಣುವ ಲಿಪಿಡ್ ಹನಿಗಳನ್ನು ತಯಾರಿಸಲು ವಿಜ್ಞಾನಿಗಳಿಗೆ ಸಾಧ್ಯವಾಗಿದೆ. ಅದಲ್ಲದೆ, ಸರಳೀಕೃತ ಡಿ.ಎನ್.ಎ.ಯಂತಿರುವ ಆರ್.ಎನ್.ಎ. ಅಣುಗಳನ್ನು ವಿಜ್ಞಾನಿಗಳು ರೂಪಿಸಿದ್ದಾರೆ. ಆದರೆ, ಜೀವಚೇತನದ ಈ ಎಲ್ಲ ಉಪಾಂಗಗಳನ್ನು ಪ್ರಯೋಗಾಲಯದಲ್ಲಿ ತಯಾರಿಸಿ, ಅವನ್ನು ಜೋಡಿಸಿ, ಸರಳ ಜೀವಕೋಶವೊಂದನ್ನು ಸೃಷ್ಟಿಸಲು ವಿಜ್ಞಾನಿಗಳಿಗೆ ಸಾಧ್ಯವಾಗಿಲ್ಲ.

ಈ ಪ್ರಯೋಗಗಳಲ್ಲಿ ವಿಜ್ಞಾನಿಗಳು ಯಶಸ್ವಿಯಾಗಿ, ಒಂದು ಬಾಟಲಿಯಲ್ಲಿ ಜೀವಚೇತನ ಸೃಷ್ಟಿಸಿದರೆ, ಏನಾದೀತು? ಭೂಮಿಯಲ್ಲಿ ಜೀವ ಉಗಮದ ಕತೆಯನ್ನು ತಿಳಿದುಕೊಳ್ಳುವುದಲ್ಲದೆ, ವಿಶ್ವದಲ್ಲಿ ಜೀವಚೇತನ ಎಷ್ಟರ ಮಟ್ಟಿಗೆ ಪ್ರಚಲಿತವಾಗಿದೆ ಎಂಬುದರ ಬಗ್ಗೆ ತೀರ್ಮಾನಕ್ಕೆ ಬರಲು ಸಾಧ್ಯ.

**3) ಜೀವಚೇತನ ಎಂದರೇನು?**

ಜೀವದ ಉಗಮ ಹೇಗೆಯೇ ಆಗಿರಲಿ, ಈಗ ಭೂಮಿಯಲ್ಲಿ ಜೀವಿಗಳು ತುಂಬಿವೆ. ಜೀವಚೇತನವನ್ನು ಕಂಡಾಗ ಅದನ್ನು ನಾವು ಗುರುತಿಸಬಲ್ಲೆವು. ಆದರೆ ಮೂಲಭೂತವಾಗಿ ಜೀವಚೇತನ ಎಂದರೇನೆಂದು ನಮಗೆ ತಿಳಿದಿದೆಯೇ? ಇಲ್ಲ.

ವಿಜ್ಞಾನ ಸಾಹಿತ್ಯದಲ್ಲಿ ವಿಜ್ಞಾನಿಗಳೇ ದಾಖಲಿಸಿದ ಜೀವಚೇತನ ಎಂದರೇನೆಂಬ ನೂರಾರು ವ್ಯಾಖ್ಯಾನಗಳಿವೆ. ಆದರೆ ಅದನ್ನು ಯಾರೂ ಸರಿಯಾಗಿ ವ್ಯಾಖ್ಯಾನಿಸಿಲ್ಲ.

ಮೇಲ್ನೋಟಕ್ಕೆ ಜೀವಚೇತನ ಎಂದರೇನು? ಎಂಬ ಪ್ರಶ್ನೆಯನ್ನು ಶಾಲಾ ಮಕ್ಕಳೂ ಉತ್ತರಿಸಬಹುದು ಎನಿಸುತ್ತದೆ. ಆದರೆ, ಜೀವಚೇತನದ ಯಾವುದೇ ವ್ಯಾಖ್ಯಾನವನ್ನು ಪರಿಶೀಲಿಸಿದರೂ ವಿಜ್ಞಾನಿಗಳು ಅದಕ್ಕೊಂದು ವಿನಾಯಿತಿಯನ್ನು ತೋರಿಸಬಲ್ಲರು.

ಉದಾಹರಣೆ: ಜೀವಚೇತನಕ್ಕೆ ನಾಸಾದ ವ್ಯಾಖ್ಯಾನ ಹೀಗಿದೆ: ಜೀವಚೇತನವು ಡಾರ್ವಿನ್ ವಿವರಿಸಿದ ವಿಕಾಸದ ಸಾಮರ್ಥ್ಯವುಳ್ಳ ಸ್ವಯಂ-ಸುಸ್ಥಿರ ರಾಸಾಯನಿಕ ವ್ಯವಸ್ಥೆ. ಆದರೆ, ಈ ವ್ಯಾಖ್ಯಾನದಲ್ಲಿ ವೈರಸುಗಳು ಸೇರಿಕೊಳ್ಳುವುದಿಲ್ಲ. ಯಾಕೆಂದರೆ, ಅವು ಸ್ವಯಂ-ಸುಸ್ಥಿರ ಜೀವಿಗಳಲ್ಲ. ಕಾರಣ: ಇನ್ನೊಂದು ಜೀವಿಯೊಳಗೆ ಸೇರಿಕೊಂಡರೆ ಮಾತ್ರ ಅವು ಬದುಕಿ ಉಳಿಯಬಲ್ಲವು ಮತ್ತು ಪುನರುತ್ಪತ್ತಿ ಮಾಡಬಲ್ಲವು.

ಇತರ ಗ್ರಹಗಳು ಮತ್ತು ಚಂದ್ರಗಳಲ್ಲಿ ನಾವು ಜೀವಚೇತನವನ್ನು ಹುಡುಕುತ್ತಿರುವಾಗ ನಮಗೆ ಜೀವಚೇತನದ ವ್ಯಾಖ್ಯಾನದಿಂದ ಸಹಾಯವಾಗುತ್ತದೆ. ಯಾಕೆಂದರೆ, ಅಲ್ಲೆಲ್ಲಾದರೂ ಜೀವಚೇತನ ಪತ್ತೆಯಾದರೆ ಅದನ್ನು ಗುರುತಿಸಲು ಸಾಧ್ಯವಾದೀತು. ಆದರೆ, ನಮ್ಮ ಈಗಿನ ಜ್ಞಾನಮಿತಿಯ ಆಧಾರದಿಂದ ಜೀವಚೇತನವನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

**- ಅಡ್ಡೂರು** ಕೃಷ್ಣ ರಾವ್

---

**“ ಅಸ್ಪೃಶ್ಯತೆಯ ಕುರಿತ ಸಾಮಾಜಿಕ ವಿಮರ್ಶೆ ಹಾಗೂ ಬಯಲು ಎಂಬ ತಾತ್ವಿಕತೆಯ ಕುರಿತ ಆಧ್ಯಾತ್ಮಿಕ ನೋಟ ಎರಡೂ ಹದಮಿಳಿತವಾಗಿರುವ ಹಾಡು ಅದು. ಮಕ್ಕಳಿಗೆ ಅರ್ಥ ಆಗಿರಲಿಕ್ಕಿಲ್ಲ. ಆದರೆ ಬೀಟ್ ಅವರನ್ನು ಆಕರ್ಷಿಸಿದೆ. ಮುಂದೆಂದಾದರೂ ಹಾಡು ಅರ್ಥವಾದೀತು. ಅಷ್ಟಾದರೆ ಸಾಕು. ಹಳೆಯ ಹಾಡುಗಳು ಹೀಗೆ ಹೊಸದಾಗುವುದು ಅಗತ್ಯ ಅಂತ ಅನಿಸುತ್ತದೆ. ಅದರಲ್ಲಿ ಬಣ್ಣದ ತಗಡಿನ ತುತ್ತೂರಿಯೂ ಇದೆ. ಯುಟ್ಯೂಬ್‌ನಲ್ಲಿದೆ.**

# ಒಂದಕ್ಕೊಂದು ಸಂಬಂಧ ಇಲ್ಲದ 7 ಟಿಪ್ಪಣಿಗಳು

ಕಾಡುದಾರಿ

ಒಂದು: ಮೊನ್ನೆ ಮಗಳ ಸ್ಕೂಲ್ ಬತ್‌ಡೇ. ಮಕ್ಕಳದೇ ಸರ್ಕಸ್ ಶೋ. ಶೋದ ಕೊನೆಯಲ್ಲಿ ಒಂದು ಪಾಪ್ ಬೀಟ್‌ನ ಕನ್ನಡ ಹಾಡು. ಅದಕ್ಕೆ ಮಕ್ಕಳು ಆನಂದದಿಂದ ನರ್ತಿಸುತ್ತಿದ್ದರು. ಈ ಹಾಡು ಎಲ್ಲೋ ಕೇಳಿದಂತಿದೆಯಲ್ಲ ಅನಿಸತೊಡಗಿತು. ಆಮೇಲೆ ಗೊತ್ತಾಯಿತು– ಅದು 12ನೇ ಶತಮಾನದ ಬೊಂತಾದೇವಿ ಅವರ ವಚನ. ಊರ ಒಳಗಣ ಬಯಲು/ ಊರ ಹೊರಗಣ ಬಯಲೆಂದುಂಟೆ/ ಊರೊಳಗೆ ಬ್ರಾಹ್ಮಣ ಬಯಲು/ ಊರ ಹೊರಗೆ ಹೊಲೆಬಯಲೆಂದುಂಟೆ/ ಎಲ್ಲಿ ನೋಡಿದಡೆ ಬಯಲೊಂದೇ. ಬಿ.ಕೆ ಸುಮಿತ್ರಾ ಹಾಡಿದ್ದದನ್ನು ಕೇಳಿದ್ದೆ.

ಅದರಲ್ಲಿ ಸ್ವಲ್ಪ ವಿಷಾದದ ದನಿಯಿತ್ತು. ಈಗ ಕೆಲ ತಿಂಗಳ ಹಿಂದೆ ಎಂ.ಡಿ ಪಲ್ಲವಿ ಮತ್ತು ಆಂಡಿ ಒಟ್ಟೊ ಸಂಗೀತ ನೀಡಿ ಹಾಡಿರುವ ಸಾಂಗ್ಸ್ ಫಾರ್ ಬ್ರೋಕನ್ ಶಿಪ್ಸ್ ಎಂಬ ಆಲ್ಬಂನಲ್ಲಿ ಈ ಹಾಡಿದೆ. ಹಾಡಿಗೆ ಮೊದಲು ತಕುದಿಕುತಾ, ತದಿಗಿಣತೊ ಎಂಬ ಆಲಾಪ ಹಾಗೂ ಬೀಟ್ ಇದೆ. ಅದು ಜೆನ್ ಜಿ ಮಕ್ಕಳು ಹುಚ್ಚೇಳುವಂತೆಯೇ ಇದೆ. ಇಲ್ಲದೆ ಹೋದರೆ ಜೆನ್ ಜೀ ಆಕರ್ಷಿತರಾಗುವಂಥ ಹಾಡಲ್ಲ ಅದು.

ಅಸ್ಪೃಶ್ಯತೆಯ ಕುರಿತ ಸಾಮಾಜಿಕ ವಿಮರ್ಶೆ ಹಾಗೂ ಬಯಲು ಎಂಬ ತಾತ್ವಿಕತೆಯ ಕುರಿತ ಆಧ್ಯಾತ್ಮಿಕ ನೋಟ ಎರಡೂ ಹದಮಿಳಿತವಾಗಿರುವ ಹಾಡು ಅದು. ಮಕ್ಕಳಿಗೆ ಅರ್ಥ ಆಗಿರಲಿಕ್ಕಿಲ್ಲ. ಆದರೆ ಬೀಟ್ ಅವರನ್ನು ಆಕರ್ಷಿಸಿದೆ. ಮುಂದೆಂದಾದರೂ ಹಾಡು ಅರ್ಥವಾದೀತು. ಅಷ್ಟಾದರೆ ಸಾಕು. ಹಳೆಯ ಹಾಡುಗಳು ಹೀಗೆ ಹೊಸದಾಗುವುದು ಅಗತ್ಯ ಅಂತ ಅನಿಸುತ್ತದೆ. ಅದರಲ್ಲಿ ಬಣ್ಣದ ತಗಡಿನ ತುತ್ತೂರಿಯೂ ಇದೆ. ಯುಟ್ಯೂಬ್‌ನಲ್ಲಿದೆ.

ಎರಡು: ಬಾಳೆಗುಬ್ಬಿ ಅಂತಾರಲ್ಲ ಅದು. ಪುಟ್ಟ ಹಕ್ಕಿ. ಎಷ್ಟು ಪುಟ್ಟದು ಅಂತೀರಿ. ನಿಮ್ಮ ಅಂಗೈಯ ಮುಷ್ಟಿ ಮಾಡಿದರೆ ಅದರೊಳಗೆ ಹಿಡಿಸಬಹುದು. ಅಯ್ಯೋ ಮುಷ್ಟಿ ಮಾಡಿ ಹಿಡಿಯಬೇಡಿ, ಪಾಪ. ಎಷ್ಟೋ ಹೊತ್ತಿನಿಂದ ಅದನ್ನು ಕಿಟಕಿಯಿಂದ ನೋಡುತ್ತ ಕೂತಿದ್ದೆ. ಒಂದು ಮನುಷ್ಯ ಪ್ರಾಣಿ ತನ್ನನ್ನು ನೋಡುತ್ತಿದೆ ಎಂಬ ಅರಿವೇ ಇಲ್ಲದೆ ಬಿಳಿಯ ನಂದಬಟ್ಟಲು ಹೂವಿನ ಗಿಡದ ಕೊಂಬೆಯಿಂದ ಕೊಂಬೆಗೆ ಜಿಗಿಯುತ್ತಿತ್ತು. ಹೂವಿನೊಳಗೆ ಮೂತಿ ತೂರಿಸಿ ಹಿಂದಕ್ಕೆಳೆಯುತ್ತಿತ್ತು. ಆಚೆ ಸುರಿಯುತ್ತಿದ್ದ ಮಳೆ, ಕ್ಷಣವೂ ಸುಮ್ಮನಿರದೆ ಚಂಚಲಿಸುತ್ತಿದ್ದ ಬಾಳೆಗುಬ್ಬಿಯನ್ನು ಒದ್ದೆ ಮಾಡಲು ಹರಸಾಹಸ ಮಾಡುತ್ತಿತ್ತು. ಅದನ್ನು ನೋಡುತ್ತ ನೋಡುತ್ತ ನನಗೇನಾಯಿತು ಎಂದು ನೋಡಿಕೊಂಡೆ.

ಚಲಿಸುತ್ತಿದ್ದ ಕೈಕಾಲುಗಳು, ಬಾಳೆಗುಬ್ಬಿಗೆ ಡಿಸ್ಟರ್ಬ್ ಆಗದಿರಲಿ ಎಂದು ಸ್ತಬ್ಧವಾಗಿದ್ದವು. ಮನಸ್ಸು ಬೇರೇನನ್ನೂ ಯೋಚಿಸದೆ ಹಕ್ಕಿಯಲ್ಲಿ ನೆಟ್ಟಿತ್ತು. ಹೊರಗೆ ಕ್ಷಣಕ್ಕೊಮ್ಮೆ ಚಲಿಸುವ ಹಕ್ಕಿ. ಒಳಗೆ ಧ್ಯಾನದಿಂದ ಎಂಬಂತೆ ಬೇರೇನನ್ನೂ ಒಳಬಿಟ್ಟುಕೊಳ್ಳದೆ ನಿಶ್ಚಲವಾಗಿದ್ದ ಮನಸ್ಸು. ನಿಮಿಷಗಳು ಉರುಳಿದ್ದೇ ಗೊತ್ತಾಗಲಿಲ್ಲ. ಇದ್ದಕ್ಕಿದ್ದಂತೆ ದೂರದಿಂದ ಇನ್ನೊಂದು ಹಕ್ಕಿ ಚಿಂವ್ ಎಂದಿತು. ಈ ಹಕ್ಕಿ ಅತ್ತ ಹಾರಿಹೋಯಿತು. ಮನಸ್ಸಿನಿಂದ ಪೇರಿ ಕಿತ್ತಿದ್ದ ಲೌಕಿಕದ ಯೋಚನೆಗಳೆಲ್ಲ ಮತ್ತೆ ಬರತೊಡಗಿದವು.

ಮೂರು: ಇನ್ನೊಂದು ಹಾಡು. ಈಗ ಜಗಜೀತ್ ಸಿಂಗ್ ಹಾಡಿದ ವೋ ಕಾಗಜ್ ಕಿ ಕಶ್ತೀ, ವೋ ಬಾರಿಸ್ ಕಾ ಪಾನಿ ಗಜಲ್. ಮಂದ್ರದಲ್ಲಿ ಆರಂಭವಾಗಿ ಮಂದ್ರದ ಮುಗಿಯುವ ಮೆಲೋಡಿ. ಅದನ್ನು ಬರೆದದ್ದು ಯಾರು ಎಂಬುದು ನಮಗೆಲ್ಲ ಮರೆತೇಹೋಗಿದೆ. ಹಾಡು ಜಗಜೀತ್‌ನ ರೇಶಿಮೆ ದನಿಯಿಂದಲೇ ಜನಪ್ರಿಯ. ಯೇ ದೌಲತ್ ಭಿ ಲೇ ಲೋ, ಯೇ ಶೌಹ್ರತ್ ಭಿ ಲೇ ಲೋ– ನನ್ನ ದರ್ಪ ದೌಲತ್ತು ಜವಾನಿ ಎಲ್ಲ ತೆಗೆದುಕೋ, ಆದರೆ ನನಗೆ ಬಾಲ್ಯದ ಮಳೆಗಾಲದ ದಿನಗಳನ್ನು ಮರಳಿ ಕೊಡು.

ನನಗೀಗ ಬೇಕಾದ್ದು ಬಾಲ್ಯದ ಆ ಮಳೆ, ಅಂಗಳದಲ್ಲಿ ಹರಿವ ನೀರಿನಲ್ಲಿ ಕಾಗದದ ದೋಣಿ ಮಾಡಿ ಬಿಡುವ ಹುಚ್ಚು ಹುಮ್ಮಸ್ಸು. ಗೊಂಬೆಗಳ ಮದುವೆಯಲ್ಲಿ ಸುಮ್ಮಸುಮ್ಮನೇ ಪುಟ್ಟ ಜಗಳ ಹುಸಿ ಮುನಿಸು. ಆದರೆ ಕಾಗದದ ದೋಣಿಯಂತೆಯೇ ಆ ಬಾಲ್ಯವೂ ಕಳೆದುಹೋಯಿತಲ್ಲ! ಆ ಮುಗ್ಧ ದಿನಗಳನ್ನು ಮನಸ್ಸಿನಲ್ಲಿ ಹಾಗೇ ಕಾಪಿಟ್ಟುಕೊಳ್ಳುವ ಕವಿಮನಸ್ಸಿಲ್ಲದೆ ಇಂಥದೊಂದು ಹಾಡು ಉಕ್ಕಲು ಸಾಧ್ಯವೇ ಅನಿಸುವುದು ಅದನ್ನು ಜಗಜೀತ್ ಹಾಡುವ ವೈಖರಿಯನ್ನು ಆಲಿಸಿದಾಗಲೇ. ಮಳೆಗಾಲವೇ ನಾಸ್ತಾಲ್ಜಿಕ್. ಈ ಹಾಡು ಅದನ್ನು ಇನ್ನಷ್ಟು ಹಳಹಳಿಯ ಕ್ಷಣವಾಗಿಸುತ್ತದೆ. ಇದನ್ನು ಬರೆದ ಸುದರ್ಶನ್ ಫಕೀರ್, ಜನಿಸಿದ್ದು ಫಿರೋಜ್ ಪುರದಲ್ಲಿ.

ಜಲಂಧರ್ ಆಕಾಶವಾಣಿಯಲ್ಲಿ ಸಣ್ಣದೊಂದು ಕೆಲಸ ಮಾಡುತ್ತಿದ್ದರು. ಒಂದು ಗಜಲ್ ಅವರ ಜೀವನವನ್ನು ಬದಲಿಸಿತು. ರೇಡಿಯೋ ಸ್ಟೇಶನ್‌ಗೆ ಬರುವ ಗಾಯಕರನ್ನು ವಿಮಾನ ನಿಲ್ದಾಣದಿಂದ ಕರೆದುಕೊಂಡು ಬರುವುದು ಅವರ ಕೆಲಸ. ಹಾಗೆ ಒಮ್ಮೆ ಸುಪ್ರಸಿದ್ಧ ಗಾಯಕಿ ಬೇಗಂ ಅಖ್ತರ್‌ರನ್ನು ಕರೆದುಕೊಂಡು ಬರಲು ಹೋಗಿದ್ದರು.

ನೀನೇನ್ ಮಾಡ್ತೀಯಾ ಆಕಾಶವಾಣಿಯಲ್ಲಿ ಕುಳಿತುಕೊಂಡು ಎಂಬುದು ಬೇಗಂ ಪ್ರಶ್ನೆ. ಹಾಡು ಬರೀತೀನಿ ಎಂಬುದು ಫಕೀರ್ ಉತ್ತರ. ಹಾಗಾದ್ರೆ ನಿನ್ನ ಹಾಡಿನ ಒಂದು ಸಾಲು ಹೇಳು. ಫಕೀರ್ ಹೇಳಿದರು– ಕುಚ್ ತೋ ದುನಿಯಾ ಕಿ ಇನಾಯತ್ ನೇ ದಿಲ್ ತೋಡ್ ದಿಯಾ, ಔರ್ ಕುಚ್ ತಲ್ಖೀ ಇ ಹಾಲತ್ ನೆ ದಿಲ್ ತೋಡ್ ದಿಯಾ (ಜಗದ ಕೆಲವು ಕ್ರೌರ್ಯಗಳು ನನ್ನ ಹೃದಯ ಮುರಿದವು, ಇನ್ನು ಕೆಲವು ಸನ್ನಿವೇಶಗಳೇ ಕಹಿಯಾಗಿ ಎದೆಗೆ ಇರಿದವು– ಇದನ್ನು ಕೇಳಿ ಬೇಗಂ ಮೌನವಾದರು. ನಂತರ ಇಡೀ ಹಾಡು ಕೊಡುವಂತೆ ಹೇಳಿದರು. ಫಕೀರ್ ಕೊಟ್ಟರು.

ನಂತರ ಬೇಗಂ ರೇಡಿಯೋದ ಸ್ಟುಡಿಯೋ ರೂಮಿಗೆ ಹೋದರು. ಸ್ಟುಡಿಯೋ ಕೋಣೆಯಲ್ಲಿ ಕುಳಿತು ಬೇಗಂ ರೆಕಾರ್ಡಿಂಗ್ ಆಲಿಸುತ್ತಿದ್ದ ಫಕೀರ್‌ಗೆ ಆಶ್ಚರ್ಯವಾಗುವಂತೆ ಇವರದೇ ಹಾಡು ಬೇಗಂ ದನಿಯಲ್ಲಿ ಮೊಳಗಿತು. ಕವಿಯ ಹೆಸರು ಸಮೇತ. ಅಲ್ಲಿಂದಾಚೆಗೆ ಸುದರ್ಶನ್ ಫಕೀರ್ ಉರ್ದುವಿನ ಖ್ಯಾತ ಗಜಲ್ ಕವಿಯೆನಿಸಿದರು.

ನಾಲ್ಕು: ಆಷಾಢ, ಶ್ರಾವಣ ಅಂದರೆ ನಮ್ಮೂರಿಗೆ ಒರತೆಗಳ ಕಾಲ. ಜುಲೈ ಮೊದಲ ವಾರದಲ್ಲಿ ಕೆರೆ ಮತ್ತು ಬಾವಿಗಳಿಗೆ ಒರತೆಯಾಗಿ, ಅವು ತುಂಬಿ ಹರಿಯಲು ಶುರು ಮಾಡುತ್ತಿದ್ದವು. ಆಗ ಮೀನುಗಳು ಬಹಳ ಮೇಲೆ ಕೈಗೇ ಸಿಗುವಂತೆ ಓಡಾಡಿಕೊಂಡಿರುತ್ತಿದ್ದವು. ಕೆಲವೊಮ್ಮೆ ಕೆರೆ ಯಾವುದು, ನೆಲ ಯಾವುದು ಗೊತ್ತಾಗದಂತೆ ನೀರು ತುಂಬಿರುತ್ತಿತ್ತು. ಶಾಲೆಗೆ ಹೋಗುವ ದಾರಿಯ ಪಕ್ಕದ ಬರೆಗಳಿಂದ ನೀರಿನ ಒರತೆಗಳು ಉಕ್ಕುತ್ತಿದ್ದವು. ಮನೆಗೆ ಮರಳುವಾಗ ನಮಗೆ ಅದೇ ಆಟದ ಜಾಗ. ಕೆಲವು ಕಡೆ ಒರತೆ ಹನಿ ಹನಿಯಾಗಿ ಜಿನುಗುತ್ತಿತ್ತು. ಇನ್ನು ಕೆಲವು ಕಡೆ ಬರೆಯ ಮಣ್ಣಲ್ಲಿ ಆದ ತೂತುಗಳಿಂದ ಜೋರಾಗಿ ಸುರಿಯುತ್ತಿತ್ತು. ಅಲ್ಲ ಸಣ್ಣ ಸಣ್ಣ ಜಲಪಾತಗಳು ನಿರ್ಮಾಣ ಆಗುತ್ತಿದ್ದವು.

ಜಿನುಗುವ ಒರತೆಗೆ ದೋಣಿಕಾಯಿ ಅಥವಾ ಎಲೆ ಸಿಕ್ಕಿಸಿ ಅದು ಧಾರೆಯಾಗುವುದನ್ನು ನೋಡುವುದು ಒಂದು ಸಂಭ್ರಮ. ಕೆಲವು ವರ್ಷಗಳ ಹಿಂದೆ ನಮ್ಮಲ್ಲಿ ಯಾವಾಗ ಒರತೆಯಾಗುತ್ತದೆ ಎಂದು ಹೇಳುವವರು ಸಿಗುತ್ತಿದ್ದರು. ಮಳೆ ಹನಿಯುವ ಪ್ರಮಾಣ, ಮಾನ್ಸೂನ್ ಆರಂಭವಾದ ಅವಧಿ, ಗಾಳಿ ಬೀಸುವ ದಿಕ್ಕು– ಇದನ್ನೆಲ್ಲ ನೋಡಿ ಒರತೆ ಯಾವಾಗ ಆಗುತ್ತದೆ ಎಂಬುದನ್ನು ಹೇಳುತ್ತಿದ್ದರು. ಹೆಚ್ಚೂ ಕಡಿಮೆ ಅದೇ ದಿನ ಒರತೆಯಾಗುತ್ತಿತ್ತು. ಅವರು ಹೇಗೆ ಅಂಥ ಜ್ಞಾನವನ್ನು ಸಿದ್ಧಿಸಿಕೊಂಡಿದ್ದರೋ ಕಾಣೆ. ಒರತೆ ಉಂಟಾಗಬೇಕಾದರೆ ಸರಿಯಾಗಿ ಮಳೆಯಾಗಬೇಕು.

ಜೂನ್ ಪೂರ್ತಿ ಮಳೆಯಾದರೆ ಗುಡ್ಡಬೆಟ್ಟಗಳೆಲ್ಲ ಒಯಾಗಿ, ಸಾಕಷ್ಟು ನೀರು ಹೀರಿ, ಜುಲೈ ಹೊತ್ತಿಗೆ ನೀರನ್ನು ಬಿಟ್ಟುಕೊಡಲು ಸಿದ್ಧವಾಗುತ್ತವೆ. ಮಾನ್ಸೂನ್‌ನಲ್ಲಿ ಸರಿಯಾಗಿ ಮಳೆಯಾಗದಿದ್ದರೆ ಒರತೆ ತಡವಾಗುತ್ತದೆ. ಒರತೆಗಳು ಎಲ್ಲೂ ಇರುತ್ತವೆ. ಹಿಮಾಲಯದ ಸ್ಪಿಟಿ ವ್ಯಾಲಿಗೆ ನಾವು ಹೋಗಿದ್ದಾಗ, ಅಲ್ಲಿ ಒಂದು ಬರೆಯಿಂದ ಒಸರಿ ಬರುತ್ತಿದ್ದ ಒರತೆಯ ನೀರಿಗೆ ಬಿದಿರಿನಂಥ ಒಂದು ಮರದ ಕೊಳವೆ ಇಟ್ಟು ನೀರು ಹಿಡಿದುಕೊಳ್ಳುತ್ತಿದ್ದರು.

ನಾವೂ ಜೀಪು ನಿಲ್ಲಿಸಿ ಅದನ್ನು ಕುಡಿದೆವು. ಅದು ಅಮೃತಕ್ಕಿಂತ ಸವಿಯಾಗಿತ್ತು. ಕಳೆದ ಕೆಲವು ವರ್ಷಗಳಿಂದ ಮಲೆನಾಡಿನಲ್ಲಿ ನಡೆಯುತ್ತಿರುವ ಗುಡ್ಡಕುಸಿತಕ್ಕೂ ಈ ಒರತೆಗಳಿಗೂ ಸಂಬಂಧ ಇರಬಹುದು ಎಂಬುದು ಭೂತಜ್ಞನಲ್ಲದ ನನ್ನ ಅನುಮಾನ. ಮಳೆಗಾಲದಲ್ಲಿ ಗುಡ್ಡಗಳ ಮೇಲೆ ಅಪಾರ ಪ್ರಮಾಣದಲ್ಲಿ ಇಂಗಿದ ನೀರು ಒಂದಷ್ಟು ಪ್ರಮಾಣ ಅಂತರ್ಜಲಕ್ಕೆ ಸೇರಿ, ಉಳಿದದ್ದು ಎದರೊಂದು ಕಡೆ ಹೊರಬಂದು ಹರಿಯಬೇಕು. ಹಾಗೆ ಹರಿಯಲು ಸಾಧ್ಯವಾಗದೆ ಎಲ್ಲೂ ಕಲ್ಲಿನ ಮತ್ತು ಕಾಂಕ್ರೀಟಿನ





ಅಡ್ಡಗೋಡೆಗಳು ತಡೆಯಾದರೆ, ಅಥವಾ ಗುಡ್ಡದ ಮೈ ನೀರಿನ ಹರಿವಿಗೆ ಸುಲಭವಾಗಿ ಒದಗದೆ ಇದ್ದಕ್ಕಿದ್ದಂತೆ ಕತ್ತರಿಸಿ ತೆಗೆದಿಟ್ಟಂತೆ ಇದ್ದರೆ ಅಪಾರ ಪ್ರಮಾಣದ ನೀರು ಒಂದೇ ಸಲಕ್ಕೆ ಒತ್ತಡ ಹಾಕಬಹುದು. ಆಗ ಮಣ್ಣು ಜರಿಯಬಹುದು. ಜುಲೈಯಲ್ಲಿ ಉಂಟಾದ ಒಸರುಗಳು ನವೆಂಬರ್ ವರೆಗೂ ಹಳ್ಳಗಳಿಗೆ ನೀರನ್ನು ಕಳಿಸುತ್ತಾ ಇರುತ್ತವೆ.

ನೆನಪುಗಳು ಕೂಡ ಈ ಒರತೆಗಳಂತೆ. ಐದು: ವಿಕ್ಟರ್ ಹ್ಯೂಗೋ ಫ್ರಾನ್ಸಿನ ವಿಖ್ಯಾತ ಕಾದಂಬರಿಕಾರ, ಕವಿ. ಇವನು 1829ರಲ್ಲಿ ಒಂದು ಒಪ್ಪಂದ ಮಾಡಿಕೊಂಡ. 12 ತಿಂಗಳಲ್ಲಿ ಪ್ರಕಾಶಕರಿಗೆ ಒಂದು ಕಾದಂಬರಿ ಕೊಡಬೇಕು. ದೊಡ್ಡ ಮೊತ್ತದ ಕಾಸು ಪಡೆದುಕೊಂಡ. ಹ್ಯೂಗೋಗೆ ಸಾರ್ವಜನಿಕ ಸಭೆ, ಭಾಷಣ, ಬೆರೆಯುವಿಕೆಯ ಹುಚ್ಚು. 12 ತಿಂಗಳು ಹೀಗೆ ಸುತ್ತಾಡುತ್ತಾ, ಜಾಲಿ ಮಾಡುತ್ತಾ ಕಳೆದ. ಅವಧಿ ಮುಗಿಯುತ್ತಲೇ ಪ್ರಕಾಶಕರಿಂದ ಎಚ್ಚರಿಕೆ ಬಂತು– ಇನ್ನು ಆರು ತಿಂಗಳಲ್ಲಿ ಕಾದಂಬರಿ ಕೊಡದಿದ್ದರೆ ಹಣ ವಾಪಸ್ ಕೊಡಬೇಕು. ಹ್ಯೂಗೋಗೆ ತನ್ನ ಸೋಶಿಯಲ್ ಹುಚ್ಚು ದುಬಾರಿಯಾಯಿತು ಎಂಬುದು ಗೊತ್ತಾಯಿತು.

ಸೊಂಟದ ಕೆಳಗಿನ ಒಂದು ತುಂಡು ಬಟ್ಟೆ ಹೊರತುಪಡಿಸಿ ಉಳಿದ ಎಲ್ಲ ಬಟ್ಟೆಯನ್ನೂ ಬೀರುವಿನಲ್ಲಿ ಲಾಕ್ ಮಾಡಿ, ತನಗೆ ಕೊಡಬೇಡ ಎಂದು ಸಹಾಯಕನಿಗೆ ಎಚ್ಚರಿಸಿ, ಬರೆಯುತ್ತಾ ಕೂತು ಬಿಟ್ಟ. ಈಗ ಹೊರಗೆ ಹೋಗುವುದೂ, ಅತಿಥಿಗಳನ್ನು ಬರಮಾಡಿಕೊಳ್ಳುವುದೂ ಸಾಧ್ಯವಿಲ್ಲವಲ್ಲ!

ಆರು ತಿಂಗಳಿಗೂ ಎರಡು ವಾರ ಮೊದಲೇ ಅವನ ಖ್ಯಾತ ಕಾದಂಬರಿ ಹಂಚ್‌ಬ್ಯಾಕ್ ಆಫ್ ನೋತ್ರೆಡೇಮ್ ಪ್ರಕಾಶಕರ ಕೈ ಸೇರಿತು. ನಾವೂ ಮೊಬೈಲ್ ಎಂಬ ಬಟ್ಟೆಯನ್ನು ಕೈಗೆ ಸಿಗದಂತೆ ಬಚ್ಚಿಟ್ಟು ಬೆತ್ತಲಾದರೆ ಮಾತ್ರ ಏನನ್ನಾದರೂ ಬರೆಯಬಹುದು, ಓದಬಹುದು ಅಂತ ಎಷ್ಟೋ ಸಲ ಅನಿಸಿದ್ದಿದೆಯಾ? ಆರು: ಇದು ರವೀಂದ್ರನಾಥ ಟ್ಯಾಗೋರ್ ಅವರ ಗೀತಾಂಜಲಿಯ ಒಂದು ಪದ್ಯದ ಭಾವಾನುವಾದ: ದಿನದಿನವೂ ನಾನು ನನ್ನ ಕಾಗದದ ದೋಣಿಗಳ ತೊರೆಯಲ್ಲಿ ತೇಲಿ ಬಿಡುವೆ.

ದೊಡ್ಡ ಕಪ್ಪು ಅಕ್ಷರಗಳಲ್ಲಿ ನನ್ನ ಮತ್ತು ನಾನು ವಾಸಿಸುವ ಊರಿನ ಹೆಸರನ್ನು ಅದರಲ್ಲಿ ಬರೆಯುವೆ. ಎಲ್ಲೋ ಯಾವುದೋ ವಿಚಿತ್ರ ಊರಲ್ಲಿ ಯಾರೋ ಒಬ್ಬ ನನ್ನನ್ನು ಗುರುತಿಸುವನೆಂಬ ಭರವಸೆ. ಆ ದೋಣಿಗಳಲ್ಲಿ ನನ್ನ ಉದ್ಯಾನದ ಪುಟ್ಟ ಹೂಗಳ ತುಂಬಿಸುವೆ. ಮುಂಜಾನೆ ಅರಳಿದ ಈ ಹೂಗಳು ರಾತ್ರಿ ಸುರಕ್ಷಿತವಾಗಿ ತಲುಪುವುದೆಂಬ ಆಸೆ. ದೋಣಿಗಳ ಬಿಡುವಾಗ ತಲೆ ಮೇಲೆತ್ತಿ ಆಕಾಶವನ್ನು ನೋಡುವೆ, ಪುಟ್ಟ ಮೋಡಗಳು ಒಟ್ಟಾಗಿ ದೊಡ್ಡ ಹಾಯಿಪಟದ ಹಡಗಾಗುವುದನ್ನು. ಆಕಾಶದಲ್ಲಿ ನನ್ನ ಜೊತೆ ಸ್ಪರ್ಧಿಸುತ್ತಿರುವ ಆ ಜೊತೆಗಾರ ಗಾಳಿಯಲ್ಲಿ ಅವುಗಳನ್ನು ತೇಲಿ ಬಿಡುವನು.

ರಾತ್ರಿಯಾದಾಗ ತೋಳುಗಳಲ್ಲಿ ಮುಖ ಹುದುಗಿಸಿ, ತಾರೆಗಳ ಬೆಳಕಿನಲ್ಲಿ ತೇಲುವ ಕಾಗದದ ದೋಣಿಗಳ ಕನಸು ಕಾಣುವೆ. ಬುಟ್ಟಿಗಳಲ್ಲಿ ಕನಸುಗಳ ತುಂಬಿಕೊಂಡ ನಿದ್ರೆಯ ದೇವತೆಗಳು ಅವುಗಳಲ್ಲಿ ಚಲಿಸುತ್ತಿರುವರು. ಏಳು: ಜಪಾನಿನ ಜನಪದ ಕತೆಯೊಂದಿದೆ. ಅದರಲ್ಲಿ ಒಬ್ಬ ಕಮ್ಮಾರ. ಅವನ ಕೆಲಸ ಚೆನ್ನಾಗಿತ್ತು. ಆದರೆ ಅದೃಷ್ಟ ಇರಲಿಲ್ಲ. ಒಂದು ದಿನ ದಾರಿಯಲ್ಲಿ ಚಕಮಕ ಓಡಾಡುವ ಚುರುಕಾದ ಅಳಿಲೊಂದನ್ನು ಕಂಡ. ಮಾರುಹೋದ. ಮನೆಗೆ ಬಂದು ಅದರದೇ ಧ್ಯಾನದಲ್ಲಿ ತಾನು ತಯಾರಿಸುವ ಕತ್ತಿ, ಚೂರಿ, ಹಾರೆ ಇತ್ಯಾದಿಗಳ ಮೇಲೆ ಅಳಿಲಿನ ಸುಂದರ ಕೆತ್ತನೆ ಮಾಡಿದ. ಅದೃಷ್ಟ ಕೈಹಿಡಿಯಿತು.

ಜನ ಈತನ ಕೌಶಲಕ್ಕೆ ಮಾರುಹೋಗಿ ಅವನ ಮನೆಯ ಮುಂದೆ ಸಾಲು ನಿಂತು ಕೊಂಡುಕೊಳ್ಳ ತೊಡಗಿದರು. ಅಲ್ಪ ಅವಧಿಯಲ್ಲಿ ಶ್ರೀಮಂತನಾದ. ಪುರುಸೊತ್ತೇ ಇಲ್ಲದಷ್ಟು ಕೆಲಸ. ಅದರ ಜೊತೆಗೆ ಇನ್ನೊಂದು– ರಾತ್ರಿಯೆಲ್ಲ ಅವನ ಕನಸಿನಲ್ಲಿ ಒಂದು ಅಳಿಲು ಬಂದು ಆಡುತ್ತಿತ್ತು. ಅದರಿಂದ ಅವನ ನಿದ್ರೆ ಕೆಡುತ್ತಿತ್ತು. ನಿದ್ರೆ ಕೆಟ್ಟು ಹುಚ್ಚನಂತಾದ. ಒಂದು ರಾತ್ರಿ ಹೀಗೇ ಕನಸಿನಲ್ಲಿ ಬಂದ ಅಳಿಲನ್ನು, ಆ ಕತ್ತಿ ಬೀಸಿ ಕೊಂದುಹಾಕಿದ. ಮರುದಿನದಿಂದ ಅವನಿಗೆ ಅಳಿಲಿನ ಚಿತ್ರವನ್ನೇ ಬಿಡಿಸಲು ಸಾಧ್ಯವಾಗಲಿಲ್ಲ. ಅಳಿಲಿಲ್ಲದ ಸಾಧನಗಳನ್ನು ಜನ ಕೊಂಡುಕೊಳ್ಳಲಿಲ್ಲ. ಅವನಿಂದ ದೂರ ಹೋದರು. ಅತ್ಯಲ್ಪ ಅವಧಿಯಲ್ಲಿ ಬಂದ ಹಣವನ್ನೂ ಕಳೆದುಕೊಂಡು ಮತ್ತೆ ಮೊದಲಿನಂತೆಯೇ ಆದ.

**- ಹರೀಶ್** ಕೇರ

---





# ಸೀತಾಫಲದ ಸೇವನೆ ಮಧುಮೇಹಿಗಳಿಗೆ ಸುರಕ್ಷಿತವೇ?

ಈಗಷ್ಟೇ ಸೀತಾಫಲ ಮತ್ತು ರಾಮಫಲದ ಸೀಸನ್ ಪ್ರಾರಂಭವಾಗತೊಡಗಿದೆ. ಸೀತಾಫಲ ಮತ್ತು ರಾಮಫಲವು ಚೆನ್ನಾಗಿ ಹಣ್ಣಾದಾಗ ಬಹಳ ಸೊಗಸಾಗಿರುತ್ತದೆ. ಅದ್ಭುತ ರುಚಿ ಮತ್ತು ಸುವಾಸನೆ. ಸ್ವಲ್ಪ ಮಟ್ಟಿಗೆ ಬೀಜದ ತೊಂದರೆ ಹೊರತು ಪಡಿಸಿದರೆ ತಿನ್ನಲು ರುಚಿಕರ. ಸೀತಾಫಲದಲ್ಲಿ ಈಗ ಹೈಬ್ರಿಡ್ ಸೀತಾಫಲ (ಗೋಲ್ಡನ್) ಮಾರುಕಟ್ಟೆಗೆ ಬಂದಿದೆ. ನೋಡಲು ಸೊಗಸಾಗಿ, ದೊಡ್ಡ ಗಾತ್ರ ಹೊಂದಿದ್ದರೂ ಒಳ ತಿರುಳು ಅಷ್ಟಾಗಿ ಚೆನ್ನಾಗಿಲ್ಲ. ಮಾಮೂಲು ನಮ್ಮ ಸ್ಥಳೀಯ ಸೀತಾಫಲವೇ ರುಚಿಯಲ್ಲಿ ನಂಬರ್ ಒನ್ ಎನ್ನಬಹುದು.

ಸೀತಾಫಲ ಹಣ್ಣು ರುಚಿಯ ಜೊತೆಗೆ ಪೌಷ್ಟಿಕಾಂಶಗಳಿಗಾಗಿಯೂ ಪ್ರಸಿದ್ಧವಾಗಿದ್ದು, ಮಕ್ಕಳಿಂದ ಹಿಡಿದು ವಯಸ್ಕರವರೆಗೂ ಎಲ್ಲರೂ ಇಷ್ಟಪಡುವ ಹಣ್ಣುಗಳಲ್ಲೊಂದು. ಆದರೆ ಮಧುಮೇಹ (ಸಕ್ಕರೆ ಕಾಯಿಲೆ/ ಡಯಾಬಿಟೀಸ್) ಇರುವವರು ಸೀತಾಫಲ ತಿನ್ನಬಹುದೇ ಎಂಬ ಪ್ರಶ್ನೆ ಸಾಮಾನ್ಯವಾಗಿ ಕೇಳಿಬರುತ್ತದೆ. ತಜ್ಞರ ಪ್ರಕಾರ, ಸೀತಾಫಲದಲ್ಲಿ ನೈಸರ್ಗಿಕ ಸಕ್ಕರೆಯ ಪ್ರಮಾಣ ಇರುವುದರಿಂದ ಮಧುಮೇಹಿಗಳು ಇದನ್ನು ಎಚ್ಚರಿಕೆಯಿಂದ ಸೇವಿಸಬೇಕು. ಆದರೆ ಸಂಪೂರ್ಣವಾಗಿ ತ್ಯಜಿಸುವ ಅಗತ್ಯವಿಲ್ಲ, ಸರಿಯಾದ ಪ್ರಮಾಣ ಮತ್ತು ಸಮಯದಲ್ಲಿ ಸೇವಿಸಿದರೆ ಇದು ಆರೋಗ್ಯಕ್ಕೆ ಹಾನಿ ಮಾಡುವುದಿಲ್ಲ.

ಪೌಷ್ಟಿಕಾಂಶಗಳ ದೃಷ್ಟಿಯಿಂದ ನೋಡಿದರೆ, ಸೀತಾಫಲದಲ್ಲಿ ವಿಟಮಿನ್, ವಿಟಮಿನ್, ಪೊಟ್ಯಾಸಿಯಮ್, ಮೆಗ್ನಿಸಿಯಮ್ ಮತ್ತು ಕಬ್ಬಿಣ ಸಮೃದ್ಧವಾಗಿದೆ. ಇವು ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವುದರ ಜೊತೆಗೆ ಹೃದಯದ ಆರೋಗ್ಯ ಕಾಪಾಡಲು ಸಹಕಾರಿಯಾಗುತ್ತವೆ. ವಿಶೇಷವಾಗಿ ಪೊಟ್ಯಾಸಿಯಮ್ ಮತ್ತು ಮೆಗ್ನೀಸಿಯಮ್ ರಕ್ತದೊತ್ತಡ ನಿಯಂತ್ರಣಕ್ಕೆ ನೆರವಾಗುತ್ತವೆ. ಸೀತಾಫಲದಲ್ಲಿರುವ ಫೈಬರ್ ಜೀರ್ಣಕ್ರಿಯೆಯನ್ನು ಸುಧಾರಿಸುವುದರ ಜೊತೆಗೆ ರಕ್ತದಲ್ಲಿನ ಸಕ್ಕರೆಯ ಮಟ್ಟ ನಿಧಾನವಾಗಿ ಏರಲು ಸಹಾಯ ಮಾಡುತ್ತದೆ, ಇದು ಮಧುಮೇಹಿಗಳಿಗೆ ಮುಖ್ಯವಾಗಿದೆ.

ಆದರೆ ಸೀತಾಫಲದಲ್ಲಿ ನೈಸರ್ಗಿಕ ಸಕ್ಕರೆ ಪ್ರಮಾಣ ಸ್ವಲ್ಪ ಹೆಚ್ಚಿರುವುದರಿಂದ ನಿಯಂತ್ರಿತ ಸೇವನೆ ಅಗತ್ಯ. ಮಧುಮೇಹಿಗಳು ಇದನ್ನು ಪ್ರತಿದಿನ ಸೇವಿಸುವುದನ್ನು ತಪ್ಪಿಸಿ, ಒಂದು ಸಣ್ಣ ಗಾತ್ರದ ಸೀತಾಫಲವನ್ನು 2 ರಿಂದ 3 ದಿನಗಳಿಗೊಮ್ಮೆ ಮಾತ್ರ ಸೇವಿಸುವುದು ಉತ್ತಮ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಅದೂ ಖಾಲಿ ಹೊಟ್ಟೆಯಲ್ಲಿ ತಿನ್ನುವುದಕ್ಕಿಂತ ಊಟದ ನಂತರ ಸೇವಿಸುವುದು ಸುರಕ್ಷಿತ ಎಂದು ತಜ್ಞರು ಸಲಹೆಯನ್ನೂ ನೀಡುತ್ತಾರೆ. ಹೀಗೆ ಮಾಡಿದರೆ ರಕ್ತದಲ್ಲಿನ ಸಕ್ಕರೆಯ ಮಟ್ಟ ತಕ್ಷಣ ಏರಿಕೆಯಾಗುವುದನ್ನು ತಪ್ಪಿಸಬಹುದು. ಇನ್ನೂ ಒಂದು ಪ್ರಮುಖ ಅಂಶವೆಂದರೆ ಪ್ರತಿಯೊಬ್ಬರ ದೇಹದ ಪ್ರತಿಕ್ರಿಯೆ ವಿಭಿನ್ನವಾಗಿರುತ್ತದೆ. ಕೆಲವರಿಗೆ ಸೀತಾಫಲ ಸೇವನೆಯಿಂದ ಯಾವುದೇ ಸಮಸ್ಯೆ ಕಾಣಿಸದಿದ್ದರೂ, ಇನ್ನು ಕೆಲವರಲ್ಲಿ ಸಕ್ಕರೆ ಮಟ್ಟ ಏರಿಕೆಯಾಗಬಹುದು. ಆದ್ದರಿಂದ ಸೀತಾಫಲ ಸೇವಿಸುವ ಮೊದಲು ಮತ್ತು ನಂತರ ರಕ್ತದ ಸಕ್ಕರೆ ಮಟ್ಟವನ್ನು ಪರೀಕ್ಷಿಸುವುದು ಒಳಿತು. ಅದು ನಿಯಂತ್ರಣದಲ್ಲಿದ್ದರೆ ಮಾತ್ರ ಮುಂದುವರಿಸಿ ಸೇವಿಸಬಹುದು. ಒಟ್ಟಾರೆಯಾಗಿ ಮಧುಮೇಹಿಗಳು ಸೀತಾಫಲವನ್ನು ಸಂಪೂರ್ಣವಾಗಿ ಬಿಡಬೇಕಾದ ಅಗತ್ಯವಿಲ್ಲ. ಆದರೆ ನಿಯಮಿತ ಪ್ರಮಾಣ, ಸರಿಯಾದ ಸಮಯ ಮತ್ತು ವೈದ್ಯರ ಸಲಹೆಯನ್ನು ಪಾಲಿಸಿಕೊಂಡು ಸೇವಿಸಿದರೆ ಆರೋಗ್ಯಕರ ಪ್ರಯೋಜನಗಳನ್ನು ಪಡೆಯಬಹುದು.

ಸೀತಾಫಲ ಹಣ್ಣಿನ ರಸವನ್ನು ಮಾಡಿ ಕುಡಿಯುದಕ್ಕಿಂದ ಅದನ್ನು ನೇರವಾಗಿ ಸೇವನೆ ಮಾಡುವುದು ಉತ್ತಮ. ಈಗ ಮಿಲ್ಕ್ ಶೇಕ್, ಐಸ್ ಕ್ರೀಂ ಎಲ್ಲವೂ ಮಾರುಕಟ್ಟೆಗೆ ಬಂದಿದೆ. ಸೀತಾಫಲದಂತೆಯೇ ರುಚಿಕರ ರಾಮಫಲ, ಹನುಮಫಲ, ಲಕ್ಷ್ಮಣ ಫಲ ಎಲ್ಲವೂ ಆರೋಗ್ಯಕ್ಕೆ ಬಹಳ ಉತ್ತಮ. ಆದರೆ ಮಧುಮೇಹಿಗಳು ಮಾತ್ರ ತಮ್ಮ ಬಾಯಿ ರುಚಿಯನ್ನು ನಿಯಂತ್ರಿಸಿದರೆ ಸಾಕು. ಅಲ್ಪ ಪ್ರಮಾಣದಲ್ಲಿ, ವೈದ್ಯರ ಸಲಹೆ ಮೇರೆಗೆ, ತಮ್ಮ ರಕ್ತದಲ್ಲಿನ ಸಕ್ಕರೆ ಅಂಶವನ್ನು ಪರಿಶೀಲಿಸಿಕೊಂಡು ತಿನ್ನಬಹುದಾಗಿದೆ.

**- ಕೆ.ಪಿ.ಅಶ್ವಿನ್** ರಾವ್

---

# ಸೋಲಿನ ದವಡೆಯಿಂದ ಗೆಲುವಿನ ದಡಕ್ಕೆ

**“ ನಷ್ಟದಲ್ಲಿದ್ದ ನೂರಾರು ಮಳಿಗೆಗಳನ್ನು ಮುಚ್ಚಿ, ಸುಮಾರು 450 ರಿಂದ 500 ಅತ್ಯಂತ ಲಾಭದಾಯಕ ಕೆಫೆಗಳ ಮೇಲೆ ಮಾತ್ರ ಗಮನ ಕೇಂದ್ರೀಕರಿಸಿದರು. ನಿರ್ವಹಣಾ ವೆಚ್ಚ ಕಡಿಮೆ ಇರುವ ಕಾರ್ಪೊರೇಟ್ ಕಾಫಿ ವೆಂಡಿಂಗ್ ಮೆಷಿನ್‌ಗಳ ಸಂಖ್ಯೆಯನ್ನು 50000ಕ್ಕೂ ಹೆಚ್ಚು ಕಚೇರಿಗಳಿಗೆ ವಿಸ್ತರಿಸಿದರು. ಈ ನಿಖರ ನಿರ್ಧಾರಗಳ ಫಲವಾಗಿ, 2019ರಲ್ಲಿ ರು.7200 ಕೋಟಿಗೂ ಅಧಿಕವಾಗಿದ್ದ ಸಾಲವು, 2021ರ ವೇಳೆಗೆ ರು.1731 ಕೋಟಿಗೆ, ನಂತರ ರು.800 - ರು.1000 ಕೋಟಿಯ ಆಸುಪಾಸಿಗೆ ಇಳಿಯಿತು**



ಒಂದೊಳ್ಳೆ ಮಾತು

ಜೀವನದಲ್ಲಿ ಎಲ್ಲವೂ ಮುಗಿದೇ ಹೋಯಿತು ಎಂದು ಜಗತ್ತು ಭಾವಿಸಿದಾಗ, ಅಲ್ಲೇ ಹೊಸದೊಂದು ಅಧ್ಯಾಯವನ್ನು ಆರಂಭಿಸುವ ಧೈರ್ಯ ಕೆಲವರಿಗಷ್ಟೇ ಇರುತ್ತದೆ. ಅಂಥದ್ದೊಂದು ಅಪರೂಪದ ಛಲದ ಕಥೆ ಇದು. 2019ರ ಆ ಒಂದು ದಿನ ಭಾರತದ ಇಡೀ ಕಾರ್ಪೊರೇಟ್ ಜಗತ್ತು ದಿಗ್ಭ್ರಮೆಗೊಂಡಿತ್ತು.

ಭಾರತೀಯರಿಗೆ ಕಾಫಿ ಸಂಸ್ಕೃತಿಯನ್ನು ಹೊಸ ರೀತಿಯಲ್ಲಿ ಪರಿಚಯಿಸಿದ ಕೆಫೆ ಕಾಫಿ ಡೇ (ಸಿಸಿಡಿ) ಸಂಸ್ಥಾಪಕ ವಿ.ಜಿ.ಸಿದ್ಧಾರ್ಥ ಅವರ ಅನಿರೀಕ್ಷಿತ ಸಾವು ಎಲ್ಲರನ್ನೂ ಬೆಚ್ಚಿಬೀಳಿಸಿತ್ತು. ಅವರ ಅಗಲಿಕೆಯ ಬೆನ್ನಲ್ಲೇ ಸುಮಾರು ರು.7200 ಕೋಟಿಗಳ ಬೃಹತ್ ಸಾಲದ ಹೊರೆ, ಬ್ಯಾಂಕುಗಳ ನೋಟಿಸ್‌ಗಳು, ಷೇರು ಮಾರುಕಟ್ಟೆಯ ಕುಸಿತ ಮತ್ತು ಅನಿಶ್ಚಿತತೆಯಲ್ಲಿ ಸಿಲುಕಿದ 25000ಕ್ಕೂ ಹೆಚ್ಚು ಉದ್ಯೋಗಿಗಳ ಭವಿಷ್ಯ... ಸಂಬಂಧಿಸಿದ ಪ್ರತಿಯೊಬ್ಬರೂ ಆತಂಕಕ್ಕೆ ಸಿಲುಕಿದರು. ಆದರೆ, ದುಃಖದ ಕಡಲಿನಲ್ಲಿ ಮುಳುಗಿ ಹೋಗಬೇಕಿದ್ದ ಆ ಕ್ಷಣದಲ್ಲಿ ಧೃತಿಗೆಡದೆ ಮುನ್ನೆಲೆಗೆ ಬಂದವರು ಅವರ ಪತ್ನಿ ಮಾಳವಿಕಾ ಹೆಗ್ಡೆ.

ಕಣ್ಣೀರಿನಲ್ಲೇ ಕಾಲ ಕಳೆಯುವ ಬದಲು, ಪತಿಯ ಕನಸಿನ ಸಾಮ್ರಾಜ್ಯವನ್ನು ಉಳಿಸಿಕೊಳ್ಳುವ ಮಹತ್ತರ ಜವಾಬ್ದಾರಿಯನ್ನು ಹೊತ್ತು ಡಿಸೆಂಬರ್ 2020ರಲ್ಲಿ ಸಿಇಒ ಆಗಿ ಅಧಿಕಾರ ವಹಿಸಿ ಕೊಂಡರು. ಅವರ ಮುಂದೆ ಇದ್ದದ್ದು ಕೇವಲ ಸಾಲದ ದೊಡ್ಡ ಬೆಟ್ಟ ಮಾತ್ರವಲ್ಲ; ಸಮಾಜದ ಅಪನಂಬಿಕೆಗಳೂ ಹೌದು. ಅವರು ಕೈಚೆಲ್ಲಲಿಲ್ಲ, ಬದಲಿಗೆ ಕರಾರುವಾಕ್ ಲೆಕ್ಕಾಚಾರಗಳೊಂದಿಗೆ ರಣರಂಗಕ್ಕಿಳಿದರು: ಬೆಂಗಳೂರಿನ 90 ಎಕರೆ ವಿಸ್ತೀರ್ಣದ ಗ್ಲೋಬಲ್ ವಿಲೇಜ್ ಟೆಕ್ ಪಾರ್ಕ್ ಅನ್ನು ಬ್ಲಾಕ್‌ಸ್ಟೋನ್ ಸಂಸ್ಥೆಗೆ ಸುಮಾರು ರು.2700 ಕೋಟಿಗೆ ಮಾರಿ, ನೇರವಾಗಿ ಬ್ಯಾಂಕ್ ಸಾಲ ತೀರಿಸಿದರು. ಸಮಯ ಮತ್ತು ಕ್ಯಾಲೆಂಡರ್ ಆಪ್‌ಗಳನ್ನು ಆಯ್ಕೆ ಮಾಡುವುದು

ನಷ್ಟದಲ್ಲಿದ್ದ ನೂರಾರು ಮಳಿಗೆಗಳನ್ನು ಮುಚ್ಚಿ, ಸುಮಾರು 450 ರಿಂದ 500 ಅತ್ಯಂತ ಲಾಭದಾಯಕ ಕೆಫೆಗಳ ಮೇಲೆ ಮಾತ್ರ ಗಮನ ಕೇಂದ್ರೀಕರಿಸಿದರು. ನಿರ್ವಹಣಾ ವೆಚ್ಚ ಕಡಿಮೆ ಇರುವ ಕಾರ್ಪೊರೇಟ್ ಕಾಫಿ ವೆಂಡಿಂಗ್ ಮೆಷಿನ್‌ಗಳ ಸಂಖ್ಯೆಯನ್ನು 50000ಕ್ಕೂ ಹೆಚ್ಚು ಕಚೇರಿಗಳಿಗೆ ವಿಸ್ತರಿಸಿ ದರು. ಈ ನಿಖರ ನಿರ್ಧಾರಗಳ ಫಲವಾಗಿ, 2019ರಲ್ಲಿ ರು.7200 ಕೋಟಿಗೂ ಅಧಿಕವಾಗಿದ್ದ ಸಾಲವು, 2021ರ ವೇಳೆಗೆ ರು.1731 ಕೋಟಿಗೆ, ನಂತರ ರು.800 - ರು.1000 ಕೋಟಿಯ ಆಸುಪಾಸಿಗೆ ಇಳಿಯಿತು. ಮುಳುಗುತ್ತಿದ್ದ ಸಂಸ್ಥೆಯೂ ಉಳಿಯಿತು, ಸಾವಿರಾರು ಕುಟುಂಬಗಳ ಅನ್ನದ ದಾರಿಯೂ ರಕ್ಷಿಸಲ್ಪಟ್ಟಿತು.



ಸಂಕಷ್ಟಗಳು ಎಷ್ಟೇ ದೊಡ್ಡದಾಗಿರಲಿ, ಅಂಕಿ-ಅಂಶಗಳು ಎಷ್ಟೇ ಪ್ರತಿಕೂಲವಾಗಿರಲಿ ಮನಸ್ಸಿನಲ್ಲಿ ಪ್ರಾಮಾಣಿಕತೆ ಮತ್ತು ಎದುರಿಸುವ ಗಟ್ಟಿ ಛಲವಿದ್ದರೆ ಮುಳುಗುತ್ತಿರುವ ಹಡಗನ್ನೂ ದಡ ಸೇರಿಸಬಹುದು ಎಂಬುದಕ್ಕೆ ಮಾಳವಿಕಾ ಹೆಗ್ಡೆ ಅವರ ಹೋರಾಟವೇ ಸಾಕ್ಷಿ. ಕುಟುಂಬದಲ್ಲಿ ಅನೇಕ ಬಾರಿ ಮನೆಯ ಯಜಮಾನರ ಹಣಕಾಸಿನ ಪರಿಸ್ಥಿತಿ ಅವರ ವ್ಯವಹಾರಗಳು ಮನೆಯವರಿಗೆ ಗೊತ್ತೇ ಇರುವುದಿಲ್ಲ. ಅವರಿಗೆ ಬೇಡದ ದುಡ್ಡಿನ ತಲೆನೋವು ಎಂದು ಮನೆಯ ಯಜಮಾನ ಯಾವುದನ್ನು ಮನೆಯವರಿಗೆ ಹೇಳುವುದಿಲ್ಲ.

ಇದರಲ್ಲಿ ಕಾಳಜಿ ಎಷ್ಟಿದೆಯೋ ಅಪಾಯವೂ ಅಷ್ಟೇ ಇದೆ. ಅವರಿಗೆ ಮಾತ್ರ ಈ ಹಣಕಾಸಿನ ವ್ಯವಹಾರ ಗೊತ್ತಿರುವುದರಿಂದ ಅಕಸ್ಮಾತ್ ಅವರಿಗೆ ಅಪಘಾತ ಅಥವಾ ಮತ್ತೇನಾದರೂ ಆದರೆ ಅಂತಹ ಜವಾಬ್ದಾರಿಗಳನ್ನ ನಿಭಾಯಿಸಲು ಯಾರು ಕೂಡ ತಕ್ಷಣಕ್ಕೆ ಸನ್ನದ್ಧರಾಗಿರುವುದಿಲ್ಲ. ಇದರಿಂದಾಗಿ ಅನೇಕ ಬಾರಿ ಸ್ನೇಹಿತರು ಹಿತೈಷಿಗಳಿಂದಲೇ ದುಡ್ಡಿನ ವಿಷಯದಲ್ಲಿ ಮೋಸವಾಗುವ ಸಾಧ್ಯತೆಗಳಿವೆ. ಅಷ್ಟೇ ಅಲ್ಲ ಬ್ಯಾಂಕ್ ವ್ಯವಹಾರಗಳಲ್ಲಿ ಸರಿಯಾಗಿ ನಾಮಿನಿಯ ಹೆಸರನ್ನು ಹಾಕದಿದ್ದರೆ ಹಾಕಿದರು ಅವರಿಗೆ ತಿಳಿಸದಿದ್ದರೆ ಕೆಲವರು ವ್ಯವಹಾರಗಳು ಬೆಳಕಿಗೆ ಬರದೇ ಹೋಗಬಹುದು. ಸಾಲದ ಕೊಡುಗೆಗಳನ್ನು ಹೋಲಿಸುವುದು

ಕುಟುಂಬದ ಸಂಪತ್ತನ್ನು ಮಕ್ಕಳಿಗೆ ಸರಿಯಾಗಿ ಹಂಚದೆ ವಿಲ್ ಬರೆಯದೆ ಹೋದ ತಂದೆ ತಾಯಿಗಳಿಂದಾಗಿ, ಅನೇಕ ಮಕ್ಕಳು ವರ್ಷಾನುಗಟ್ಟಲೆ ಆಸ್ತಿಗಾಗಿ ಹೊಡೆದಾಡುತ್ತ ತಮ್ಮ ಜೀವನವನ್ನೇ ಹಾಳು ಮಾಡಿಕೊಂಡಿದ್ದಾರೆ. ಇರುವಷ್ಟು ವರ್ಷ ಸಂತೋಷದಿಂದ ಬದುಕುವುದನ್ನು ಬಿಟ್ಟು ಕೋರ್ಟು ಕಚೇರಿಗಳ ಅಲೆದಾಟದಲ್ಲಿ ಜೀವನ ವ್ಯರ್ಥವಾಗಿರುವ ಅನೇಕ ಉದಾಹರಣೆಗಳು ನಮ್ಮ ಸುತ್ತಲೂ ಇದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಮನೆಯವರಿಗೆ ತೊಂದರೆಯಾದಾಗ ಪರಿಸ್ಥಿತಿ ಕಷ್ಟವಾದಾಗ ಧೃತಿಗೆಡದೆ ಅದನ್ನು ನಿಭಾಯಿಸುವ ಮನೋಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು. ಕಷ್ಟಗಳು ಬಂದಾಗ ಕುಸಿಯಬೇಡಿ, ಅವುಗಳನ್ನೇ ನಿಮ್ಮ ಗೆಲುವಿನ ಮೆಟ್ಟಿಲುಗಳನ್ನಾಗಿ ಮಾಡಿಕೊಳ್ಳಿ.

**- ರೂಪಾ** ಗುರುರಾಜ್

# ಶೀಘ್ರ ಮಲೆನಾಡು ಪ್ರವಾಸೋದ್ಯಮ ನೀತಿ ಕರಡು

## ಜನಪ್ರತಿನಿಧಿಗಳೊಂದಿಗೆ ಸಚಿವ ಕೆ.ಜೆ. ಜಾರ್ಜ್ ಸಭೆ

• ಪ್ರಜೋದಯ ವರದಿ

**ಬೆಂಗಳೂರು:** ಮಲೆನಾಡು ಹಾಗು ಕರಾವಳಿ ಜಿಲ್ಲೆಗಳಲ್ಲಿರುವ ವೈವಿಧ್ಯಮಯ ಪ್ರವಾಸೋದ್ಯಮ ಸಾಮರ್ಥ್ಯವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ರೂಪಿಸಲಾಗುತ್ತಿರುವ ಕರಾವಳಿ- ಮಲೆನಾಡು ಪ್ರವಾಸೋದ್ಯಮ ನೀತಿಯ ಕರಡು ಸೆ.7ರೊಳಗೆ ಸಿದ್ಧಪಡಿಸಲಾಗುವುದು ಎಂದು ಇಂಧನ ಹಾಗು ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ಅವರು ತಿಳಿಸಿದರು.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಕರಾವಳಿ ಮತ್ತು ಮಲೆನಾಡು ಭಾಗದ ಜನಪ್ರತಿನಿಧಿಗಳೊಂದಿಗೆ ಅವರು ಸಭೆ ನಡೆಸಿದರು. ಈ ವೇಳೆ, ಪ್ರಸ್ತಾವಿತ ನೀತಿಯಲ್ಲಿ ಅಳವಡಿಸಬೇಕಾದ ಪ್ರಮುಖ ಅಂಶಗಳು, ಪ್ರವಾಸೋದ್ಯಮ ಹೂಡಿಕೆಗೆ ಇರುವ ಅವಕಾಶಗಳು ಹಾಗು ಪ್ರಸ್ತುತ ಎದುರಾಗುತ್ತಿರುವ ನಿಯಂತ್ರಣಾತ್ಮಕ ಸಮಸ್ಯೆಗಳ ಕುರಿತು ಸಮಗ್ರವಾಗಿ ಚರ್ಚಿಸಿದರು.

ಕರಾವಳಿ ಮತ್ತು ಮಲೆನಾಡು ಪ್ರದೇಶಗಳು ಕಡಲ ತೀರ, ಧಾರ್ಮಿಕ ಹಾಗು ಸಾಂಸ್ಕೃತಿಕ ತಾಣಗಳು, ಪ್ರಕೃತಿ ಪ್ರವಾಸೋದ್ಯಮ ಸೇರಿದಂತೆ ವೈವಿಧ್ಯಮಯ ಪ್ರವಾಸೋದ್ಯಮ ಸಂಪನ್ಮೂಲಗಳನ್ನು ಹೊಂದಿವೆ. ಈ ಸಾಮರ್ಥ್ಯವನ್ನು ಬಳಸಿಕೊಂಡು ಸ್ಥಳೀಯ ಆರ್ಥಿಕತೆ, ಹೂಡಿಕೆ ಹಾಗೂ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ರೀತಿಯಲ್ಲಿ ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿಗೆ ನೀತಿ ರೂಪಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.




### ಪ್ರವಾಸೋದ್ಯಮ ಚಟುವಟಿಕೆಗಳಿಗೆ ಅನುಕೂಲ

ಸಚಿವ ರಿಜ್ವಾನ್ ಅರ್ಷದ್ ಅವರು ಜಿಲ್ಲೆಯಲ್ಲಿ ಹೋಟೆಲ್‌ಗಳು ಹಾಗೂ ಪ್ರವಾಸೋದ್ಯಮ ಚಟುವಟಿಕೆಗಳನ್ನು ವಿಸ್ತರಿಸಲು ಅನುಕೂಲಕರ ವಾತಾವರಣ ನಿರ್ಮಿಸುವ ಅಗತ್ಯವನ್ನು ಪ್ರಸ್ತಾಪಿಸಿದರು. ಪ್ರವಾಸಿಗರ ಬೇಡಿಕೆ ಹಾಗೂ ಪ್ರವಾಸೋದ್ಯಮ ಚಟುವಟಿಕೆಗಳ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ಕಾರ್ಯಾಚರಣೆಗೆ ಅಗತ್ಯವಿರುವ ಸಮಯ ಮತ್ತು ಸಂಬಂಧಿತ ವ್ಯವಸ್ಥೆಗಳ ಕುರಿತು ನೀತಿಯಲ್ಲಿ ಸೂಕ್ತ ಅವಕಾಶ ಕಲ್ಪಿಸುವಂತೆ ಸಲಹೆ ನೀಡಿದರು.

**ಹೂಡಿಕೆಗೆ ಸಿಂಗಲ್ ವಿಂಡೋ ವ್ಯವಸ್ಥೆಗೆ ಸಲಹೆ:**

ಸಭೆಯಲ್ಲಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆ ಮಾಡಲು ಮುಂದಾಗುವವರಿಗೆ ವಿವಿಧ ಇಲಾಖೆಗಳ ಅನುಮತಿಗಳನ್ನು ಪಡೆಯುವ ಪ್ರಕ್ರಿಯೆಯನ್ನು ಸರಳಗೊಳಿಸುವ ಅಗತ್ಯವನ್ನು ಜನಪ್ರತಿನಿಧಿಗಳು ಪ್ರಸ್ತಾಪಿಸಿದರು.

ಶಾಸಕ ವಿ.ಸುನಿಲ್ ಕುಮಾರ್ ಅವರು ಕರಾವಳಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆಗೆ ಉತ್ತೇಜನ ನೀಡಲು ಸಿಂಗಲ್ ವಿಂಡೋ ವ್ಯವಸ್ಥೆ ಕಲ್ಪಿಸುವಂತೆ ಸಲಹೆ ನೀಡಿದರು. ವಿವಿಧ ಅನುಮತಿಗಳು ಮತ್ತು ಇಲಾಖೆಗಳ ಸಮನ್ವಯಕ್ಕೆ ಸರಳ ವ್ಯವಸ್ಥೆ ರೂಪಿಸುವುದು ಹೊಸ ಹೂಡಿಕೆಗಳನ್ನು ಆಕರ್ಷಿಸಲು ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು.

**ಪರಿಸರ-ಅರಣ್ಯ ನಿಯಮಗಳ-ಚರ್ಚೆ:**

ಸಚಿವ ಯು.ಟಿ. ಖಾದರ್ ಅವರು ಕರಾವಳಿ ಭಾಗದಲ್ಲಿ ಪ್ರವಾಸೋದ್ಯಮಕ್ಕೆ ಅಪಾರ ಅವಕಾಶಗಳಿದ್ದರೂ, ಸಿಆರ್‌ಝಡ್, ಪರಿಸರ ಸೂಕ್ಷ್ಮ ವಲಯ ಹಾಗು ಅರಣ್ಯ ಇಲಾಖೆಗೆ ಸಂಬಂಧಿಸಿದ ವಿವಿಧ ನಿಯಮಗಳಿಂದಾಗಿ ಕೆಲವು ಪ್ರವಾಸೋದ್ಯಮ ಯೋಜನೆಗಳ ಅನುಷ್ಠಾನದಲ್ಲಿ ಸಮಸ್ಯೆಗಳು ಎದುರಾಗುತ್ತಿವೆ ಎಂದು ತಿಳಿಸಿದರು. ಕರಾವಳಿ ಪ್ರದೇಶದ ಪರಿಸರ ಸಂರಕ್ಷಣೆಯನ್ನು ಖಚಿತಪಡಿಸಿಕೊಂಡೇ ಪ್ರವಾಸೋದ್ಯಮ ಅಭಿವೃದ್ಧಿಗೆ ಅನುಕೂಲವಾಗುವ ರೀತಿಯಲ್ಲಿ ಸಂಬಂಧಿತ ನಿಯಮಗಳು ಮತ್ತು ಅನುಮತಿ ಪ್ರಕ್ರಿಯೆಗಳನ್ನು ಪರಿಶೀಲಿಸುವ ಅಗತ್ಯವಿದೆ ಎಂದು ಅವರು ಸಲಹೆ ನೀಡಿದರು.

ಕರಾವಳಿ ಮತ್ತು ಮಲೆನಾಡು ಕರ್ನಾಟಕದ ಪ್ರವಾಸೋದ್ಯಮದ ಪ್ರಮುಖ ಆಸ್ತಿಗಳಾಗಿವೆ. ಇಲ್ಲಿನ ಪ್ರವಾಸೋದ್ಯಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸ್ಥಳೀಯ ಅಗತ್ಯತೆಗಳು ಮತ್ತು ಜನಪ್ರತಿನಿಧಿಗಳ ಸಲಹೆಗಳನ್ನು ಒಳಗೊಂಡ ಸಮಗ್ರ ನೀತಿ ಅಗತ್ಯವಿದೆ. ಇಂದು ನಡೆದ ಸಭೆಯಲ್ಲಿ ಹಲವು ಪ್ರಮುಖ ಸಲಹೆಗಳು ಬಂದಿದ್ದು, ಅವುಗಳನ್ನು ಪರಿಶೀಲಿಸಿ ನೀತಿಯಲ್ಲಿ ಅಳವಡಿಸಲಾಗುವುದು. ಸೆಪ್ಟೆಂಬರ್ 7 ರೊಳಗೆ ಕರಡು ನೀತಿಯನ್ನು ಸಿದ್ಧಪಡಿಸುವ ಗುರಿ ಹೊಂದಿದ್ದೇವೆ ಎಂದು ಸಚಿವರು ತಿಳಿಸಿದರು.

# ಚೌಡೇಶ್ವರಿ ದೇವಸ್ಥಾನದಲ್ಲಿ ವರಮಹಾಲಕ್ಷ್ಮಿ ಹಬ್ಬದ ಸಂಭ್ರಮ

• ಪ್ರಜೋದಯ ವರದಿ



**ಬೇಲೂರು:** ದೇವಾಂಗ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ದೇವಾಂಗ ಸಂಘದ ವತಿಯಿಂದ 33ನೇ ವರ್ಷದ ವರ ಮಹಾಲಕ್ಷ್ಮಿ ಹಬ್ಬವನ್ನು ಭಕ್ತಿಭಾವ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.

ಹಬ್ಬದ ಅಂಗವಾಗಿ ದೇವಿಗೆ ವಿಶೇಷ ಅಲಂಕಾರ, ಪೂಜೆ, ಹೋಮ-ಹವನ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು.

ಈ ಸಂದರ್ಭದಲ್ಲಿ ಮಾತನಾಡಿದ ದೇವಾಂಗ ಸಂಘದ ಅಧ್ಯಕ್ಷ ವಸಂತ ಶೇಖರ್, ದೇವಾಂಗ ಸಮುದಾಯದ ಆರಾಧ್ಯ ದೇವತೆಯಾಗಿರುವ ತಾಯಿ ಚೌಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಪ್ರತಿ ವರ್ಷವೂ ವರಮಹಾಲಕ್ಷ್ಮಿ ಹಬ್ಬವನ್ನು ಶ್ರದ್ಧಾಭಕ್ತಿಯಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಈ ಬಾರಿಯೂ ವಿಶೇಷ ಪೂಜೆ ಹಾಗೂ ಹೋಮ- ಹವನಗಳನ್ನು ನೆರವೇರಿಸಿ, ಸಮುದಾಯದ ಒಳಿತಿಗಾಗಿ ಪ್ರಾರ್ಥಿಸಲಾಯಿತು. ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಶಿಕ್ಷಣಕ್ಕೂ ಹೆಚ್ಚಿನ ಮಹತ್ವ ನೀಡುವ ಉದ್ದೇಶದಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ದೇವಾಂಗ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ ಎಂದರು.

ದೇವಾಂಗ ಸಂಘದ ಗೌರವಾಧ್ಯಕ್ಷ ಗಿರಿಯಪ್ಪ ಶೆಟ್ಟಿ ಅವರು ಮಾತನಾಡಿ, ತಾಯಿ ಚೌಡೇಶ್ವರಿ ಅಮ್ಮನವರು ಬೇಲೂರಿಗೆ ಆಗಮಿಸಿದ ಸಂದರ್ಭದಲ್ಲಿ ದೇವಸ್ಥಾನವು ಚಿಕ್ಕದಾದ ಅಂಚಿನ ಮನೆಯಲ್ಲಿತ್ತು. ಇಂದು ಸಾವಿರಾರು ಭಕ್ತರು ತಾಯಿಯ ಕೃಪೆಗೆ ಪಾತ್ರರಾಗುವಂತಹ ಪುಣ್ಯಕ್ಷೇತ್ರವಾಗಿ ಬೆಳೆದಿದೆ. ಬೇಲೂರು ತಾಲೂಕಿನಲ್ಲಿ ಅತ್ಯುತ್ತಮ ದೇಗುಲಗಳಲ್ಲಿ ಒಂದಾಗಿ ಚೌಡೇಶ್ವರಿ ಅಮ್ಮನವರ ದೇವಸ್ಥಾನ ಕಂಗೊಳಿಸುತ್ತಿದ್ದು, ಭಕ್ತರ ಶ್ರದ್ಧೆ ಹಾಗೂ ಸಮುದಾಯದ ಸಹಕಾರದಿಂದ ದೇವಾಲಯ ಮತ್ತಷ್ಟು ಅಭಿವೃದ್ಧಿಯಾಗುತ್ತಿದೆ. ಶೀಘ್ರದಲ್ಲೇ ಚೌಡೇಶ್ವರಿ ದೇವಾಂಗ ಭವನ ಲೋಕಾರ್ಪಣೆಗೊಳ್ಳಲಿದ್ದು, ಇದು ಸಮುದಾಯದ ವಿವಿಧ ಚಟುವಟಿಕೆಗಳಿಗೆ ಪ್ರಮುಖ ಕೇಂದ್ರವಾಗಲಿದೆ ಎಂದು ಹೇಳಿದರು.

ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ದೇವಸ್ಥಾನವನ್ನು ವಿವಿಧ ಬಗೆಯ ಹೂವುಗಳಿಂದ ಆಕರ್ಷಕವಾಗಿ ಅಲಂಕರಿಸಲಾಗಿತ್ತು. ವಿಶೇಷ ಪೂಜೆ, ಹೋಮ-ಹವನ ಹಾಗೂ ಧಾರ್ಮಿಕ ವಿಧಿವಿಧಾನಗಳಲ್ಲಿ ನೂರಾರು ಭಕ್ತರು ಪಾಲ್ಗೊಂಡು ತಾಯಿಯ ದರ್ಶನ ಪಡೆದು ಪ್ರಸಾದ ಸ್ವೀಕರಿಸಿ ಸಂಭ್ರಮ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ದೇವಾಂಗ ಸಂಘದ ಮಹಿಳಾ ಭಜನಾ ಮಂಡಳಿ ಸದಸ್ಯರು, ಯುವಕರ ಬಳಗದ ಸದಸ್ಯರು ಹಾಗೂ ಸಮುದಾಯದ ಮುಖಂಡರು, ಮಹಿಳೆಯರು ಮತ್ತು ಭಕ್ತರು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ಸಡಗರದ ವರ ಮಹಾಲಕ್ಷ್ಮಿ ಪೂಜೆ

• ಪ್ರಜೋದಯ ವರದಿ



**ಆಲೂರು:** ಆಷಾಡ ಮಾಸ ಮುಗಿದು ಶ್ರಾವಣ ಮಾಸದ ಎರಡನೆ ಶುಕ್ರವಾರ ಸನಾತನ ಸಂಪ್ರದಾಯದಂತೆ ವರ ಮಹಾಲಕ್ಷ್ಮಿ ಹಬ್ಬದ ಪ್ರಾರಂಭದೊಂದಿಗೆ ಮಹಿಳೆಯರಿಗೆ ಹಬ್ಬಗಳ ಸರಮಾಲೆ ಪ್ರಾರಂಭವಾಗಿದೆ. ಶುಕ್ರವಾರ ವರ ಮಹಾಲಕ್ಷ್ಮಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಿ, ಮುಂಬರುವ ಉಪಾಕರ್ಮ, ಗೌರಿ- ಗಣೇಶ ಹಬ್ಬಗಳಿಗೆ ಸ್ವಾಗತಕ್ಕೆ ಅಡಿ ಇಟ್ಟರು.

ಗುರುವಾರದಿಂದಲೇ ಹಬ್ಬಕ್ಕೆ ಪೂರ್ವ ತಯಾರಿ ನಡೆಸಿದರು. ಮಾರುಕಟ್ಟೆಯಲ್ಲಿ ಹೂ, ಹಣ್ಣು ಇತರೆ ವಸ್ತುಗಳ ಬೆಲೆ ಕಳೆದ ವರ್ಷಕ್ಕೆ ಹೋಲಿಸಿದರೆ ಇಮ್ಮಡಿಯಾಗಿದ್ದರೂ ಲಕ್ಷ್ಮಿ ಪೂಜೆಯನ್ನು ಸಂಭ್ರಮದಿಂದ ಆಚರಿಸಿದರು. ಕೆಲವರು ಪುರೋಹಿತರ ಸಮ್ಮುಖದಲ್ಲಿ ಪೂಜೆ ನೆರವೇರಿಸಿದರು.

ಬೆಳಗಾಗುವ ವೇಳೆಗೆ ಮನೆಯನ್ನು ರಂಗೋಲಿ, ತಳಿರು ತೋರಣಗಳಿಂದ ಶೃಂಗರಿಸಿ ಲಕ್ಷ್ಮಿ ಅವತಾರಕ್ಕೆ ಹೊಸ ಸೀರೆ ತೊಡಿಸಿ ಪೂಜೆ ಸಲ್ಲಿಸಿ ಸಮೇದ ನೈವೇದ್ಯ ಅರ್ಪಿಸಿ ಮಹಾ ಮಂಗಳಾರತಿ ನೆರವೇರಿಸಿದರು. ಹಬ್ಬದ ಊಟ ಸವಿದ ನಂತರ ಸಂಜೆ ತಮ್ಮ ಇಷ್ಟ ಮಿತ್ರ ಮಹಿಳೆಯರನ್ನು ಮನೆಗೆ ಆಹ್ವಾನಿಸಿ ಅರಿಶಿನ, ಕುಂಕುಮ ನೈವೇದ್ಯದೊಂದಿಗೆ ಬಾಗಿನ ಅರ್ಪಿಸಿದರು.

# ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ: ಮಳೆ ಮುನ್ಸೂಚನೆ

• ಪ್ರಜೋದಯ ವರದಿ

**ನವದೆಹಲಿ:** ಚಂಡಮಾರುತ ಪ್ರಸರಣದ ಪ್ರಭಾವದಿಂದ ಭಾರತದ ವಿವಿಧ ಪ್ರದೇಶಗಳಲ್ಲಿ ಮಳೆ ಇರಲಿದೆ ಎಂದು ಭಾರತ ಹವಾಮಾನ ಇಲಾಖೆ (ಐಎಂಡಿ) ಎಚ್ಚರಿಕೆ ನೀಡಿದೆ.

ಚಂಡಮಾರುತ ಪ್ರಸರಣ ಹಾಗೂ ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದ ವಿವಿಧ ಭಾಗಗಳಲ್ಲಿ ಭಾರೀ ಮಳೆ ಮುಂದುವರಿದಿದೆ. ಈಶಾನ್ಯ ಮಧ್ಯಪ್ರದೇಶ ಮತ್ತು ಪಕ್ಕದ ಪ್ರದೇಶಗಳಲ್ಲಿ ಕಂಡುಬರುವ ಕಡಿಮೆ ಒತ್ತಡದ ಪ್ರದೇಶದಿಂದ ಭಾರೀ ಮಳೆ ಮುಂದುವರಿದಿದೆ. ಈ ವ್ಯವಸ್ಥೆಯು ಮಧ್ಯ ಭಾರತದ ಮೇಲೆ ಹವಾಮಾನದ ಮೇಲೆ ಪ್ರಭಾವ ಬೀರುವುದನ್ನು ಮುಂದುವರಿಸುವ ನಿರೀಕ್ಷೆಯಿದೆ. ಅಲ್ಲದೆ ಆ.22 ರಂದು ಪೂರ್ವ ಮಧ್ಯಪ್ರದೇಶದಲ್ಲಿ ಅತಿ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ.

ಆದರೆ ವಾಯುವ್ಯ ಉತ್ತರ ಪ್ರದೇಶ ಮತ್ತು ಈಶಾನ್ಯ ಅಸ್ಸಾಂನ ಮೇಲೆ ಮೇಲ್ಮುಖ ಚಂಡಮಾರುತದ ಪ್ರಸರಣವು ಮಳೆಯನ್ನು ಹೆಚ್ಚಿಸುವ ಸಾಧ್ಯತೆಯಿದೆ. ಆಗಸ್ಟ್ 22ರ ಶನಿವಾರ, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡ, ಪಶ್ಚಿಮ ಉತ್ತರ ಪ್ರದೇಶ ಮತ್ತು ಪಶ್ಚಿಮ ಮಧ್ಯಪ್ರದೇಶದಲ್ಲಿ ಹಾಗೂ ಛತ್ತೀಸ್‌ಗಢ ಸೇರಿದಂತೆ ಮಧ್ಯ ಭಾರತದ ರಾಜ್ಯಗಳಲ್ಲಿ ಭಾರೀ ಮಳೆ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ವರದಿಯು ಮುನ್ಸೂಚನೆ ನೀಡಿದೆ.

ದಕ್ಷಿಣ ಭಾರತದಲ್ಲೂ ಮಳೆ ಆರ್ಭಟವಾಗಲಿದ್ದು, ಈಶಾನ್ಯ ರಾಜ್ಯಗಳಲ್ಲಿ ಭಾರೀ ಮಳೆ ಮುಂದುವರಿದಿದೆ. ಒಡಿಶಾ, ಬಿಹಾರದಲ್ಲೂ ಮಿಂಚು ಗುಡುಗು ಸಹಿತ ಮಳೆ ಆಗಲಿದೆ. ಮಧ್ಯಪ್ರದೇಶ, ಛತ್ತೀಸ್‌ಗಢ ಮತ್ತು ಪಕ್ಕದ ಪೂರ್ವ ರಾಜ್ಯಗಳು ಸೇರಿದಂತೆ ಮಧ್ಯ ಭಾರತದಾದ್ಯಂತ ಮುಂಬರುವ ದಿನಗಳಲ್ಲಿ ತೀವ್ರ ಮಾನ್ಸೂನ್ ಮಳೆ ಆಗಲಿದೆ.

ಇನ್ನು ಕರ್ನಾಟಕ, ಕೇರಳ ಹಾಗೂ ತಮಿಳುನಾಡು ಸೇರಿದಂತೆ ವಿವಿಧ ಪ್ರದೇಗಳಲ್ಲಿಯೂ ಮಳೆ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ. ಭಾರತದಲ್ಲಿ ಮಾನ್ಸೂನ್ ಪ್ರಭಾವ ಭಾರತದ ಮಾನ್ಸೂನ್ ಪ್ರಭಾವ ಕೆಲವೇ ಭಾಗಗಳಲ್ಲಿ ಮುಂದುವರಿಯುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಪೂರ್ವ ದಟ್ಟವಾದ ಮೋಡದ ಸಮೂಹಗಳು ದೇಶದ ಮಧ್ಯ ಮತ್ತು ಪೂರ್ವ ಭಾಗಗಳಲ್ಲಿ ಕೇಂದ್ರೀಕೃತವಾಗಿವೆ. ಆದರೆ ಪಶ್ಚಿಮ, ಉತ್ತರ ಮತ್ತು ದಕ್ಷಿಣ ಭಾರತದ ದೊಡ್ಡ ಪ್ರದೇಶಗಳಲ್ಲಿ ಸೀಮಿತ ಮೋಡದ ವಾತಾವರಣ ಇರುವುದರಿಂದ ಈ ಭಾಗಗಳಲ್ಲಿ ಮಳೆ ಪ್ರಮಾಣ ಮುಂದಿನ ದಿನಗಳಲ್ಲಿ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆಯಲ್ಲಿ ಹೇಳಲಾಗಿದೆ.

## ಆ.24 ರಂದು ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಹಾಸನ ನಗರ ಉಪವಿಭಾಗದ ವ್ಯಾಪ್ತಿಯಲ್ಲಿ ರಿಂಗ್‌ರೋಡ್ ಫೀಡರ್‌ನ ಮಾರ್ಗ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಆ.24 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5:30ರ ವರೆಗೆ ಪಿ ಅಂಡ್ ಟಿ ವಸತಿ ಗೃಹ, ಡೈರಿ ಸರ್ಕಲ್, ರಿಂಗ್ ರಸ್ತೆ, ಕೆ.ಇ.ಬಿ. ಕಚೇರಿ ಹಿಂಭಾಗ, ಆನಂದ ಲಾಯರ್ ಮನೆ ರಸ್ತೆ, ಜುವೆಲ್‌ರ್‍ಯಾಕ್ ಹೋಟೆಲ್, ಶಂಕರಿಪುರಂ, ಶಂಕರಿಮಠ ರಸ್ತೆ, ಕರಿಗೌಡ ಕಾಲೋನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನಿಯಮಿತವಾಗಿ ವಿದ್ಯುತ್ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ನಿಗಮದೊಂದಿಗೆ ಸಹಕರಿಸಬೇಕೆಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವಿಭಾಗದ ಕಾರ್ಯಪಾಲಕ ಅಭಿಯಂತರರು (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಲಯನ್ಸ್ ಸಂಸ್ಥೆಯಿಂದ ವನಮಹೋತ್ಸವ

• ಪ್ರಜೋದಯ ವರದಿ




**ಅರೇಹಳ್ಳಿ:** ಬೇಲೂರು ತಾಲ್ಲೂಕಿನ ಅರೇಹಳ್ಳಿ ಹಾಗು ಲಯನ್ಸ್ ಸಂಸ್ಥೆ ವತಿಯಿಂದ ಕಾನಳ್ಳಿ ಅರಣ್ಯ ದಂಚಿನ ಗ್ರಾಮವಾದ ಶಿರಗೂರು ಎಂಬಲ್ಲಿ ಹಣ್ಣಿನ ಸಸಿಗಳನ್ನು ನೆಡುವ ಮೂಲಕ ವನಮಹೋತ್ಸವ ಆಚರಿಸಲಾಯಿತು.

ಬೇಲೂರು ಲಯನ್ಸ್ ಕಾರ್ಯದರ್ಶಿ ಪೂವಯ್ಯ ಅವರು ಮಾತನಾಡಿ, ಕಾಡಿನಲ್ಲಿ ಹಣ್ಣಿನ ಗಿಡಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗುತ್ತಿರುವ ಪರಿಣಾಮ ಕಾಡಿನಲ್ಲಿ ಇರಬೇಕಾದ ಆನೆ ಸೇರಿ ಇತರ ಪ್ರಾಣಿಗಳು ಆಹಾರ ಅರಸಿ ನಾಡಿಗೆ ಬಂದು ತೊಂದರೆ ನೀಡುತ್ತಿವೆ. ಈ ಹಿನ್ನಲೆಯಲ್ಲಿ ನಮ್ಮ ಸಂಸ್ಥೆಯು ಕಾಡುಪ್ರಾಣಿಗಳಿಗೆ ತಿನ್ನಲು ಅಗತ್ಯವಿರುವ ಹಲಸು, ನೇರಳೆ, ಸೀಬೆ ಸೇರಿ ಸುಮಾರು 300 ಗಿಡಗಳನ್ನು ಮುಖ್ಯ ರಸ್ತೆಯ ಬದಿ ಹಾಗು ಖಾಲಿಯಿರುವ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ನೆಡುವ ಮೂಲಕ ಕಾಡುಪ್ರಾಣಿಗಳಿಗೆ ನೈಸರ್ಗಿಕವಾಗಿ ಆಹಾರವನ್ನು ಪೂರೈಸಲು ಸಾಧ್ಯವಾಗುತ್ತದೆ. ಹೀಗಾಗಿ ವನಮಹೋತ್ಸವದ ಅಂಗವಾಗಿ ಹಣ್ಣಿನ ಗಿಡಗಳನ್ನು ನಾಟಿ ಮಾಡುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ ಎಂದರು.

ಅರೇಹಳ್ಳಿ ಲಯನ್ಸ್ ಸಂಸ್ಥೆ ಅಧ್ಯಕ್ಷ ಸತೀಶ್ ಪೂಜಾರಿ, ಕಾರ್ಯದರ್ಶಿ ಸೌಜನ್ಯ ಪೃಥ್ವಿರಾಜ್, ಪ್ರಾಂತೀಯ ರಾಯಭಾರಿ ರವಿ ಸೋಮಯ್ಯ, ಖಜಾಂಚಿ ಗುರು ಪ್ರಸಾದ್, ಸಹ ಕಾರ್ಯದರ್ಶಿ ಲಲಿತ್, ಬೇಲೂರು ಸಂಸ್ಥೆಯ ಅಧ್ಯಕ್ಷ ಮುಕ್ತರ್ ಅಹಮದ್, ರಶ್ಮಿ ಸೋಮಯ್ಯ, ಪ್ರವೀಣ್, ಬೃಂದನ್, ಸಂತೋಷ್, ಫೆಲಿಕ್ಸ್, ಪೂರ್ಣೇಶ್ ಸೇರಿದಂತೆ ಮತ್ತಿತರರಿದ್ದರು.

## ಆ.27ಕ್ಕೆ ಪೀಕಾರ್ಡ್ ವಾರ್ಷಿಕ ಮಹಾಸಭೆ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕು ಪೀಕಾರ್ಡ್ ಬ್ಯಾಂಕಿನ 2025-26ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಆಗಸ್ಟ್ 27ರ ಗುರುವಾರದಂದು ಬೆಳಗ್ಗೆ 11 ಘಂಟೆಗೆ ಅಯೋಜಿಸಲಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷ ಬಿ.ಎನ್.ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾರ್ಷಿಕ ಮಹಾಸಭೆಯನ್ನು ಬ್ಯಾಂಕ್‌ನ ಮುಂಭಾಗದ ಆವರಣದಲ್ಲಿ ಅಯೋಜಿಸಲಾಗಿದೆ. ಮಹಾಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಕ್ಷೇತ್ರದ ಶಾಸಕ ಸಿ.ಎನ್.ಬಾಲಕೃಷ್ಣ , ವಿಧಾನಪರಿಷತ್ತು ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಮತ್ತು ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ ಭಾಗವಹಿಸಲಿದ್ದಾರೆ.

ಬ್ಯಾಂಕಿನ ಎಲ್ಲ ಷೇರುದಾರ ಸದಸ್ಯರು, ಉಪಾಧ್ಯಕ್ಷರು, ನಿರ್ದೇಶಕರುಗಳು ಮತ್ತು ಮಾಜಿ ಅಧ್ಯಕ್ಷರು, ಮಾಜಿ ನಿರ್ದೇಶಕರು ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ಮಹಿಳೆಯರಿಂದ ಸಂಭ್ರಮದ ವರಲಕ್ಷ್ಮೀ ಹಬ್ಬ ಆಚರಣೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಶ್ರಾವಣ ಮಾಸದ ಎರಡನೇ ಶುಕ್ರವಾರ ಬರುವ ವರಲಕ್ಷ್ಮಿ ಹಬ್ಬ, ವ್ರತ ಹಿಂದೂಗಳ ಪವಿತ್ರ ಹಬ್ಬಗಳಲ್ಲೊಂದು. ಭಕ್ತರು ತಮ್ಮ ಇಷ್ಟಾರ್ಥಗಳ ಸಿದ್ದಿಗಾಗಿ ವರಲಕ್ಷ್ಮಿಯನ್ನು ಪೂಜಿಸುವುದು ವಾಡಿಕೆ, ಆ.21ರ ಶ್ರಾವಣ ಶುಕ್ರವಾರವಾದಂದು ಎಲ್ಲರ ಮನೆಗಳಲ್ಲಿಯೂ ಸಂಭ್ರಮದ ವಾತಾವಾರಣ, ಮುಂಜಾನೆಯೇ ಎದ್ದು, ಮಡಿ ತೊಟ್ಟು, ಮನೆ, ಮನ ಶುಭ್ರತೆಯೊಂದಿಗೆ ತಮ್ಮ ಇಚ್ಚಾನುಸರ ದೇವಿಯನ್ನು ಪ್ರತಿಷ್ಠಾಪಿಸಿ ಪೂಜೆ ನೆರವೇರಿಸಿದರು.

ಹಿಂದೂ ಸಂಪ್ರದಾಯದಲ್ಲಿ ಶ್ರಾವಣ ಮಾಸವೆಂದರೇ ಹಬ್ಬಗಳ ಮಾಸ, ಅದರಲ್ಲೂ ಹೆಣ್ಣು ಮಕ್ಕಳು, ಮಹಿಳೆಯರಿಗಂತೂ ವರಲಕ್ಷ್ಮಿ ಹಬ್ಬ ಹೆಚ್ಚು ಪ್ರಿಯವಾದ ಹಬ್ಬ, ಲಕ್ಷ್ಮಿ ಎಂದರೆ ಶುದ್ಧತೆಯ ಸಂಕೇತವಾಗಿದೆ. ಹೀಗಾಗಿ ಹಬ್ಬದ ದಿನದಂದು ಮುಂಜಾನೆ ಎದ್ದು ಮನೆಯನ್ನು ಶುಚಿಗೊಳಿಸಿ, ರಂಗೋಲಿ, ತಳಿರು ತೋರಣಗಳಿಂದ ಅಲಂಕರಿಸಿ ಸ್ನಾನ ಮಾಡಿ ಶುಭ್ರವಾದ ಬಟ್ಟೆಯನ್ನು ತೊಟ್ಟು ಮಡಿಯಲ್ಲಿ ನೈವೇದ್ಯವನ್ನು ತಯಾರಿಸಲಾಗುತ್ತದೆ.

ಸಣ್ಣ ಉಕ್ಕಿನ, ತಾಮ್ರದ ಬಿಂದಿಗೆ ಅಥವಾ ಬೆಳ್ಳಿ ಚೆಂಬನ್ನು ಕಲಶದ ರೂಪದಲ್ಲಿ ಇಟ್ಟು ಅದರಲ್ಲಿ ನೀರನ್ನು ತುಂಬಿಸಿ ಅದಕ್ಕೆ ಸ್ವಲ್ಪ ಖರ್ಜೂರ ಹಾಗೂ ದ್ರಾಕ್ಷಿಯನ್ನು ಹಾಕಬೇಕು. ಒಂದು ತಟ್ಟೆಯಲ್ಲಿ ಅಕ್ಕಿಯನ್ನು ಹರಡಿ ಅದರಲ್ಲಿ ಕಲಶವನ್ನು ಇಟ್ಟು, ಮಾವಿನ ಎಲೆ ಹಾಗೂ ವೀಳ್ಯದೆಲೆಯನ್ನು ಕಲಶದ ಸುತ್ತ ಜೋಡಿಸಿ ಅದರ ಮೇಲೆ ಅರಿಶಿಣ ಹಚ್ಚಿದ ತೆಂಗಿನಕಾಯಿಯನ್ನು ಇಟ್ಟು ಅದಕ್ಕೆ ಲಕ್ಷ್ಮಿಯ ಮುಖದ ಕವಚ ಧರಿಸಿ, ಹೊಸ ಸೀರೆಯನ್ನು ಉಡಿಸಿ ಅಲಂಕರಿಸುತ್ತಾರೆ. ಜೊತೆ ಒಡವೆಗಳನ್ನು ಹಾಕಿ ಸಿಂಗಾರಗೊಳಿಸುತ್ತಾರೆ.

ಶುಕ್ರವಾರದ ವರಮಹಾಲಕ್ಷ್ಮಿಯನ್ನು ಬ್ರಾಹ್ಮೀ ಲಗ್ನದಲ್ಲಿ ಪ್ರತಿಷ್ಠಾಪನೆ ಮಾಡಬೇಕು, ಇದೇ ಮುಹೂರ್ತದಲ್ಲಿ ಲಕ್ಷ್ಮಿಯನ್ನು ಕೂರಿಸಿ ಪೂಜೆ ಸಲ್ಲಿಸಬೇಕು. ಈ ಮುಹೂರ್ತದಲ್ಲಿ ಲಕ್ಷ್ಮಿಯನ್ನು ಕೂರಿಸಿ ಪೂಜೆ ಮಾಡಿದರೆ ನಮ್ಮ ಪ್ರಾರ್ಥನೆ ದೇವಿಗೆ ತಲುಪಿ, ನಮ್ಮ ಇಷ್ಟಾರ್ಥಗಳನ್ನು ಈಡೇರಿಸುತ್ತಾಳೆ ಎನ್ನುವ ನಂಬಿಕೆಯಿದೆ. ಸಂಜೆ ಅಕ್ಕಪಕ್ಕದ ಮುತ್ತೈದೆಯರನ್ನು ಕರದು ಅರಿಶಿಣ ಕುಂಕಮಕ್ಕೆ ಕರೆದು ಮುಡಿ ತುಂಬಿ ಕಳಿಸಿಕೊಡುತ್ತಾರೆ.

ಹಬ್ಬದ ಹಿನ್ನಲೆ: ಪುರಾಣದಲ್ಲಿ ಚಾರುಮತಿ ಎಂಬಾಕೆ ನಿಸ್ವಾರ್ಥವಾಗಿ ತನ್ನ ಅತ್ತೆ ಮಾವಂದಿರ ಸೇವೆ ಮಾಡುತ್ತಿರುತ್ತಾಳೆ. ಇದನ್ನು ಕಂಡು ಆಕೆಯ ಶ್ರದ್ದೆಗೆ ಒಲಿದ ಲಕ್ಷ್ಮಿಮಾತೆ, ಶ್ರಾವಣ ಮಾಸದ ಹುಣ್ಣಿಮೆಗೂ ಮೊದಲ ಶುಕ್ರವಾರ ನನ್ನನ್ನು ಆರಾಧಿಸು, ನಿನ್ನ ಇಷ್ಟಾರ್ಥಗಳನ್ನು ಪೂರೈಸುತ್ತೇನೆ ಎನ್ನುತ್ತಾಳೆ. ಆ ಕಾರಣದಿಂದ ಚಾರುಮತಿ ಶ್ರಾವಣ ಮಾಸದ ಹುಣ್ಣಿಮೆಗೂ ಮೊದಲ ಶುಕ್ರವಾರ, ಅಂದರೇ ಶ್ರಾವಣ ಮಾಸದ ಎರಡನೇ ಶುಕ್ರವಾರ ವರಮಹಾಲಕ್ಷ್ಮಿಯನ್ನು ಆರಾಧಿಸಿ ತನ್ನ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುತ್ತಾಳೆ, ಈ ನಂಬಿಕೆಯಡಿಯೇ ಇಂದಿನ ಕಾಲದಲ್ಲೂ ಭಕ್ತರು ತಮ್ಮ ಇಷ್ಟಾರ್ಥಗಳ ಪೂರೈಕೆಗಾಗಿ ವರಲಕ್ಷ್ಮಿ ವ್ರತ ಮಾಡುತ್ತಾ ಬಂದಿದ್ದಾರೆ.

ಹಾಗೂ ಲಕ್ಷ್ಮಿಯು ಕ್ಷೀರಸಾಗರದಿಂದ ಅವತಾರ ತಾಳಿದ್ದಾಳೆ ಎನ್ನುವ ಕಥೆಯಿದೆ. ರಾಕ್ಷಸರು ಹಾಗೂ ದೇವತೆಗಳು ಅಮೃತ ಪಡೆಯುವುದಕ್ಕಾಗಿ ವಾಸುಕಿಯ ಸಹಾಯದೊಂದಿಗೆ ಮಂದಾರ ಪರ್ವತವನ್ನು ಕಡೆಯುತ್ತಿರುವಾಗ ಕ್ಷೀರಸಾಗರದಲ್ಲಿ ಪರಿಶುದ್ಧವಾಗಿ ಶ್ವೇತವರ್ಣದಲ್ಲಿ ಲಕ್ಷ್ಮೀ ಉದ್ಭವಿಸುತ್ತಾಳೆ. ಆದ್ದರಿಂದಲೇ ಇಷ್ಟಾರ್ಥಗಳನ್ನು ಪೂರೈಸುವ ಲಕ್ಷ್ಮಿಯ ಆರಾಧನೆಗಾಗಿ ಈ ಹಬ್ಬವಾಗಿದೆ.

# ದಕ್ಷಿಣ ಭಾರತದ ಹಿರಿಯ ನಟಿ ಸಾಹುಕಾರ್ ಜಾನಕಿ ಇನ್ನಿಲ್ಲ

• ಪ್ರಜೋದಯ ವರದಿ



**ಚೆನ್ನೈ:** ಕನ್ನಡ ಸೇರಿದಂತೆ ದಕ್ಷಿಣ ಭಾರತೀಯ ಚಿತ್ರರಂಗದ ಅತ್ಯಂತ ಹಿರಿಯ ಕಲಾವಿದರಲ್ಲಿ ಒಬ್ಬರಾದ ನಟಿ ಸಾಹುಕಾರ್ ಜಾನಕಿ ಅವರು ಶುಕ್ರವಾರ ನಿಧನರಾದರು. ಇವರಿಗೆ 94 ವಯಸ್ಸ ವಯಸ್ಸಾಗಿದ್ದು, ವಯೋ ಸಹಜ ಕಾಯಿಲೇಯಿಂದ ಬಳಲುತ್ತಿದ್ದರು ಎನ್ನಲಾಗಿದೆ.

ನಡಿಗರ್ ಸಂಗಮ್ ಅಧ್ಯಕ್ಷ ನಾಸರ್ ಅವರು ನೀಡಿರುವ ಮಾಹಿತಿ ಪ್ರಕಾರ, ಸೌಕಾರ್ ಜಾನಕಿ ಶುಕ್ರವಾರ ಮಧ್ಯಾಹ್ನ 1.59 ಕ್ಕೆ ಕೊನೆಯುಸಿರೆಳೆದರು. ಅವರ ಪಾರ್ಥಿವ ಶರೀರವನ್ನು ಶುಕ್ರವಾರ ಸಂಜೆ ಚೆನ್ನೈನ ತೆನಾಂಪೇಟೆಯ ಸೆಂಟಾಫ್ ರಸ್ತೆಯಲ್ಲಿನ ಆವರಣದಲ್ಲಿ ಸಂಜೆ 5 ಗಂಟೆ ಇರಿಸಲಾಗಿತ್ತು. ಕಲಾವಿದರು, ಬಂಧು- ಮಿತ್ರರು, ಆಪ್ತರು, ಅಭಿಮಾನಿಗಳ ಅಂತಿಮ ದರ್ಶನಕ್ಕೆ ಅವಕಾಶ ನೀಡಲಾಗಿತ್ತು.

ಚಿತ್ರರಂಗದಲ್ಲಿ ದಶಕಗಳ ಕಾಲ ಸೇವೆ ದಶಕಗಳ ಕಾಲ ಸಿನಿಮಾ ರಂಗದಲ್ಲಿ ಸೇವೆ ನೀಡಿದ ಹಿರಿಯ ಕಲಾವಿದೆ ಸೌಕಾರ್ ಜಾನಕಿ ಅವರು ಕಲೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು. ಅವರ ಸಿನಿಮಾ ವೃತ್ತಿ ಜೀವನವು ಸುದೀರ್ಘವಾಗಿತ್ತು. ಅನೇಕ ಖ್ಯಾತನಾಮರೊಂದಿಗೆ ನಟಿಸಿದ್ದಾರೆ. ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂ ಚಿತ್ರರಂಗಗಳಲ್ಲಿ ಬಣ್ಣ ಹಚ್ಚಿದ ಇವರ ಬಹುಮುಖ ಅಭಿನಯಕ್ಕಾಗಿ ಮನಸೋತವರೇ ಇಲ್ಲ ಎನ್ನುವಂತಾಗಿತ್ತು.

ತಮ್ಮ ನಟನೇ ಮೂಲಕವೇ ಇಡೀ ದಕ್ಷಿಣ ಭಾರತದ ಇಂಡಸ್ಟ್ರಿಗಳಲ್ಲಿ ಮನೆ ಮಾತಾಗಿದ್ದರು. ಅಣ್ಣಾವ್ರ ಶಬ್ದವೇಧಿ ಸೇರಿ ಹಲವು ಸಿನಿಮಾಗಳಲ್ಲಿ ನಟನೆ 1955ರಲ್ಲಿ ತೆಲುಗು ಚಿತ್ರ ಸಾಹುಕಾರ್‌ನಲ್ಲಿ ಅವರ ಅದ್ಭುತ ಪಾತ್ರ ಸಾಕಷ್ಟು ಪ್ರಶಂಸೆಗೆ ಪಾತ್ರವಾಗಿದೆ. ಇದಾಗಿ ಬಳಿಕವೇ ಅವರಿಗೆ ಅವರನ್ನು 'ಸಾಹುಕಾರ್ ಜಾನಕಿ' ಅಂತಲೇ ಕರೆಯಲಾಗುತ್ತಿತ್ತು. ಸ್ಟಾರ್‌ಗಳ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದರು. ಕನ್ನಡದ ಶಬ್ದವೇದಿ ಸಿನಿಮಾದಲ್ಲಿ ಅಣ್ಣಾವ್ರ ತಾಯಿಯ ಪಾತ್ರದಲ್ಲಿ ನಟಿಸಿದ್ದರು. ಇದರೊಂದಿಗೆ ಸದಾರಮೆ, ರತ್ನಗಿರಿ ರಹಸ್ಯ, ತಾಯಿಗೆ ತಕ್ಕ ಸಿನಿಮಾಗಳಲ್ಲೂ ನಟಿಸಿದ್ದಾರೆ. 15ರಲ್ಲೇ ಮದುವೆ, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ನಟಿ ಚಿತ್ರರಂಗಕ್ಕೆ ಬರುವ ಮುನ್ನ ಸೌಕಾರ್ ಜಾನಕಿ ಅವರ ಜೀವನ ಸಾಕಷ್ಟು ಕಷ್ಟಗಳಿಂದ ಕೂಡಿತ್ತು. ಇವರಿಗೆ ಹದಿನೈದನೇ ವಯಸ್ಸಿಗೆ ಮದುವೆ ಮಾಡಲಾಯಿತು. ನಂತರ ವಿಜಯವಾಡದಲ್ಲಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು. ಕಡುಬಡತನದಿಂದ ತತ್ತರಿಸಿದ್ದ ಬಡ ಕುಟುಂಬವನ್ನು ದಡ ಸೇರಿಸಲು ಆಯ್ಕೆ ಮಾಡಿಕೊಂಡಿದ್ದು ಸಿನಿಮಾ ರಂಗ.

ಮದ್ರಾಸ್‌ಗೆ ಆಗಷ್ಟೇ ಬಂದಿದ್ದ ಅವರಿಗೆ ಅಲ್ಲೂ ಒಂದಷ್ಟು ಸವಾಲು ಕಷ್ಟಗಳು ಎದುರಾದವು. ನಿರಂತರ ಪ್ರಯತ್ನಗಳ ಫಲವಾಗಿ ಜೆಮಿನಿ ಸಂಸ್ಥೆಯ 'ಸಾಹುಕಾರ್' ಚಿತ್ರದಲ್ಲಿ ಅವರಿಗೆ ನಟಿಸುವ ಅವಕಾಶ ದೊರೆಯಿತು. ಆ ಚಿತ್ರಕ್ಕೆ ಸಿಕ್ಕ 2,500 ಹಣ ಅವರು ಕುಟುಂಬಕ್ಕೆ ಅಂದು ಬಹುದೊಡ್ಡ ಆಸರೆಯಾಗಿತ್ತು.

# ಜಾಬ್ ಕಾರ್ಡ್ ಮೇಳ: ದಿನಕ್ಕೆ 382 ರೂ. ಕೂಲಿ

## ಕುಟುಂಬಕ್ಕೆ ವರ್ಷದಲ್ಲಿ 125 ದಿನ ಉದ್ಯೋಗಾವಕಾಶ

• ಪ್ರಜೋದಯ ವರದಿ



**ಸಕಲೇಶಪುರ:** ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್‌ಗಾರ್ ಆಂಡ್ ಆಜೀವಿಕ ಮಿಷನ್ (ಗ್ರಾಮೀಣ) ಯೋಜನೆಯಡಿ ನೋಂದಾಯಿತ ಕುಟುಂಬಕ್ಕೆ ವರ್ಷದಲ್ಲಿ 125 ದಿನ ಉದ್ಯೋಗ ಕಲ್ಪಿಸಲಾಗುತ್ತಿದ್ದು, ದಿನಕ್ಕೆ 382 ರೂ. ಕೂಲಿ ನೀಡಲಾಗುತ್ತದೆ ಎಂದು ತಾಲ್ಲೂಕು ಮಾಹಿತಿ, ಶಿಕ್ಷಣ ಹಾಗೂ ಸಂವಹನ ಸಂಯೋಜಕ ರಂಗನಾಥ್ ತಿಳಿಸಿದರು.

ತಾಲ್ಲೂಕಿನ ಹೆತ್ತೂರು ಗ್ರಾಮ ಪಂಚಾಯಿತಿಯಲ್ಲಿ ಆಯೋಜಿಸಿದ್ದ ಜಾಬ್ ಕಾರ್ಡ್ ಮೇಳದಲ್ಲಿ ಮಾತನಾಡಿದ ಅವರು, 18 ವರ್ಷ ಮೇಲ್ಪಟ್ಟ ಯುವಕ-ಯುವತಿಯರು ಸೇರಿದಂತೆ ಅರ್ಹರಿಗೆ ಉದ್ಯೋಗ ಚೀಟಿ ವಿತರಿಸಿ ಸ್ಥಳೀಯವಾಗಿ ಉದ್ಯೋಗಾವಕಾಶ ಕಲ್ಪಿಸಲಾಗುವುದು. ಸೆ.15ರವರೆಗೆ ನೋಂದಣಿಗೆ ಅವಕಾಶವಿದ್ದು, ಅಗತ್ಯ ದಾಖಲೆಗಳೊಂದಿಗೆ ನೋಂದಣಿ ಮಾಡಿಸಿಕೊಳ್ಳುವಂತೆ ಗ್ರಾಮಸ್ಥರಿಗೆ ಮನವಿ ಮಾಡಿದರು.

ಯೋಜನೆಯ ಕುರಿತು ಮನೆಮನೆಗೆ ಭೇಟಿ ನೀಡಿ ಹಾಗೂ ಹಾಲಿನ ಡೇರಿ, ಅರಳಿಕಟ್ಟೆ, ಟೀ ಅಂಗಡಿ, ನ್ಯಾಯಬೆಲೆ ಅಂಗಡಿ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಬ್ಯಾನರ್‌ಗಳು ಮತ್ತು ಕರಪತ್ರಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಕಸದ ಸ್ವಚ್ಛ ವಾಹಿನಿ ಹಾಗೂ ಡಂಗೂರದ ಮೂಲಕವೂ ಮಾಹಿತಿ ನೀಡಲಾಗುತ್ತಿದೆ ಎಂದರು.

ಜಾಬ್ ಕಾರ್ಡ್ ಹೊಂದಿರುವ ಕುಟುಂಬಗಳಿಗೆ ಜಾನುವಾರು ಕೊಟ್ಟಿಗೆ, ಕೋಳಿ, ಹಂದಿ, ಕುರಿಆಡು ಶೆಡ್ ನಿರ್ಮಾಣ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಅವಕಾಶವಿದೆ ಎಂದರು.

ತೋಟಗಾರಿಕೆ, ಕೃಷಿ ಹಾಗೂ ರೇಷ್ಮೆ ಇಲಾಖೆಗಳಡಿ ವಿವಿಧ ಬೆಳೆಗಳ ಅಭಿವೃದ್ಧಿ, ಕೃಷಿ ಹೊಂಡ, ಗೊಬ್ಬರದ ಗುಂಡಿ ಸೇರಿದಂತೆ ಕಾಮಗಾರಿಗಳಿಗೆ ಆರ್ಥಿಕ ನೆರವು ಪಡೆಯಬಹುದಾಗಿದ್ದು, ಒಂದು ನೋಂದಾಯಿತ ಕುಟುಂಬವು ಜೀವಿತಾವಧಿಯಲ್ಲಿ 5 ಲಕ್ಷ ರೂ. ವರೆಗೆ ನೆರವು ಪಡೆಯಬಹುದು. ಈಗಾಗಲೇ ಅನುಮೋದಿತ ವೈಯಕ್ತಿಕ ಕಾಮಗಾರಿಗಳಿಗೆ ಫಲಾನುಭವಿಗಳಿಗೆ ಗ್ರಾಮ ಪಂಚಾಯಿತಿಯಿಂದ ಕಾರ್ಯಾದೇಶದ ಪ್ರತಿಗಳನ್ನು ನೀಡಲಾಗುತ್ತಿದೆ ಎಂದು ಅವರು ತಿಳಿಸಿದರು.

## ಕೃತ್ಯವು ಸಾರ್ವಜನಿಕರ ದೃಷ್ಟಿಯಲ್ಲಿ ನಡೆದರೆ ಮಾತ್ರ ಎಸ್.ಸಿ., ಎಸ್.ಟಿ. ಕಾಯ್ದೆ ಅನ್ವಯ

# ಖಾಸಗಿ ಸ್ಥಳಗಳಲ್ಲಿ ಮಾಡುವ ಜಾತಿ ನಿಂದನೆ ಅಪರಾಧವಲ್ಲ

• ಪ್ರಜೋದಯ ವರದಿ



**ಹೊಸದಿಲ್ಲಿ:** ಸಾರ್ವಜನಿಕರ ಕಣ್ಣಿಗೆ ಕಾಣದ ಅಥವಾ ಖಾಸಗಿ ಸ್ಥಳಗಳಲ್ಲಿ ಮಾಡಲಾಗುವ ಜಾತಿ ನಿಂದನೆಯು 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ'ಯಡಿ ಅಪರಾಧವೆಂದು ಪರಿಗಣಿಸಲು ಬರುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಶಾಲೆ ಒಂದರ ವ್ಯವಸ್ಥಾಪಕರ (ಮ್ಯಾನೇಜರ್) ವಿರುದ್ಧ ದಾಖಲಾಗಿದ್ದ ಪ್ರಕರಣದ ವಿಚಾರಣೆ ನಡೆಸಿದ ಸರ್ವೋಚ್ಚ ನ್ಯಾಯಾಲಯ ಈ ಮಹತ್ವದ ತೀರ್ಪು ನೀಡಿದೆ.

**ಪ್ರಕರಣದ ಹಿನ್ನೆಲೆ ಏನು?**

ಶಾಲೆಯಲ್ಲಿ ವಿದ್ಯಾರ್ಥಿಗಳ ನಡುವೆ ನಡೆದ ಜಗಳದಲ್ಲಿ ತನ್ನ ಮಗ ಗಾಯಗೊಂಡಿದ್ದರಿಂದ, ಜನವರಿ 24, 2020 ರಂದು ವಿದ್ಯಾರ್ಥಿಯ ತಂದೆಯು ಶಾಲೆಯ ಮ್ಯಾನೇಜರ್ ಅವರನ್ನು ಭೇಟಿಯಾಗಲು ಹೋಗಿದ್ದರು. ಈ ವೇಳೆ ಶಾಲಾ ಮ್ಯಾನೇಜರ್ ಮತ್ತು ಇತರೆ ಸಿಬ್ಬಂದಿ ತನ್ನ ಮೇಲೆ ಹಲ್ಲೆ ನಡೆಸಿ, ಜಾತಿ ನಿಂದನೆ ಮಾಡಿದ್ದಾರೆ ಎಂದು ದೂರುದಾರರು ಆರೋಪಿಸಿ ದ್ದರು. ಈ ಸಂಬಂಧ ಮರುದಿನವೇ ದೂರು ದಾಖಲಾಗಿದ್ದು, ಹಲ್ಲೆ, ಅಕ್ರಮ ಬಂಧನ ಮತ್ತು ಉದ್ದೇಶ ಪೂರ್ವಕ ಅವಮಾನ ಹಾಗೂ ಎಸ್. ಸಿ/ಎಸ್.ಟಿ (ದೌರ್ಜನ್ಯ ತಡೆ) ಕಾಯ್ದೆಯ ಸೆಕ್ಷನ್ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಅಲ್ಲದೆ, ಅಲಹಾಬಾದ್ ಹೈಕೋರ್ಟ್ ಈ ಕಾಯ್ದೆಯಡಿ ತನ್ನ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ರದ್ದುಗೊಳಿಸಲು ನಿರಾಕರಿಸಿದ್ದನ್ನು ಪ್ರಶ್ನಿಸಿ ಶಾಲಾ ಮ್ಯಾನೇಜರ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

**ಸುಪ್ರೀಂ ಕೋರ್ಟ್ ಪೀಠದ ಅಭಿಪ್ರಾಯ**

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ನ್ಯಾಯಪೀಠ ಈ ಪ್ರಕರಣದ ವಿಚಾರಣೆ ನಡೆಸಿತು. ಘಟನೆಯು ಶಾಲೆಯ ಒಳಗೆಯಿದ್ದ ಒಂದು ಕೊಠಡಿಯೊಳಗೆ ನಡೆದಿದೆ. ಆ ಕೊಠಡಿಗೆ ಕಿಟಕಿಗಳಿಲ್ಲ, ಸಂಪೂರ್ಣವಾಗಿ ಮುಚ್ಚಲ್ಪಟ್ಟಿದೆ ಮತ್ತು ಅಲ್ಲಿಗೆ ಸಾರ್ವಜನಿಕರಿಗೆ ಪ್ರವೇಶವಿರಲಿಲ್ಲ ಎಂದು ಮ್ಯಾನೇಜರ್ ಪರ ವಕೀಲರು ವಾದಿಸಿದ್ದರು. ಅಲ್ಲದೆ, ಸಾಕ್ಷಿಗಳು ತಾವು ಆ ಕೊಠಡಿಯೊಳಗೆ ಇರಲಿಲ್ಲ ಎಂದು ತಿಳಿಸಿದ್ದರು.

ವಾದ-ಪ್ರತಿವಾದಗಳನ್ನು ಆಲಿಸಿದ ಸುಪ್ರೀಂ ಕೋರ್ಟ್, ಸಾರ್ವಜನಿಕರ ದೃಷ್ಟಿಯಲ್ಲಿ ಎಂದರೆ ಆ ಸ್ಥಳವು ಸಾರ್ವಜನಿಕರಿಗೆ ಮುಕ್ತವಾಗಿರಬೇಕು ಮತ್ತು ಆರೋಪಿಯು ಮಾಡಿದ ನಿಂದನೆಯನ್ನು ಸಾರ್ವಜನಿಕರು ನೋಡಲು ಅಥವಾ ಕೇಳಲು ಸಾಧ್ಯವಿರಬೇಕು ಎಂದಿದೆ. ಒಂದು ವೇಳೆ ಅಪರಾಧ ಕೃತ್ಯವು ನಾಲ್ಕು ಗೋಡೆಗಳ ನಡುವೆ, ಸಾರ್ವಜನಿಕರ ಅನುಪಸ್ಥಿತಿಯಲ್ಲಿ ನಡೆದರೆ, ಅದನ್ನು ಸಾರ್ವಜನಿಕರ ಕಣ್ಣಿಗೆ ಗೋಚರಿಸುವ ಸ್ಥಳದಲ್ಲಿ ನಡೆದಿದೆ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ನ್ಯಾಯಪೀಠ ತಿಳಿಸಿದೆ.

ಅಲ್ಲದೆ, ಎಫ್‌ಐಆರ್‌ನಲ್ಲಿ ಶಾಲಾ ಮ್ಯಾನೇಜರ್ ನಿರ್ದಿಷ್ಟವಾಗಿ ಯಾವ ಜಾತಿ ನಿಂದನೆ ಮಾಡಿದ್ದಾರೆ ಎಂಬುದನ್ನು ಉಲ್ಲೇಖಿಸಿಲ್ಲ. ಪ್ರಾಸಿಕ್ಯೂಷನ್ ನೀಡಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಇಬ್ಬರ ನಡುವೆ ಕೇವಲ ಜಗಳ ಮತ್ತು ಮಾತಿನ ಚಕಮಕಿ ನಡೆದಿರುವುದು ಮೇಲ್ನೋಟಕ್ಕೆ ತಿಳಿದುಬರುತ್ತದೆಯೇ ಹೊರತು, ನಿರ್ದಿಷ್ಟ ಜಾತಿ ನಿಂದನೆ ಮಾಡಿರುವ ಬಗ್ಗೆ ಸ್ಪಷ್ಟತೆ ಇಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

**ನ್ಯಾಯಾಲಯದ ಅಂತಿಮ ಆದೇಶ**

ಅಲ್ಲಾಹಾದ್ ಹೈಕೋರ್ಟ್‌ನ ಆದೇಶವನ್ನು ರದ್ದುಗೊಳಿಸಿದ ಸುಪ್ರೀಂ ಕೋರ್ಟ್, ಶಾಲಾ ಮ್ಯಾನೇಜರ್ ವಿರುದ್ಧ ಎಸ್‌ಸಿ - ಎಸ್‌ಟಿ ಕಾಯ್ದೆಯಡಿ ದಾಖಲಾಗಿದ್ದ ಮೊಕದ್ದಮೆಯನ್ನು ವಜಾಗೊಳಿಸಿದೆ. ಆದರೆ, ಹಲ್ಲೆ ಮತ್ತು ಇತರೆ ಗಂಭೀರ ಆರೋಪಗಳಿಗೆ ಸಂಬಂಧಿಸಿದ ಇತರೆ ಪ್ರಕರಣಗಳ ವಿಚಾರಣೆ ಮುಂದುವರಿಯಲಿದೆ ಎಂದು ಸ್ಪಷ್ಟಪಡಿಸಿದೆ.

# ವಿವಿಧ ಸಾಲ, ಸಹಾಯಧನ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ) ಹಾಸನ ಜಿಲ್ಲೆ ವತಿಯಿಂದ ಜಿಲ್ಲಾದ್ಯಂತ ವಾಸವಿರುವ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಜೈನ್, ಬೌದ್ಧ, ಸಿಖ್ಖ್ ಹಾಗೂ ಪಾರ್ಸಿ ಜನಾಂಗದವರಿಗೆ ವಿವಿಧ ಸಾಲ ಮತ್ತು ಸಹಾಯಧನ ಸೌಲಭ್ಯಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರಿವು (ವಿದ್ಯಾಭ್ಯಾಸ ಸಾಲ) ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಶ್ರಮಶಕ್ತಿ ಯೋಜನೆ, ವೃತ್ತಿ ಪ್ರೋತ್ಸಾಹ ಯೋಜನೆ, ರೇಷ್ಮೆ ನೂಲು ಬಿಚ್ಚಾಣಿಕೆ ಉದ್ಯಮಕ್ಕೆ ಪ್ರೋತ್ಸಾಹ ಯೋಜನೆ, ಗಂಗಾ ಕಲ್ಯಾಣ ಯೋಜನೆ, ನವೋದಯ ಯೋಜನೆ, ಫಾಸ್ಟ್ ಫುಡ್ ಟ್ರಕ್ /ಟೈಲರ್ ಕಿಚನ್ ಫುಡ್ (ಕಿಯೋಸ್ಟ್) ಯೋಜನೆ, ಅಲ್ಪಸಂಖ್ಯಾತರ ಸಮುದಾಯದ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸ್ವಯಂ ಉದ್ಯೋಗ ಪ್ರೋತ್ಸಾಹ ಯೋಜನೆ, ಸಿಖ್ಖ್ ಲಿಗಾರ ಸಮುದಾಯದ ಜನರ ಆರ್ಥಿಕ ಸಬಲೀಕರಣಕ್ಕೆ ಪ್ರೋತ್ಸಾಹ ಯೋಜನೆ, ಸಮುದಾಯ ಆಧಾರಿತ ತರಬೇತಿ ಯೋಜನೆ, ವಿದೇಶಿ ವಿದ್ಯಾಭ್ಯಾಸ ಸಾಲ, ವ್ಯಾಪಾರ/ ಉದ್ದಿಮೆ ನೇರಸಾಲ ಯೋಜನೆ, ಸಾಂತ್ವನ ಯೋಜನೆಗಳಡಿಯಲ್ಲಿ ನಿಗಮದಿಂದ ಸಾಲ ಹಾಗೂ ಸಹಾಯಧನ ಸೌಲಭ್ಯಗಳನ್ನು ನೀಡಲು ಸೆ. 17ರವರೆಗೆ ಆನ್‌ಲೈನ್ Website: kmdconline.karnataka.gov.in ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ಹಾಸನ ಕಚೇರಿ ಹಾಗೂ ದೂ.ಸಂಖ್ಯೆ: 08172-246333 ಯನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

# 500 ಕೆಪಿಎಸ್ ಶಾಲೆ ಅಭಿವೃದ್ಧಿಗೆ 1,750 ಕೋಟಿ

## ಎಡಿಬಿ ಜೊತೆ ಒಪ್ಪಂದಕ್ಕೆ ಡಿ.ಕೆ.ಶಿವಕುಮಾರ್ ಸಹಿ | 2030ರೊಳಗೆ ಶಿಕ್ಷಣ ಕ್ರಾಂತಿಗೆ ಮುನ್ನುಡಿ

• ಪ್ರಜೋದಯ ವರದಿ



**ಬೆಂಗಳೂರು:** ಕರ್ನಾಟಕದ 500 ಕರ್ನಾಟಕ ಪಬ್ಲಿಕ್ ಶಾಲೆಗಳ (ಕೆಪಿಎಸ್) ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ಸಹಯೋಗ ದೊಂದಿಗೆ 1,750 ಕೋಟಿ ರೂ. ಮೊತ್ತದ ಮಹತ್ವಾಕಾಂಕ್ಷಿ ಯೋಜನೆಯ ಒಪ್ಪಂದಕ್ಕೆ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಧಾನಸೌಧದಲ್ಲಿ ಶುಕ್ರವಾರ ಸಹಿ ಹಾಕಿದರು.

ಈ ವೇಳೆ ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್, ಪ್ರಾಥಮಿಕ ಹಾಗು ಪ್ರೌಢಶಾಲೆ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಶ್ಮಿ ಮಹೇಶ್ ಹಾಗು ಎಡಿಬಿ ಉಪ ಕಾರ್ಯದರ್ಶಿ ಸೌರಭ್ ಸಿಂಗ್, ಎಡಿಎ ರಾಷ್ಟ್ರೀಯ ನಿರ್ದೇಶಕಿ ಮಿಯೋ ಓಕಾ, ಪ್ರಧಾನ ಪೋರ್ಟ್‌ಫೋಲಿಯೊ ನಿರ್ವಹಣಾ ತಜ್ಞ ಕೈ ವೇಯ್ ಯಿಯೋ, ಪ್ರಧಾನ ಯೋಜನಾ ಅಧಿಕಾರಿ (ಶಿಕ್ಷಣ) ಪೂನಂ ಎಸ್.ಭಾಂಬ್ರಿ, ಪ್ರಧಾನ ಸಂವಹನ ಅಧಿಕಾರಿ ರಾಜೇಶ್ ಕುಮಾರ್ ಡಿಯೋಲ್, ಕಾರ್ಯನಿರ್ವಾಹಕ ಸಹಾಯಕಿ ಪೂರ್ಣಿಮಾ ಪ್ರಸಾದ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಈ ಯೋಜನೆಯಡಿ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ 1,750 ಕೋಟಿ ರೂ. ನೆರವು ನೀಡಲಿದ್ದು, ಕರ್ನಾಟಕ ಸರ್ಕಾರ 750 ಕೋಟಿ ರೂ. ಭರಿಸಲಿದೆ. ಒಟ್ಟು 2,500 ಕೋಟಿ ಮೊತ್ತದ ಯೋಜನೆ ಇದಾಗಿದೆ. 2026ರಿಂದ 2030ರವರೆಗೆ ಈ ಯೋಜನೆ ಅನುಷ್ಠಾನಗೊಳ್ಳಲಿದೆ. ಪ್ರತಿ ಶಾಲೆಯಲ್ಲಿ ಕನಿಷ್ಠ 1,200 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಗುರಿ ಹೊಂದಲಾಗಿದೆ. ಇದು ಕೇವಲ ಶಾಲೆಗಳ ಅಭಿವೃದ್ಧಿಯ ಯೋಜನೆಯಲ್ಲ, ಮುಂದಿನ 50 ವರ್ಷಗಳ ಕರ್ನಾಟಕದ ಭವಿಷ್ಯ ನಿರ್ಮಿಸುವ ಯೋಜನೆ ಇದಾಗಿದೆ.

**ಕೆಪಿಎಸ್ ಶಾಲೆಗಳ ಅಭಿವೃದ್ಧಿಗೆ ಒತ್ತು**

ಕೆಪಿಎಸ್ ಶಾಲೆಗಳಲ್ಲಿ ಎಲ್‌ಕೆಜಿಯಿಂದ 12ನೇ ತರಗತಿವರೆಗೆ ಒಂದೇ ಆವರಣದಲ್ಲಿ ಉಚಿತ ಹಾಗು ಗುಣಮಟ್ಟದ ಶಿಕ್ಷಣ ಒದಗಿಸುವ ಗುರಿ ಹೊಂದಲಾಗಿದೆ. ಇದರ ಭಾಗವಾಗಿ ವಿದ್ಯಾರ್ಥಿಗಳಿಗೆ ಉಚಿತ ಸಾರಿಗೆ, ದ್ವಿಭಾಷಾ ಬೋಧನೆ, ಕಂಪ್ಯೂಟರ್ ಹಾಗು ಕೃತಕ ಬುದ್ಧಿಮತ್ತೆ (ಎಐ) ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ವೃತ್ತಿಪರ ಮಾರ್ಗದರ್ಶನಕ್ಕೆ ಆದ್ಯತೆ, ಸಂಗೀತ, ಸಾಹಿತ್ಯ ಮತ್ತು ಕ್ರೀಡೆಯಲ್ಲಿ ಪ್ರತಿಭೆ ಬೆಳೆಸುವುದು, ಪಠ್ಯೇತರ ಚಟುವಟಿಕೆಗಳಿಗೆ ಉತ್ತೇಜನ ನೀಡು ವುದು ಹಾಗು ವಿದ್ಯಾರ್ಥಿಗಳ ನಿರಂತರ ಪ್ರಗತಿ ಮೇಲ್ವಿಚಾರಣೆಗೆ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಪ್ರತಿ ಎರಡು ತಿಂಗಳಿಗೊಮ್ಮೆ ಪೋಷಕರ ಸಭೆ ನಡೆಸುವ ಮೂಲಕ ಶಾಲೆ ಪೋಷಕರ ಸಂಪರ್ಕ ಬಲಪಡಿಸುವಿಕೆ. 6ನೇ ತರಗತಿಯಿಂದಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಹಾಗು ವೃತ್ತಿಪರ ಮಾರ್ಗದರ್ಶನ ನೀಡಲು ಯೋಜಿಸಲಾಗಿದೆ.

ಶಿಕ್ಷಕರ ಸಾಮರ್ಥ್ಯ ವೃದ್ಧಿಗೆ ವಿಶೇಷ ಕಾರ್ಯ ಯೋಜನೆ ರೂಪಿಸುವುದರ ಜೊತೆಗೆ 10 ಮತ್ತು 12ನೇ ತರಗತಿ ಪರೀಕ್ಷೆಗಳ ಫಲಿತಾಂಶ ಸುಧಾರಣೆಗೆ ವಿಶೇಷ ಗಮನ ನೀಡಲಾಗುತ್ತದೆ.

### ಗ್ರಾಮೀಣ ಮಕ್ಕಳಿಗೆ ಜಾಗತಿಕ ಅವಕಾಶ

21ನೇ ಶತಮಾನದ ಕೌಶಲ್ಯಗಳನ್ನು ಶಿಕ್ಷಣದ ಭಾಗವನ್ನಾಗಿ ಮಾಡಿ, ಗ್ರಾಮೀಣ ಭಾಗದ ಮಕ್ಕಳು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸುವ ಸಾಮರ್ಥ್ಯ ಹೊಂದುವಂತೆ ರೂಪಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಡಿಜಿಟಲ್ ಕಲಿಕೆ, ಕೌಶಲ್ಯಾಭಿವೃದ್ಧಿ, ವೃತ್ತಿ ಮಾರ್ಗ ದರ್ಶನ ಹಾಗು ಉತ್ತಮ ಶೈಕ್ಷಣಿಕ ಫಲಿತಾಂಶಗಳಿಗೆ ಒತ್ತು ನೀಡಲಾಗುತ್ತದೆ.

# ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್‌ಗೆ ವೈದ್ಯಕೀಯ ಪರೀಕ್ಷೆ

• ಪ್ರಜೋದಯ ವರದಿ

**ಇಸ್ಲಾಮಾಬಾದ್:** ಮಾಜಿ ಪ್ರಧಾನಿ ಇಮ್ರಾನ್ ಖಾನ್ (73) ಅವರನ್ನು ಪಾಕಿಸ್ತಾನ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ಖಾಸಗಿ ಆಸ್ಪತ್ರೆಯ ವೈದ್ಯರೂ ಸ್ಥಳದಲ್ಲಿ ಇದ್ದರು ಎಂದು ಸರ್ಕಾರ ತಿಳಿಸಿದೆ.

ವೈದ್ಯಕೀಯ ಪರೀಕ್ಷೆ ಬಳಿಕ ಇಮ್ರಾನ್ ಅವರನ್ನು ರಾವಲ್ಪಿಂಡಿಯ ಅಡಿಯಾಲಾ ಜೈಲಿಗೆ ಕರೆದೊಯ್ಯಲಾಯಿತು. ಇಮ್ರಾನ್ ಅವರು ಲೆವೆಲ್ 3ಪ್ಲಸ್ ಆ್ಯಂಕ್ಸೈಟಿ (ತೀವ್ರ ಆತಂಕಕ್ಕೆ ಒಳಗಾಗುವ) ಸಮಸ್ಯೆಯಿಂದ ಬಳಲುತ್ತಿದ್ದಾರೆಂಬ ವೈದ್ಯಕೀಯ ವರದಿಗಳನ್ನು ಸಲ್ಲಿಸಿದ ಬಳಿಕ, ಅವರನ್ನು ಎರಡು ದಿನಗಳ ಒಳಗಾಗಿ ಆಸ್ಪತ್ರೆಗೆ ಕರೆದೊಯ್ಯುವಂತೆ ಸುಪ್ರೀಂ ಕೋರ್ಟ್ ಈಚೆಗೆ ಆದೇಶಿಸಿತ್ತು.

ಮಾರ್ಗ ಮಧ್ಯದಲ್ಲಿ ಮತ್ತು ಶಿಫಾ ಆಸ್ಪತ್ರೆಯಲ್ಲಿ ಪಿಟಿಐ ಪಕ್ಷದ ಕಾರ್ಯಕರ್ತರು ಭದ್ರತೆಗೆ ಬೆದರಿಕೆ ಯನ್ನುಂಟು ಮಾಡುವ ಪರಿಸ್ಥಿತಿ ಸೃಷ್ಟಿಸಿದ್ದರಿಂದ ಇಮ್ರಾನ್ ಅವರನ್ನು ಸರ್ಕಾರಿ ಆಸ್ಪತ್ರೆಗೆ ಕರೆದೊ ಯ್ಯಲಾಯಿತು. ಅವರು ಆರೋಗ್ಯವಾಗಿ ಇದ್ದಾರೆ ಎಂದು ವೈದ್ಯಕೀಯ ಪರೀಕ್ಷೆಯಲ್ಲಿ ತಿಳಿದು ಬಂದಿದೆ. ಇಮ್ರಾನ್‌ಗೆ ವೈದ್ಯಕೀಯ ನೆರವು ನೀಡುವುದನ್ನು ಸರ್ಕಾರ ಮುಂದುವರಿಸುತ್ತದೆಂದು ಮಾಹಿತಿ ಸಚಿವರು ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.



# ಉರ್ದು ಶಿಕ್ಷಕರ ನೇಮಕಕ್ಕೆ ಆದ್ಯತೆ ನೀಡಲು ಆಗ್ರಹ



• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರ ಇತ್ತೀಚೆಗೆ ಪ್ರಕಟಿಸಿರುವ 15 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಯಲ್ಲಿ ಉರ್ದು ಮಾಧ್ಯಮ ಶಾಲೆಗಳ ಖಾಲಿ ಹುದ್ದೆಗಳನ್ನು ಸಮರ್ಪಕವಾಗಿ ಸೇರಿಸಿಲ್ಲ ಎಂದು ಆರೋಪಿಸಿರುವ ವಿವಿಧ ಮುಸ್ಲಿಂ ಸಂಘಟನೆಗಳು ಹಾಗು ಉರ್ದು ಅಭಿಮಾನಿಗಳ ಬಳಗದಿಂದ ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕೂಡಲೇ ಪೂರಕ ಅಧಿಸೂಚನೆ ಹೊರಡಿಸಿ ಎಲ್ಲಾ ಅರ್ಹ ಉರ್ದು ಶಿಕ್ಷಕರ ಹುದ್ದೆಗಳನ್ನು ನೇಮಕಾತಿಗೆ ಸೇರ್ಪಡೆಗೊಳಿಸುವಂತೆ ಆಗ್ರಹಿಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು. ಈ ವೇಳೆ ಅತೀಖುರ್ ರೆಹಮಾನ್ ಅವರು ಮಾತನಾಡಿ, ಉರ್ದು ಮಾಧ್ಯಮ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿಂದ ವಿದ್ಯಾರ್ಥಿಗಳ ಶಿಕ್ಷಣದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಖಾಲಿ ಹುದ್ದೆಗಳನ್ನು ನೇಮಕಾತಿ ಪ್ರಕ್ರಿಯೆಗೆ ಸೇರಿಸದಿರುವುದು ವಿದ್ಯಾರ್ಥಿಗಳ ಜೊತೆಗೆ ಅರ್ಹ ಉರ್ದು ಶಿಕ್ಷಕ ಅಭ್ಯರ್ಥಿಗಳಿಗೂ ಅನ್ಯಾಯವಾಗಲಿದೆ ಎಂದರು.

ಜಿಲ್ಲೆಯಲ್ಲಿ 95 ಸರ್ಕಾರಿ ಉರ್ದು ಮಾಧ್ಯಮ ಶಾಲೆಗಳು, ಎರಡು ಅನುದಾನಿತ ಹಾಗು 24 ಖಾಸಗಿ ಶಾಲೆಗಳಿವೆ. 13 ಪ್ರೌಢಶಾಲೆಗಳಲ್ಲಿ ಉರ್ದು ಪ್ರಥಮ ಭಾಷೆಯಾಗಿ ಬೋಧಿಸ ಲಾಗುತ್ತಿದೆ. 11 ಪಿಯುಸಿ ಹಾಗೂ ಮೂರು ಪದವಿ ಕಾಲೇಜುಗಳಲ್ಲಿಯೂ ಉರ್ದು ಶಿಕ್ಷಣ ವ್ಯವಸ್ಥೆಯಿದೆ. ಸುಮಾರು 1,500 ವಿದ್ಯಾರ್ಥಿಗಳು ಉರ್ದು ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿದ್ದು, 200 ರಷ್ಟು ಉರ್ದು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆಂದು ತಿಳಿಸಿದರು.

ಜಿಲ್ಲೆಯಲ್ಲಿ 13 ಪ್ರಾಥಮಿಕ ಶಾಲಾ ಶಿಕ್ಷಕರು, 26 ಪದವೀಧರ ಪ್ರಾಥಮಿಕ ಶಿಕ್ಷಕರು ಹಾಗು 10 ಪ್ರೌಢಶಾಲಾ ಶಿಕ್ಷಕರು ಸೇರಿ ಒಟ್ಟು 49 ಉರ್ದು ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಅವು ಗಳನ್ನು ಭರ್ತಿ ಮಾಡದಿರುವುದರಿಂದ ಹಲವು ಶಾಲೆಗಳಲ್ಲಿ ಪಾಠ-ಪ್ರವಚನಕ್ಕೆ ತೊಂದರೆಯಾಗು ತ್ತಿದ್ದು, ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಮೇಲೂ ಹೆಚ್ಚುವರಿ ಹೊರೆ ಬೀಳುತ್ತಿದೆಂದು ಹೇಳಿದರು.

ಉರ್ದು ಮಾಧ್ಯಮದಲ್ಲಿ ಬೋಧನೆಗೆ ಅಗತ್ಯ ಅರ್ಹತೆ ಹೊಂದಿರುವ ಡಿ.ಇಡಿ, ಬಿ.ಇಡಿ ಪದವೀಧರರು ನೇಮಕಾತಿಗಾಗಿ ಕಾಯುತ್ತಿದ್ದಾರೆ. ಆದ್ದರಿಂದ ಪ್ರಸ್ತುತ ನಡೆಯುತ್ತಿರುವ ನೇಮಕಾತಿ ಪ್ರಕ್ರಿಯೆಗೆ ಎಲ್ಲಾ ಅರ್ಹ ಉರ್ದು ಶಿಕ್ಷಕರ ಖಾಲಿ ಹುದ್ದೆಗಳನ್ನು ಸೇರಿಸಿ ಪೂರಕ ಅಧಿ ಸೂಚನೆ ಹೊರಡಿಸಬೇಕು. ಖಾಲಿ ಹುದ್ದೆಗಳ ಕುರಿತು ಸಮಗ್ರ ಸಮೀಕ್ಷೆ ನಡೆಸಿ, ಅರ್ಹ ಅಭ್ಯರ್ಥಿಗಳಿಗೆ ನ್ಯಾಯಯುತ ಅವಕಾಶ ಕಲ್ಪಿಸಬೇಕೆಂದು ಆಗ್ರಹಿಸಿದರು.

ಉರ್ದು ಶಾಲೆಗಳ ಹಳೆ ವಿದ್ಯಾರ್ಥಿಗಳ ಸಂಘಟನೆಗಳ ಮುಖಂಡರಾದ ಸಯ್ಯದ್ ತಾಜ್, ಹೆಚ್.ಆರ್.ಮಾಜಿದ್, ಬಷೀರ್ ಅಹಮದ್, ಸಯ್ಯದ್ ಫರೀದ್, ಇಲ್ಯಾಸ್ ಬೇಗ್, ಮೊಹಮ್ಮದ್ ಇಸಾಖ್, ಮೊಹಮ್ಮದ್ ಆಲಿ, ಅಮ್ಜದ್ ಖಾನ್, ಶಬ್ಬೀರ್ ಅಹಮದ್, ಬಾಬು ಉಪಸ್ಥಿತರಿದ್ದರು.

# ಗ್ರಾ.ಪಂ. ಮೀಸಲಾತಿ ಪ್ರಕಟ: ಗರಿಗೆದರಿದ ಚಟುವಟಿಕೆ

» ಮೊದಲನೇ ಪುಟದಿಂದ

ಮೀಸಲಾತಿ ಪ್ರಕಟವಾಗುತ್ತಿದ್ದಂತೆ ಯಾವ ಕ್ಷೇತ್ರದಲ್ಲಿ ಯಾವ ವರ್ಗಕ್ಕೆ ಅವಕಾಶ ದೊರೆತಿದೆ ಎಂಬ ಲೆಕ್ಕಾಚಾರ ಆರಂಭ ವಾಗಿದ್ದು, ಹಲವು ತಿಂಗಳಿಂದ ಚುನಾ ವಣೆಗೆ ಸಿದ್ಧತೆ ನಡೆಸುತ್ತಿದ್ದ ಆಕಾಂಕ್ಷಿ ಗಳಲ್ಲಿ ಕೆಲವರಿಗೆ ಮೀಸಲಾತಿ ಹೊಸ ಅವಕಾಶ ನೀಡಿದ್ದರೆ, ಕೆಲವರಿಗೆ ಮುಂದಿನ ಕ್ಷೇತ್ರ ಹುಡುಕುವ ಅನಿವಾರ್ಯತೆ ಎದುರಾಗಿದೆ.

**ಮೀಸಲಾತಿಯೇ ರಾಜಕೀಯ ಲೆಕ್ಕಾಚಾರ**

ಗ್ರಾಮ ಪಂಚಾಯಿತಿ ಚುನಾವಣೆ ಪಕ್ಷದ ಚಿಹ್ನೆಯಡಿ ನಡೆಯದಿದ್ದರೂ ಸ್ಥಳೀಯ ರಾಜಕೀಯದಲ್ಲಿ ಪಕ್ಷಗಳ ಪ್ರಭಾವ ಗಣನೀಯವಾಗಿದೆ. ಗ್ರಾಮ ಮಟ್ಟದಲ್ಲಿ ಅಭ್ಯರ್ಥಿಗಳ ಆಯ್ಕೆ, ಬೆಂಬಲಿಗರ ಒಗ್ಗೂಡಿಸುವಿಕೆ ಹಾಗು ಮೀಸಲಾತಿಗೆ ಅನುಗುಣವಾಗಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಕುರಿತು ರಾಜಕೀಯ ಪಕ್ಷಗಳ ಸ್ಥಳೀಯ ಮುಖಂಡರು ಚರ್ಚೆ ಆರಂಭಿಸಿದ್ದಾರೆ.

ಮೀಸಲಾತಿ ಪ್ರಕಟವಾದ ಬಳಿಕ ಕೆಲ ಗ್ರಾಮಗಳಲ್ಲಿ ಈಗಾಗಲೇ ಸಂಭವನೀಯ ಅಭ್ಯರ್ಥಿಗಳ ಹೆಸರುಗಳು ಚರ್ಚೆಗೆ ಬಂದಿವೆ. ಒಂದೇ ಕ್ಷೇತ್ರದಲ್ಲಿ ಸ್ಪರ್ಧಿಸಲು ಉತ್ಸುಕರಾಗಿದ್ದ ಆಕಾಂಕ್ಷಿಗಳ ನಡುವೆ ಪೈಪೋಟಿ ಹೆಚ್ಚಾಗುವ ಸಾಧ್ಯತೆಯಿದ್ದು, ಮೀಸಲಾತಿ ಬದಲಾಗಿರುವ ಕ್ಷೇತ್ರಗಳಲ್ಲಿ ಹೊಸ ಮುಖಗಳಿಗೆ ಅವಕಾಶ ಸಿಗುವ ನಿರೀಕ್ಷೆಯೂ ಇದೆ.

ರಾಜ್ಯದ 5,698 ಗ್ರಾಮ ಪಂಚಾಯಿತಿಗಳಿಗೆ 2020ರ ಡಿಸೆಂಬರ್‌ನಲ್ಲಿ ಚುನಾವಣೆ ನಡೆದಿತ್ತು. ನಂತರ 2021-22ರಲ್ಲಿ ಅಧ್ಯಕ್ಷ ಹಾಗು ಉಪಾಧ್ಯಕ್ಷರ ಚುನಾವಣೆ ನಡೆದಿತ್ತು. ಈ ಹಿನ್ನಲೆ ಜಿಲ್ಲೆಯ ಬಹುತೇಕ ಗ್ರಾಮ ಪಂಚಾಯಿತಿಗಳ ಚುನಾಯಿತ ಸದಸ್ಯರ ಅಧಿಕಾರಾವಧಿ ಜನವರಿ, ಫೆಬ್ರವರಿಯಲ್ಲೇ ಪೂರ್ಣಗೊಂಡಿದೆ. ಅಧಿಕಾರಾವಧಿ ಮುಗಿದು ಸುಮಾರು ಏಳು ತಿಂಗಳು ಕಳೆದಿರುವುದರಿಂದ ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆಸುವ ಪ್ರಕ್ರಿಯೆ ತ್ವರಿತಗೊಳ್ಳಬೇಕೆಂಬ ಒತ್ತಡವೂ ಹೆಚ್ಚಿತ್ತು.

**ನ್ಯಾಯಾಲಯದ ನಿರ್ದೇಶನ**

ಚುನಾವಣೆ ವಿಳಂಬವಾಗುತ್ತಿರುವ ಹಿನ್ನಲೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹೈಕೋರ್ಟ್ ಮೆಟ್ಟಿಲೇರಿತ್ತು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ, ಸ್ಥಳೀಯ ಸಂಸ್ಥೆಗಳ ಚುನಾವಣೆ ಪ್ರಕ್ರಿಯೆಯನ್ನು ವಿಳಂಬ ಮಾಡದೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿತ್ತು. ಅದರ ಬೆನ್ನಲ್ಲೇ ಕ್ಷೇತ್ರವಾರು ಮೀಸಲಾತಿ ಪ್ರಕಟವಾಗಿರುವುದು ಚುನಾವಣಾ ಪ್ರಕ್ರಿಯೆ ಮುಂದುವರಿಯುವ ನಿರೀಕ್ಷೆಯನ್ನು ಮೂಡಿಸಿದೆ.

# ಜಿಲ್ಲಾದ್ಯಂತ ಸಡಗರದ ವರಮಹಾಲಕ್ಷ್ಮಿ ಹಬ್ಬ



• ಪ್ರಜೋದಯ ವರದಿ

**ಹಾಸನ:** ಬೇಡಿದ್ದನ್ನು ಕರುಣಿಸುವ ದೇವಿ ಎಂದೇ ಪ್ರತೀತಿ ಹೊಂದಿರುವ ವರಮಹಾಲಕ್ಷ್ಮಿ ಹಬ್ಬವನ್ನು ನಗರ ಸೇರಿ ಜಿಲ್ಲಾದ್ಯಂತ ಶುಕ್ರವಾರ ಸಂಭ್ರಮದಿಂದ ಆಚರಿಸಲಾಯಿತು.

ಮನೆಗಳಲ್ಲಿ ಲಕ್ಷ್ಮೀದೇವಿಯ ಪ್ರತಿಷ್ಠಾಪಿಸಿ ವಿಶೇಷ ಪೂಜೆ ಸಲ್ಲಿಸಿದರೆ ದೇವಾಲಯಗಳಲ್ಲೂ ಪೂಜಾ ಕೈಂಕರ್ಯ ನೆರವೇರಿದವು. ವಿಶೇಷ ಅಲಂಕಾರ, ಪೂಜೆ, ಭಜನೆ ಹಾಗು ನೈವೇದ್ಯ ಸಮರ್ಪಿಸಿ ಇಷ್ಟಾರ್ಥ ಸಿದ್ಧಿಗಾಗಿ ಸಾರ್ವಜನಿಕರು ಪ್ರಾರ್ಥಿಸಿದರು.

ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಸಾಕಷ್ಟು ತಯಾರಿ ಮಾಡಿಕೊಂಡಿದ್ದ ಮಹಿಳೆಯರು ಲಕ್ಷ್ಮೀದೇವಿಯ ಮುಖವಾಡಕ್ಕೆ ಸೀರೆ ಉಡಿಸಿ, ಆಭರಣಗಳಿಂದ ಶೃಂಗರಿಸಿ, ಹೂವುಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಿದರು. ವಿವಿಧ ಬಗೆಯ ಸಿಹಿ-ತಿನಿಸುಗಳನ್ನು ನೈವೇದ್ಯವಾಗಿ ಸಮರ್ಪಿಸಲಾಯಿತು. ಪೂಜೆಯ ಬಳಿಕ ಮುತ್ತೈದೆಯರಿಗೆ ಕುಂಕುಮ, ಅರಿಶಿಣ ಹಾಗು ತಾಂಬೂಲ ನೀಡಲಾಯಿತು.

# ಬೀದಿನಾಯಿ ಸಾವಿಗೆ ಅನುಮಾನ: ಮರಣೋತ್ತರ ಪರೀಕ್ಷೆ

• ಪ್ರಜೋದಯ ವರದಿ



**ಅರಕಲಗೂಡು:** ಆರೋಗ್ಯವಾಗಿಯೇ ಇದ್ದ ಬೀದಿನಾಯಿ ಅನುಮಾನಾಸ್ಪದವಾಗಿ ಮೃತಪಟ್ಟಿರುವ ಹಿನ್ನಲೆ ಸಾವಿನ ನಿಖರ ಕಾರಣ ತಿಳಿಯಲು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಮರಣೋತ್ತರ ಪರೀಕ್ಷೆ ನಡೆಸಿರುವ ಅಪರೂಪದ ಪ್ರಕರಣ ತಾಲ್ಲೂಕಿನ ಮುತ್ತುಗದ ಹೊಸೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದಲ್ಲಿ ಸುಮಾರು ಆರು ವರ್ಷಗಳಿಂದ ಇದ್ದ ಬೀದಿನಾಯಿ, ಗ್ರಾಮದ ವಕೀಲ ಎಂ.ಕೆ.ಶಿವಕುಮಾರ್ ಅವರ ಮನೆಯ ಸುತ್ತಮುತ್ತ ಇರುತ್ತಿತ್ತು. ಆ.10 ರಂದು ಸಂಜೆ 4.30ರ ಸುಮಾರಿಗೆ ಗ್ರಾಮದ ರಾಮೇಗೌಡ ಎಂಬು ವವರ ಮನೆಯ ಮುಂದೆ ನಾಯಿ ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿತ್ತು.

ಆರೋಗ್ಯವಾಗಿಯೇ ಇದ್ದ ನಾಯಿ ಏಕಾಏಕಿ ಮೃತಪಟ್ಟಿರುವುದರಿಂದ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ವಕೀಲ ಶಿವಕುಮಾರ್ ಅವರು, ಅಂದು ತುರ್ತು ಸಹಾಯವಾಣಿ 112ಕ್ಕೆ ಕರೆ ಮಾಡಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಿಶೀಲನೆ ನಡೆಸಿದ್ದಾರೆ.

ನಂತರ ನಾಯಿಯ ಸಾವಿನ ನಿಖರ ಕಾರಣ ತಿಳಿಯಲು ಮರಣೋತ್ತರ ಪರೀಕ್ಷೆ ನಡೆಸುವಂತೆ ಕೊಣನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಅದರ ಆಧಾರದ ಮೇಲೆ ಪೊಲೀಸರು ಆ.11ರಂದು ಬೆಳವಾಡಿ ಗ್ರಾಮದ ಪಶು ವೈದ್ಯಾಧಿಕಾರಿಗೆ ಮರ ಣೋತ್ತರ ಪರೀಕ್ಷೆ ನಡೆಸುವಂತೆ ಪತ್ರ ಬರೆದಿದ್ದರು.

ಪಶು ವೈದ್ಯಾಧಿಕಾರಿ ಸಂಜೀವ್ ಅವರು ಅಂದೇ ನಾಯಿಯ ಮರಣೋತ್ತರ ಪರೀಕ್ಷೆ ನಡೆಸಿದ್ದು, ಪರೀಕ್ಷೆಯ ವೇಳೆ ಸಂಗ್ರಹಿಸಿದ ಒಂಭತ್ತು ಮಾದರಿಗಳನ್ನು ಹೆಚ್ಚಿನ ಪರೀಕ್ಷೆಗಾಗಿ ಮೈಸೂರಿನ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ನಾಯಿಯ ಸಾವಿಗೆ ನಿಖರ ಕಾರಣ ತಿಳಿಯಲು ವಿಧಿವಿಜ್ಞಾನ ಪ್ರಯೋಗಾಲಯದ ವರದಿಗಾಗಿ ಕಾಯುತ್ತಿರುವುದಾಗಿ ವಕೀಲ ಶಿವಕುಮಾರ್ ಅವರು ತಿಳಿಸಿದ್ದಾರೆ.

# ಬರಗೂರಿನಲ್ಲಿ ಸಂಚಾರ ನಿಯಮ ಅರಿವು ಕಾರ್ಯಕ್ರಮ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ಬರಗೂರು ಗ್ರಾಮದಲ್ಲಿ ಭಾರತೀಯ ರೆಡ್‌ಕ್ರಾಸ್, ಪುನರ್ಜೀವ ಸ್ವಯಂ ಸೇವಾ ಸಂಘ ಹಾಗು ಸಂಚಾರ ಪೊಲೀಸ್ ಠಾಣೆಯಿಂದ ರಸ್ತೆ ಸುರಕ್ಷತೆ ಹಾಗು ಸಂಚಾರಿ ನಿಯಮಗಳ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಚಾರ ಠಾಣೆ ಪಿಎಸ್‌ಐ ಚರಣ್ ಗೌಡ ಅವರು ಮಾತನಾಡಿ, ರಸ್ತೆ ನಿಯಮ ಪಾಲಿಸುವುದು ಪ್ರತಿಯೊಬ್ಬರ ಜವಾಬ್ದಾರಿ. ಅವಸರದ ಚಾಲನೆ ಅಪಾಯಕ್ಕೆ ಆಹ್ವಾನ ನೀಡುತ್ತದೆ. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಹಾಗು ಕಾರು ಚಾಲಕರು ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯ ಎಂದರು.

ರೆಡ್‌ಕ್ರಾಸ್ ಸಂಸ್ಥೆಯ ತಾಲ್ಲೂಕು ಪ್ರತಿನಿಧಿ ಹೆಚ್.ಜಿ.ಭರತ್ ಕುಮಾರ್ ಅವರು ಮಾತನಾಡಿ, ಯುವಕರು ಕಾನೂನು ಪಾಲನೆಗೆ ಆದ್ಯತೆ ನೀಡಬೇಕು. ಆಧುನಿಕತೆ ಬೆಳೆದಂತೆ ಮನುಷ್ಯನ ಯೋಚನಾ ಲಹರಿಯೂ ಬದಲಾಗುತ್ತಿದೆ. ಸಾಮಾಜಿಕ ಜಾಲತಾಣಗಳು ನಮ್ಮನ್ನು ನಿಷ್ಕ್ರಿಯರ ನ್ನಾಗಿಸುತ್ತಿವೆ. ಸಾಧಕ-ಬಾಧಕಗಳ ಅರಿಯುವುದು ಇಂದಿನ ಅಗತ್ಯವಾಗಿದೆ ಎಂದರು.

ಗ್ರಾಮದ ಗಂಗಾಧರ್ ಅವರು ಮಾತನಾಡಿ, ಶರೀರವಿದ್ದರೆ ಹೇಗಾದರೂ ಬದುಕಬಹುದು. ವಾಹನ ಚಲಾಯಿಸುವಾಗ ಎಚ್ಚರಿಕೆ ವಹಿಸಬೇಕೆಂದರು. ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ ಉಚಿತ ಪ್ರಾಥಮಿಕ ಚಿಕಿತ್ಸಾ ಕಿಟ್ ವಿತರಿಸಲಾಯಿತು.

# ಆಟೋ ಪಲ್ಟಿ: ಯುವತಿ ಸಾವು

• ಪ್ರಜೋದಯ ವರದಿ

**ಹಾಸನ:** ಚಾಲಕನ ನಿರ್ಲಕ್ಷ್ಯದಿಂದ ಆಟೋ ಡಿವೈಡರ್‌ಗೆ ಡಿಕ್ಕಿಯಾಗಿ ಯುವತಿ ಮೃತ ಪಟ್ಟಿರುವ ಘಟನೆ ತಾಲ್ಲೂಕಿನ ಬಸ್ತಿಹಳ್ಳಿ-ಹೊಸಹಳ್ಳಿ ಮಾರ್ಗದಲ್ಲಿ ನಡೆದಿದೆ.

ಹೊಸಲೈನ್ ರಸ್ತೆಯ ನಿವಾಸಿ ಎಂ.ಎನ್.ಅನಿಲ್ ಅವರ ಪುತ್ರಿ ಸಂಜು ಮೃತರು. ಸ್ನೇಹಿತೆಯ ಭೇಟಿಯಾಗಲೆಂದು ಗುರುವಾರ ಮೊಸಳೆಹೊಸಹಳ್ಳಿಗೆ ತೆರಳಿದ್ದ ಅವರು ವಾಪಾಸ್ ಆಟೋದಲ್ಲಿ ಬರುತ್ತಿದ್ದಾಗ ಚಾಲಕನ ನಿರ್ಲಕ್ಷ್ಯದಿಂದ ಡಿವೈಡರ್‌ಗೆ ಡಿಕ್ಕಿಯಾಗಿ ಪಲ್ಟಿಯಾಗಿದೆ. ಗಂಭೀರ ಗಾಯಗೊಂಡಿದ್ದ ಯುವತಿಯನ್ನು ಹಿಮ್ಸ್‌ಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಮೃತ ಪಟ್ಟಿದ್ದಾರೆ. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ದೇವಾಲಯದಲ್ಲಿ ಆಭರಣ ಕಳವು

• ಪ್ರಜೋದಯ ವರದಿ

**ಅರಸೀಕೆರೆ:** ವರಮಹಾಲಕ್ಷ್ಮಿ ಹಬ್ಬದ ಹಿನ್ನಲೆಯಲ್ಲಿ ದೇವರಿಗೆ ಅಲಂಕಾರ ಮಾಡಿದ್ದನ್ನು ದುರುಪಯೋಗಪಡಿಸಿಕೊಂಡ ಕಳ್ಳರು ತಡರಾತ್ರಿ ಒಳನುಗ್ಗಿ 10 ಗ್ರಾಂ ಚಿನ್ನಾಭರಣ, 150 ಗ್ರಾಂ ತೂಕದ ಬೆಳ್ಳಿ ಆಭರಣ ಹಾಗು ಹುಂಡಿ ಹಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ನರೆಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ಎನ್.ನಟರಾಜ ಅವರು ಗುರುವಾರ ಯಲ್ಲಮ್ಮ ದೇವಿಗೆ ವಿಶೇಷ ಅಲಂಕಾರ ಮಾಡಿ ಅರ್ಚಕ ಯೋಗೇಶ್ ಅವರು ಪೂಜೆ ಮುಗಿಸಿದ ಬಳಿಕ ಬೀಗ ಹಾಕಿ ತೆರಳಿದ್ದರು. ಬೆಳಿಗ್ಗೆ ಬಂದು ನೋಡಿದಾಗ ದೇಗುಲದ ಬಾಗಿಲು ಮುರಿದಿರುವುದು ಗೊತ್ತಾಗಿದೆ. ದೇವರ ಮೂರ್ತಿಗೆ ಹಾಕಿದ್ದ 2 ಬೆಳ್ಳಿ ಛತ್ರಿ, 2 ಬೆಳ್ಳಿ ಮುಖವಾಡ, 2 ನಾಗ ಆಭರಣ, 2 ಜೊತೆ ಬಂಗಾರದ ಓಲೆ, 2 ಮೂಗು ನತ್ತು, 2 ಚಿನ್ನದ ತಾಳಿ ಹಾಗು ಹುಂಡಿ ಹಣ ಕಳವು ಮಾಡಲಾಗಿದೆ. ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಗ್ರಾಮಸ್ಥರಲ್ಲಿ ಅರಿವು ಮೂಡಿಸಲು ಪ್ರಚಾರ ಅಭಿಯಾನ

# ವಿಬಿಜಿ-ರಾಮ್-ಜಿ ಯೋಜನೆ: ಜಾಬ್ ಕಾರ್ಡ್ ಮೇಳ

• ಪ್ರಜೋದಯ ವರದಿ



**ಕೊಣನೂರು:** ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗ ಹಾಗು ವೈಯಕ್ತಿಕ ಮತ್ತು ಸಮುದಾಯ ಕಾಮಗಾರಿಗಳ ಸೌಲಭ್ಯ ಕಲ್ಪಿಸುವ ವಿಬಿಜಿ-ರಾಮ್-ಜಿ (ಗ್ರಾಮೀಣ) ಯೋಜನೆಯ ಕುರಿತು ಗ್ರಾಮಸ್ಥರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಕೊಣನೂರು ಗ್ರಾಮ ಪಂಚಾಯಿತಿ ವತಿಯಿಂದ ಜಾಬ್‌ಕಾರ್ಡ್ ಮೇಳ ಹಾಗು ಪ್ರಚಾರ ಅಭಿಯಾನ ನಡೆಯಿತು.

ಮೇಳದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದಿವಾಕರ್ ಅವರು ಮಾತನಾಡಿ, ಯೋಜನೆಯಡಿ ಗ್ರಾಮಸ್ಥರು ಕೈಗೊಳ್ಳ ಬಹುದಾದ ವಿವಿಧ ವೈಯಕ್ತಿಕ ಕಾಮ ಗಾರಿಗಳ ಕುರಿತು ಮಾಹಿತಿ ನೀಡಿದರು. ದನದ ಕೊಟ್ಟಿಗೆ, ಕುರಿ ಹಾಗು ಹಂದಿ ಶೆಡ್, ಕೋಳಿ ಶೆಡ್, ಎರೆಹುಳು ಘಟಕ, ತೆರೆದ ಬಾವಿ, ಕೊಳವೆಬಾವಿ ಮರುಪೂರಣ ಗುಂಡಿ, ಇಂಗು ಗುಂಡಿ ಸೇರಿ ವಿವಿಧ ಕಾಮಗಾರಿಗಳಿಗೆ ಯೋಜನೆಯಡಿ ಸೌಲಭ್ಯ ಪಡೆಯಬಹುದು. ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ನಿರ್ಮಿಸಲಾಗುವ ಮನೆಗಳಿಗೂ ಈ ಯೋಜನೆಯಡಿ ಸೌಲಭ್ಯ ಕಲ್ಪಿಸಲಾಗುವು ದೆಂದು ತಿಳಿಸಿದರು.

ಐಇಸಿ ಸಂಯೋಜಕ ಬಿ.ಎನ್. ಮಂಜುನಾಥ ಅವರು ಮಾತನಾಡಿ, ರಸ್ತೆ, ಚರಂಡಿ, ಬೂದು ನೀರು ನಿರ್ವಹಣೆ, ಸಮುದಾಯ ಇಂಗು ಗುಂಡಿ, ಸಮುದಾಯ ಕೊಳವೆಬಾವಿ ಮರುಪೂರಣ ಗುಂಡಿ, ಶೌಚಾಲಯ ನಿರ್ವಹಣಾ ಕಾಮಗಾರಿ ಹಾಗೂ ಚೆಕ್‌ಡ್ಯಾಂ ಸೇರಿ ಹಲವು ಸಮುದಾಯ ಕಾಮಗಾರಿಗಳನ್ನು ಯೋಜನೆಯಡಿ ಕೈಗೊಳ್ಳಲು ಅವಕಾಶವಿದೆ ಎಂದು ವಿವರಿಸಿದರು.

ಯೋಜನೆಯಡಿ ಪುರುಷರು ಹಾಗೂ ಮಹಿಳೆಯರಿಗೆ ಸಮಾನವಾಗಿ ದಿನಕ್ಕೆ 382 ಕೂಲಿ ದೊರೆಯಲಿದೆ. ಕೂಲಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ 15 ದಿನಗಳೊಳಗೆ ಉದ್ಯೋಗ ಒದಗಿಸುವ ವ್ಯವಸ್ಥೆಯಿದ್ದು, ಒಂದು ಕುಟುಂಬಕ್ಕೆ ಆರ್ಥಿಕ ವರ್ಷದಲ್ಲಿ ಗರಿಷ್ಠ 125 ದಿನಗಳ ಉದ್ಯೋಗ ಕಲ್ಪಿಸಲಾಗುತ್ತದೆ. ಈ ಮೂಲಕ ಕುಟುಂಬವೊಂದು ಗರಿಷ್ಠ 47,750 ಕೂಲಿ ಪಡೆಯಲು ಅವಕಾಶವಿದೆ. ಒಂದು ಕುಟುಂಬಕ್ಕೆ ಗರಿಷ್ಠ 5 ಲಕ್ಷದವರೆಗೆ ವೈಯಕ್ತಿಕ ಸೌಲಭ್ಯ ಪಡೆಯಲು ಅವಕಾಶವಿದೆ ಎಂದು ತಿಳಿಸಿದರು.

ಗ್ರಾಮಸ್ಥರು ಯೋಜನೆಯ ಸೌಲಭ್ಯಗಳ ಕುರಿತು ಮಾಹಿತಿ ಪಡೆದು, ಅರ್ಹತೆ ಹೊಂದಿರು ವವರು ಜಾಬ್ ಕಾರ್ಡ್ ಪಡೆದು ಯೋಜನೆಯ ಸದುಪಯೋಗ ಪಡಿಸಿಕೊಳ್ಳಬೇಕೆಂದು ಅಧಿಕಾರಿಗಳು ಮನವಿ ಮಾಡಿದರು.

# ಗಿಡಗಂಟಿಗಳಿಂದ ಮುಚ್ಚಿದ ವಿದ್ಯುತ್ ಪರಿವರ್ತಕ

• ಪ್ರಜೋದಯ ವರದಿ



**ಬೇಲೂರು:** ಪಟ್ಟಣದ ಶ್ರೀ ಚನ್ನಕೇಶವಸ್ವಾಮಿ ದೇವಾಲಯ ಹಿಂಭಾಗದ ಪಾರ್ಕಿಂಗ್‌ನ ವಿದ್ಯುತ್ ಪರಿವರ್ತಕ ಸಂಪೂರ್ಣ ಗಿಡಗಂಟಿಗಳಿಂದ ಮುಚ್ಚಿ ಹೋಗಿದ್ದು ಅನಾಹುತ ಸಂಭವಿಸುವ ಮೊದಲು ತೆರವುಗೊಳಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ವಿಶ್ವ ವಿಖ್ಯಾತ ಪ್ರವಾಸಿ ತಾಣವಾದ ಪಟ್ಟಣದ ಶ್ರೀ ಚನ್ನಕೇಶವಸ್ವಾಮಿ ದೇಗುಲಕ್ಕೆ ನಿತ್ಯ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ನೂರಾರು ವಾಹನಗಳು ಇಲ್ಲಿ ನಿಲುಗಡೆಯಾಗುತ್ತವೆ. ಜನನಿಬಿಡ ಪ್ರದೇಶದಲ್ಲಿರುವ ವಿದ್ಯುತ್ ಟ್ರಾನ್ಸ್ ಫಾರ್ಮರ್ ಸುತ್ತಲೂ ಗಿಡಗಂಟಿ ಹಾಗು ಬಳ್ಳಿಗಳು ದಟ್ಟವಾಗಿ ಆವರಿಸಿರುವುದರಿಂದ ವಿದ್ಯುತ್ ಉಪಕರಣಗಳು ಸ್ಪಷ್ಟವಾಗಿ ಕಾಣದಂತಾಗಿದೆ. ತುರ್ತು ಸಂದರ್ಭ ನಿರ್ವಹಣಾ ಕಾರ್ಯ ಕೈಗೊಳ್ಳಲು ಇದು ತೊಂದರೆ ಯಾಗುವ ಸಾಧ್ಯತೆ ಇದೆ.

ಅದರಲ್ಲೂ ಟ್ರಾನ್ಸ್‌ಫಾರ್ಮರ್ ಪಕ್ಕದಲ್ಲೇ ಪ್ರವಾಸಿಗರು ವಾಹನಗಳನ್ನು ನಿಲ್ಲಿಸುವುದರಿಂದ ವಿದ್ಯುತ್ ಅವಘಡ ಸಂಭವಿಸಿದರೆ ಯಾರು ಹೊಣೆ ಎಂಬ ಪ್ರಶ್ನೆ ಕಾಡುತ್ತಿದೆ. ಮಳೆಗಾಲದಲ್ಲಿ ಗಿಡಗಂಟಿಗಳು ಮತ್ತಷ್ಟು ವೇಗವಾಗಿ ಬೆಳೆಯುತ್ತಿದ್ದು, ಅವು ವಿದ್ಯುತ್ ತಂತಿಗಳಿಗೆ ತಾಗುವ ಸಾಧ್ಯತೆಯೂ ಇದೆ.

ಅದರಿಂದ ಶಾರ್ಟ್ ಸರ್ಕ್ಯೂಟ್, ಬೆಂಕಿ ಅವಘಡ ಸೇರಿ ವಿವಿಧ ರೀತಿಯ ಅಪಾಯಗಳು ಸಂಭವಿಸಬಹುದಾಗಿರುವುದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಕೂಡಲೇ ಗಿಡಗಂಟಿ ತೆರವುಗೊಳಿಸಬೇಕಾಗಿದೆ. ದೇವಾಲಯಕ್ಕೆ ಆಗಮಿಸುವ ಪ್ರವಾಸಿಗರ ಸುರಕ್ಷತೆಗೆ ಆದ್ಯತೆ ನೀಡ ಬೇಕಾಗಿದೆ. ಸಾರ್ವಜನಿಕರು ಹಾಗು ವಾಹನಗಳ ಸಂಚಾರ ಹೆಚ್ಚಿರುವ ಪ್ರದೇಶದಲ್ಲಿ ಇಂತಹ ಅಪಾಯಕಾರಿ ಪರಿಸ್ಥಿತಿ ಮುಂದುವರಿಯಲು ಅವಕಾಶ ನೀಡದೆ ಸೆಸ್ಕಾಂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಟ್ರಾನ್ಸ್‌ಫಾರ್ಮರ್ ಸುತ್ತ ಬೆಳೆದಿರುವ ಗಿಡಗಂಟಿ ತೆರವುಗೊಳಿಸಿ ಸುರಕ್ಷತಾ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

# ನೆರವಿನ ಹೆಸರಲ್ಲಿ ಕೋಟ್ಯಾಂತರ ರೂ. ಪಂಗನಾಮ

» ಮೊದಲನೇ ಪುಟದಿಂದ

ಜನರನ್ನು ಪರಿಚಯ ಮಾಡಿಕೊಂಡು ಸುಂದರ ಸುಳ್ಳು ಕಥೆ ಹೆಣೆದು ಎಲ್ಲರನ್ನೂ ನಂಬಿಸಿದ್ದ. ಸ್ಥಳೀಯರ ವಿಶ್ವಾಸ ಗಳಿಸಿದ ಆತ ವಾರಕ್ಕೊಮ್ಮೆ ಹಳ್ಳಿಗಳಿಗೆ ಭೇಟಿ ನೀಡುತ್ತಿದ್ದ. ಆರಂಭದಲ್ಲಿ ಕೆಲವರಿಗೆ ಚಿಕ್ಕದಾಗಿ ಆರ್ಥಿಕ ಸಹಾಯವನ್ನೂ ಮಾಡಿದ್ದ. ಆತನ ಮೋಸ ದಾಟಕ್ಕೆ ಬಲಿಯಾದ ಹೋಬಳಿಯ ಸುಮಾರು 150 ರೈತರು ಹಣ ಹೂಡಿಕೆ ಮಾಡಿದ್ದಾರೆ.

ಶಂಕರಪ್ಪನ ಕಳ್ಳಾಟದ ಕುರಿತು ರೈತರು ಹೇಳಿಕೊಂಡಿದ್ದು, ಈ ವ್ಯಕ್ತಿ ನಮಗೆ ಎಂದೂ ಪರಿಚಯ ಇರಲಿಲ್ಲ. ದ್ಯಾಪನಹಳ್ಳಿ ಸೋಮಣ್ಣ ಮುಖಾಂತರ ಪರಿಚಯವಾಗಿದ್ದ. ಒಬ್ಬೊಬ್ಬರಿಗೆ ಕನಿಷ್ಠ 2 ರಿಂದ 5 ಲ.ರೂ. ಪಂಗನಾಮ ಇಟ್ಟಿದ್ದಾನೆ. ಆತನಿಗೆ ಹಣ ಹೊಂದಿಸಲು ಆಭರಣ, ಜಮೀನು ಅಡ ಇಟ್ಟಿದ್ದೇವೆ. ಸಾಲ ತೀರಿಸ ಲಾಗದೆ ಅನೇಕರು ಊರು ತೊರೆದಿದ್ದಾರೆಂದರು.

ಮತ್ತೊಬ್ಬ ರೈತ ನಂದಕುಮಾರ್ ಅವರು ಮಾತನಾಡಿ, ಲಾಭದಾಸೆಯಿಂದ ನಮ್ಮ ತಂದೆ ಈತನಿಗೆ 15 ಲ. ರೂ. ನೀಡಿದ್ದರು. ಬಳಿಕ ಮೋಸ ಹೋಗಿದ್ದೇನೆಂದು ಗೊತ್ತಾಗಿ ಅದೇ ಕೊರಗಿನಲ್ಲೇ ಪ್ರಾಣ ಬಿಟ್ಟರು ಎಂದು ಅಳಲು ತೋಡಿಕೊಂಡರು.

# ಸುಧಾರಿತ ರಾಗಿ ತಳಿಗಳ ಪರಿಚಯ ಕಾರ್ಯಕ್ರಮ



• ಪ್ರಜೋದಯ ವರದಿ

**ಹಾಸನ:** ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬಿಎಸ್ಸಿ ಅಂತಿಮ ವರ್ಷದ ಕೃಷಿ ವಿದ್ಯಾರ್ಥಿಗಳು ಚನ್ನರಾಯಪಟ್ಟಣ ತಾಲ್ಲೂಕಿನ ಚೌಡೇನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಸುಧಾರಿತ ರಾಗಿ ತಳಿಗಳ ಪರಿಚಯ ಕಾರ್ಯಕ್ರಮ ನಡೆಸಿಕೊಟ್ಟರು.

ಉತ್ತಮ ಇಳುವರಿ ಪಡೆಯಲು ಸುಧಾರಿತ ತಳಿಗಳ ಆಯ್ಕೆ, ರೋಗ-ಕೀಟ ನಿರೋಧಕತೆ, ಬರ ಸಹಿಷ್ಣುತೆ ಹಾಗು ಬೆಳೆ ಅವಧಿಯ ಕುರಿತು ವೈಜ್ಞಾನಿಕ ಮಾಹಿತಿ ಒದಗಿಸಲಾಯಿತು.

ಮೊದಲು ವಿವಿಧ ಸುಧಾರಿತ ರಾಗಿ ತಳಿಗಳ ಮಾಹಿತಿಯನ್ನು ಸಂಗ್ರಹಿಸಿ, ತಳಿಯ ಹೆಸರು, ಬೆಳೆ ಅವಧಿ, ಕಾಳಿನ ಬಣ್ಣ ಹಾಗು ಪ್ರಮುಖ ವಿಶೇಷ ಗುಣ ಲಕ್ಷಣಗಳನ್ನು ಒಳಗೊಂಡ ಮಾಹಿತಿ ಯುಕ್ತ ಪಟ್ಟಿ ಸಿದ್ಧಪಡಿಸಲಾಯಿತು. ಬಳಿಕ ರಾಗಿ ತಳಿಗಳ ಕುರಿತು ರೈತರಿಗೆ ಅರಿವು ಮೂಡಿಸಲಾಯಿತು.

ಕೆಲವು ಸುಧಾರಿತ ರಾಗಿ ತಳಿಗಳು ಬೆಂಕಿ ರೋಗ, ಬೇರು ಕೊಳೆ ರೋಗ ಮುಂತಾದ ರೋಗಗಳಿಗೆ ಹಾಗು ಬೇರು ಗಿಡಹೇನು, ಕಾಂಡ ಕೊರೆಯುವ ಹುಳು ಮತ್ತು ಮಿಡತೆ ಮುಂತಾದ ಕೀಟಗಳಿಗೆ ನಿರೋಧಕ ಅಥವಾ ಸಹಿಷ್ಣು ಗುಣಗಳನ್ನು ಹೊಂದಿರುವುದನ್ನು ರೈತರಿಗೆ ತಿಳಿಸಲಾಯಿತು. ಕೆಲವು ತಳಿಗಳು ಬರ ಪರಿ ಸ್ಥಿತಿಯನ್ನು ಸಹಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದು, ಕಾಳು ಉದುರುವಿಕೆ ಕಡಿಮೆ ಇರುವಂತಹ ಗುಣಗಳನ್ನು ಹೊಂದಿವೆ. ಸ್ಥಳೀಯ ಮಣ್ಣು, ಹವಾಮಾನ ಹಾಗು ಕೃಷಿ ಪರಿಸ್ಥಿತಿಗೆ ಅನುಗುಣವಾಗಿ ಸೂಕ್ತ ರಾಗಿ ತಳಿಯನ್ನು ಆಯ್ಕೆ ಮಾಡಿಕೊಳ್ಳುವ ಮಹತ್ವವನ್ನು ಮನವರಿಕೆ ಮಾಡಿಕೊಡಲಾಯಿತು.

## ಅಪಾಯಕಾರಿ ಸಾಹಸ ಮಾಡಿದರೆ ಕಠಿಣ ಕ್ರಮ: ಡಿವೈಎಸ್‌ಪಿ ಗೋಪಿ ಎಚ್ಚರಿಕೆ

# ಈದ್ ಮಿಲಾದ್ ಮೆರವಣಿಗೆ: ಶಾಂತಿ ಕಾಪಾಡಲು ಸೂಚನೆ

• ಪ್ರಜೋದಯ ವರದಿ




**ಬೇಲೂರು:** ಈದ್ ಮಿಲಾದ್ ಅಂಗವಾಗಿ ನಡೆಯುವ ಮೆರವಣಿಗೆಯನ್ನು ಶಾಂತಿ, ಸುವ್ಯವಸ್ಥೆ ಹಾಗು ಶಿಸ್ತಿನಿಂದ ನಡೆಸಬೇಕು. ಮೆರವಣಿಗೆ ವೇಳೆ ಬಾಯಲ್ಲಿ ಸೀಮೆಎಣ್ಣೆ ಹಾಕಿಕೊಂಡು ಬೆಂಕಿ ಹಚ್ಚುವಂತಹ ಅಪಾಯಕಾರಿ ಸಾಹಸಗಳಿಗೆ ಮುಂದಾಗಿ ಅನಾಹುತ ಸೃಷ್ಟಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಅರಸೀಕೆರೆ ಡಿವೈಎಸ್‌ಪಿ ಗೋಪಿ ಅವರು ಎಚ್ಚರಿಸಿದರು.

ಪಟ್ಟಣದ ನೆಹರುನಗರ ಪೊಲೀಸ್ ಠಾಣೆ ಆವರಣದಲ್ಲಿ ಈದ್ ಮಿಲಾದ್ ಹಿನ್ನಲೆ ಪೊಲೀಸ್ ಇಲಾಖೆ ಆಯೋಜಿಸಿದ್ದ ಶಾಂತಿ ಸಭೆಯಲ್ಲಿ ಅವರು ಮಾತನಾಡಿ, ಈದ್ ಮಿಲಾದ್ ಮುಸ್ಲಿಂ ಸಮುದಾಯಕ್ಕೆ ಪವಿತ್ರ ಹಾಗು ಅರ್ಥಪೂರ್ಣ ಹಬ್ಬ. ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಜನ್ಮದಿನದ ಸ್ಮರಣಾರ್ಥ ಆಚರಿಸಲಾಗುವ ಈ ಹಬ್ಬವು ಸಮಾಜಕ್ಕೆ ಶಾಂತಿ, ಪ್ರೀತಿ ಹಾಗು ಸಹೋದರತ್ವದ ಸಂದೇಶ ಸಾರುವಂತಾಗಬೇಕೆಂದು ಹೇಳಿದರು.

ಮೆರವಣಿಗೆ ವೇಳೆ ಪೊಲೀಸ್ ಇಲಾಖೆ ನೀಡುವ ಮಾರ್ಗಸೂಚಿಗಳನ್ನು ಪ್ರತಿಯೊಬ್ಬರೂ ಕಡ್ಡಾಯವಾಗಿ ಪಾಲಿಸಬೇಕು. ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಸಮುದಾಯದ ಮುಖಂಡರು ಹಾಗೂ ಯುವಕರು ಸ್ವಯಂಪ್ರೇರಿತರಾಗಿ ಪೊಲೀಸರೊಂದಿಗೆ ಸಹಕರಿಸಬೇಕು. ಮೆರವಣಿಗೆಯ ಚಲನವಲನದ ಮೇಲೆ ನಿಗಾ ಇರಿಸಲು ಡ್ರೋನ್ ಸೇರಿ ಆಧುನಿಕ ತಂತ್ರಜ್ಞಾನ ಹಾಗೂ ವಿಡಿಯೋ ದಾಖಲಾತಿ ವ್ಯವಸ್ಥೆ ಬಳಸಲಾಗುವುದು. ಆದ್ದರಿಂದ ಮೆರವಣಿಗೆಯಲ್ಲಿ ಭಾಗವಹಿಸುವವರು ಅಪಾಯಕಾರಿ ಸಾಹಸ, ಅಶಿಸ್ತಿನ ವರ್ತನೆ ಅಥವಾ ಕಾನೂನುಬಾಹಿರ ಚಟುವಟಿಕೆಗಳಿಗೆ ಮುಂದಾಗಬಾರದೆಂದು ಸೂಚಿಸಿದರು.

ಬೇಲೂರು ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕ ರೇವಣ್ಣ ಮಾತನಾಡಿ, ಈದ್ ಮಿಲಾದ್ ಜಗತ್ತಿಗೆ ಶಾಂತಿಯ ಸಂದೇಶ ಸಾರುವ ಪವಿತ್ರ ಸಂದರ್ಭವಾಗಿದೆ. ಹಬ್ಬವನ್ನು ಶಾಂತಿ, ಪ್ರೀತಿ ಹಾಗೂ ಸಹೋದರತ್ವದ ವಾತಾವರಣದಲ್ಲಿ ಆಚರಿಸಬೇಕು. ಯಾವುದೇ ಅವಘಡಗಳಿಗೆ ಅವಕಾಶ ನೀಡಬಾರದು. ಕಾನೂನು ಉಲ್ಲಂಘಿಸಿ ಪ್ರಕರಣ ದಾಖಲಾದರೆ ಮುಂದಿನ ದಿನಗಳಲ್ಲಿ ಪಾಸ್‌ಪೋರ್ಟ್ ಸೇರಿ ವಿವಿಧ ಸರ್ಕಾರಿ ದಾಖಲೆಗಳು ಹಾಗೂ ಸೇವೆಗಳನ್ನು ಪಡೆಯುವ ಸಂದರ್ಭದಲ್ಲಿ ತೊಂದರೆ ಎದುರಾಗುವ ಸಾಧ್ಯತೆ ಇದೆ. ಯುವಕರು ಕ್ಷಣಿಕ ಉತ್ಸಾಹಕ್ಕೆ ಒಳಗಾಗದೆ ಜವಾಬ್ದಾರಿಯಿಂದ ವರ್ತಿಸಿ, ಮೆರವಣಿಗೆ ಶಾಂತಿಯುತವಾಗಿ ಸಾಗಲು ಸಹಕರಿಸಬೇಕೆಂದು ಮನವಿ ಮಾಡಿದರು.

ಮುಖಂಡ ಮೋಹನ್ ಕುಮಾರ್ ಮಾತನಾಡಿ, ಬೇಲೂರು ಶಾಂತಿ ಹಾಗು ಸೌಹಾರ್ದತೆಗೆ ಹೆಸರಾದ ಪಟ್ಟಣ. ಇಲ್ಲಿ ನಡೆಯುವ ಹನುಮ ಜಯಂತಿ, ಗಣೇಶೋತ್ಸವ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ನಡೆಯುತ್ತಿವೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಮುಸ್ಲಿಮರು ಸಹಕಾರ ನೀಡುತ್ತಿರುವುದು ಸೌಹಾರ್ದತೆಯ ಉತ್ತಮ ನಿದರ್ಶನವಾಗಿದೆ. ಈದ್ ಮಿಲಾದ್ ಸಂದರ್ಭದಲ್ಲಿಯೂ ಇತರೆ ಸಮುದಾಯಗಳು ಸಹಕಾರ ನೀಡಲಿವೆ. ಯುವಕರು ಶಾಂತಿ ಹಾಗೂ ಸಂಯಮದಿಂದ ವರ್ತಿಸಿ ಹಬ್ಬದ ಗೌರವ ಹೆಚ್ಚಿಸಬೇಕು ಎಂದರು.

ಪುರಸಭೆ ಅಧ್ಯಕ್ಷ ಅಕ್ರಮ್ ಶರೀಫ್, ಪುರಸಭಾ ಸದಸ್ಯ ಜಮಾಲುದ್ದೀನ್, ಪಿಎಸ್‌ಐ ಶಿವಾನಂದ ಪಾಟೀಲ್, ಕರವೇ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ, ಮುಖಂಡರಾದ ಅಬ್ದುಲ್ ಖಾದರ್ ಸೇರಿ ಪೊಲೀಸ್ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK